# ಸುವಾರ್ತಾ ಸಂದರ್ಶನ

ಜುಲೈ 2012

Vol. XLVIII No. 4



## ಐ.ಇ.ಎಂ.ನ ನಾಯಕ ವೃಂದ

**ಐ.ಇ.ಎಂ. ಮಂಡಲಿಯ ಅಧ್ಯಕ್ಷರು**
ರೆವ. ಡಾ|| ಕೆ.ಟಿ. ಕುರಿಯನ್
**ಗೌರವಯುತ ಖಜಾಂಚಿ**
ಶ್ರೀ ಕೆ.ಪಿ. ರಾಜ ಶೇಖರ್
**ಪ್ರಧಾನ ಕಾರ್ಯದರ್ಶಿ**
ರೆವ. ಪಿ. ಜಾನ್ ವೆಸ್ಲಿ

**ಮಾಸಪತ್ರಿಕೆಯ ತಂಡದವರು**
**ಸಂಪರ್ಕ ವಿಭಾಗದ ಕಾರ್ಯದರ್ಶಿ**
ರೆವ. ಇ.ಡಿ. ರಾಜಾ ಸಿಂಗ್ ಎಲಿಯಾಸ್
**ಸಂಪಾದಕರು:** ಶ್ರೀ ತಿಮೊಥಿ ಆಸ್ಟಿನ್
**ಕನ್ನಡ ಪತ್ರಿಕೆಯ ಸಂಪಾದಕರು**
ಸಹೋದರಿ ಮಂಜುಳ ಪ್ರಸನ್ನ ಕುಮಾರ್


### ಐ.ಇ.ಎಂ. ಔಟ್‌ರೀಚ್

ಮಾಸಿಕ ಪತ್ರಿಕೆಯಾಗಿದ್ದು ಇದನ್ನು ಇಂಗ್ಲೀಷ್, ಕನ್ನಡ, ತಮಿಳು, ಮಲೆಯಾಳಂ, ತೆಲುಗು, ಒರಿಯಾ, ಮರಾಠಿ, ಗುಜರಾತಿ ಮತ್ತು ಹಿಂದಿ ಭಾಷೆಗಳಲ್ಲಿ ಪ್ರಕಟಿಸಲಾಗುತ್ತಿದೆ. ಸುವಾರ್ತಾ ಸೇವೆಗೆ ಕನಿಷ್ಠಪಕ್ಷ ವಾರ್ಷಿಕವಾಗಿ 100/- ರೂ. ಗಳನ್ನು ನೀಡುವವರ ವಿಳಾಸಕ್ಕೆ ಇದನ್ನು ಕಳುಹಿಸಲಾಗುವುದು. ಇದು ಮುದ್ರಣ ಮತ್ತು ಅಂಚೆ ವೆಚ್ಚಕ್ಕೆ ಉಪಯೋಗಿಸಲ್ಪಡುವುದು.

### ನಿಮ್ಮ ಕೊಡುಗೆಯನ್ನು

ಚೆಕ್, ಡಿ.ಡಿ. ಅಥವಾ ಎಂ.ಒ. ಮೂಲಕ **ಇಂಡಿಯನ್ ಇವ್ಯಾಂಜೆಲಿಕಲ್ ಮಿಷನ್** ಹೆಸರಿನಲ್ಲಿ ನಿಮ್ಮ ಸ್ಥಳೀಯ ಕಾರ್ಯದರ್ಶಿಯ ಮೂಲಕವಾಗಲಿ ಅಥವಾ ನೇರವಾಗಿ ಆರ್ಥಿಕ ಕಾರ್ಯದರ್ಶಿಗಾಗಲೀ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇವೆ. ನಿಮ್ಮ ವಿಳಾಸವು ಬದಲಾದರೂ ಕೂಡಲೇ ಇದೇ ವಿಳಾಸಕ್ಕೆ ಬರೆದು ತಿಳಿಸಿದರೆ ಅನುಕೂಲವಾಗುವುದು.

### ಮಾಸಿಕ ಪತ್ರಿಕೆಯ ಹೇಳಿಕೆ

ನಮ್ಮ ವಾಚಕರಿಗೆ ವಿಷಯ ತಿಳಿಸಿ ಅವರಲ್ಲಿ ಸುವಾರ್ತಾ ಸೇವೆಯ ಬಗ್ಗೆ ಆಸಕ್ತಿಯನ್ನು ಮೂಡಿಸುವುದಲ್ಲದೆ ಐ.ಇ.ಎಂ.ನ ಸುವಾರ್ತಾ ಸೇವೆಯಲ್ಲಿ ಹಾಗೂ ಎಲ್ಲಾ ಸುವಾರ್ತಾ ಸೇವೆಯಲ್ಲಿ ತಾವೂ ಭಾಗವಹಿಸಲು ಉತ್ತೇಜಿಸುವುದಾಗಿದೆ.

### ಒಳಗೇನಿದೆ


| | |
|---|---|
| ಪ್ರಧಾನ ಕಾರ್ಯದರ್ಶಿಯವರ ಆಲೋಚನೆಗಳು | 2 |
| ಕರ್ನಾಟಕ ರಾಜ್ಯ ಕಾರ್ಯದರ್ಶಿಯವರಿಂದ | 4 |
| ಸತ್ಯವೇದಾಧ್ಯಯನ | 5 |
| ನೆನಪಿನ ಹಾದಿಯಲ್ಲಿ | 8 |
| ಬಸ್ತರಿನಲ್ಲಿ ದೂರದೃಷ್ಟಿಯು ನೆರವೇರಿತು | 9 |
| ಯೇಸುವು ಮಾರ್ಪಡಿಸುತ್ತಾನೆ | 11 |
| ಸ್ತೋತ್ರದ ಮತ್ತು ಪ್ರಾರ್ಥನಾ ಮಾಲಿಕೆ | 13 |
| ಮಹತ್ತಾದ ವಿಷಯಗಳು ಮುಂಬರಲಿದೆ | 22 |
| ಸುವಾರ್ತಿಕನ ಆತ್ಮಕಥೆ | 23 |
| ಬಾಧೆಯಿಂದ ಲಾಭ | 24 |
| ಕ್ಷೇತ್ರಗಳಿಂದ | 25 |
| ದೂರದರ್ಶನವನ್ನು ಕೇಂದ್ರೀಕರಿಸಿದ್ದು | 27 |
| ನೆನಪು ಮಾಡಿಕೊ, ಬಲಪಡಿಸು, ಪುನಶ್ಚೈತನ್ಯಗೊಳಿಸು | 28 |
| ಇಲ್ಲಿಂದ ತೊಲಗಿರಿ | 29 |
| ಮತ್ತೆ ಒಂದುಗೂಡುವುದು | 30 |
| ಧನ್ಯತೆಯ ಮಾರ್ಗ | 32 |


**2012ರ ಮುಖ್ಯ ವಿಷಯ**

*ವಿಮೋಚಿಸಲು ಇಳಿದು ಬಂದಿದ್ದೇನೆ*

**ವಿಮೋಚನಾಕಾಂಡ 3:8**


ಸಂಪರ್ಕಿಸಲು:

**ಇಂಡಿಯನ್ ಇವ್ಯಾಂಜೆಲಿಕಲ್ ಮಿಶನ್**

38, ಲಾಂಗ್‌ಫರ್ಡ್ ರಸ್ತೆ, ಪೋ.ಬಾ.2557, ಬೆಂಗಳೂರು - 560 025.

ಫೋನ್: 22245256, 22480080, ಫ್ಯಾಕ್ಸ್: 22122779 ಗ್ರಾಮ್ಸ್: ಔಟ್‌ರೀಚ್

Email: iemhq@vsnl.com, Website: iemoutreach.org

ಪ್ರಧಾನ ಕಾರ್ಯದರ್ಶಿ: Email: generalsecretary@iemoutreach.org or pjohnwesley@vsnl.net

ಪ್ರಧಾನ ಕಾರ್ಯದರ್ಶಿಯವರ ಆಲೋಚನೆಗಳು

# ನಮ್ಮ ಪ್ರಿಯ ಸೇವಾಭಾವನೆಯ ಪ್ರಾರ್ಥನಾ ಸಹಭಾಗಿಗಳೇ

**''ಈತನು ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವುದಕ್ಕೆ ಹೋಗಿದ್ದಾನೆ.'' (ಲೂಕ 19:7)**

''ನಮ್ಮ ಅನುದಿನದ ಆಹಾರ'' ಎಂಬ ಪುಸ್ತಕದಲ್ಲಿ ಓದಿದ ಒಂದು ಆಲೋಚನೆ ನನಗೆ ಬಲವನ್ನು ನೀಡಿತು. ಅದನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ. ''ಅನೇಕ ವರ್ಷಗಳು ಆಲೆನ್ ಫಂಟ್ಸ್‌ನ ''ಕ್ಯಾಂಡಿಡ್ ಕ್ಯಾಮರಾ ಟೆಲಿ ವಿಶನ್'' ಕಾರ್ಯಕ್ರಮವು ಸಾಮಾನ್ಯ ಜನರು ಅನಿರೀಕ್ಷಿತ ಸನ್ನಿವೇಶಗಳಲ್ಲಿ ಅವರ ಅತಿ ಸಂತೋಷದ ಪ್ರತಿಕ್ರಿಯೆಗಳನ್ನು ಗುಪ್ತ ಕ್ಯಾಮೆರಾದಲ್ಲಿ ಫೋಟೋ ತೆಗೆದು ಅದನ್ನು ಪ್ರದರ್ಶಿಸಲಾಗುತ್ತಿತ್ತು. ಆತನ ಮಗ ಪೀಟರ್‌ನ ಹೇಳಿಕೆಯಂತೆ ''ಜನರು ಅದ್ಭುತವಾದವರೆಂದು ನಮ್ಮ ನಂಬಿಕೆ. ಅದನ್ನು ಖಚಿತಪಡಿಸಲು ನಾವು ಸಕಲ ಪ್ರಯತ್ನ ಮಾಡುತ್ತೇವೆ'' ಎಂಬುದೇ. ಪೀಟರ್ ಇದೇ ರೀತಿಯಾದ ಇವರ ಕಾರ್ಯಕ್ರಮವು ಜನರು ಮೂಢರು ನಾವು ಅದನ್ನು ಸ್ಪಷ್ಟ ಪಡಿಸಲು ಮಾರ್ಗವನ್ನು ಹುಡುಕುತ್ತೇವೆ ಎಂಬುದನ್ನು ಒಪ್ಪಿಕೊಂಡಿರಲಿಲ್ಲ. ಈತನ ಟೀಕೆಯು ಜನರ ಬಗ್ಗೆ ನಮ್ಮ ಭಾವನೆಯು ನಾವು ಅವರನ್ನು ಹೇಗೆ ಕಾಣುತ್ತೇವೆ ಎಂಬುದನ್ನು ಆಧರಿಸಿದೆ ಎಂಬುದೇ ಆಗಿದೆ.

ಓ ಕರ್ತನೇ, ಆತ್ಮಗಳ ಬಗ್ಗೆ ನಿನಗಿರುವ ಪ್ರೀತಿಯನ್ನು ನನಗೆ ನೀಡಿ, ತಪ್ಪಿಸಿಕೊಂಡು ಅಲೆಯುತ್ತಿರುವ ಸಾವಿರಾರು ಕುರಿಗಳನ್ನು ನೋಡಿ ನೀನು ದುಃಖಿಸಿದಂತೆ ನಾನೂ ದುಃಖಿಸಿ ಗೋಳಾಡುವೆನು. – ಹ್ಯಾರಿಸನ್

ಜೆರಿಕೊ ನಗರ ವಾಸಿಯಾದ ಸುಂಕದ ಜಕ್ಕಾಯನ ಮನೆಗೆ ಯೇಸುಕ್ರಿಸ್ತನು ಹೋದಾಗ ಅವರಿಗೆ ಜಿಗುಪ್ಸೆಯಾಯಿತು. ಅವರು ''ಈತನು ಪಾಪಿಯಾಗಿರುವವನ ಬಳಿಯಲ್ಲಿ ಇಳುಕೊಳ್ಳುವುದಕ್ಕೆ ಹೋಗಿದ್ದಾನೆ'' ಎಂದು ಗುಣುಗುಟ್ಟಿದರು. (ಲೂಕ 19:7) ಆದಾಗ್ಯೂ ಜಕ್ಕಾಯನು ಹೃದಯಾಂತರಾಳದಲ್ಲಿ ಬದಲಾವಣೆ ಹೊಂದಿದಾಗ (ವ.8) ಯೇಸುವು ''ಈ ಹೊತ್ತು ಈ ಮನೆಗೆ ರಕ್ಷಣೆಯಾಯಿತು.... ಮನುಷ್ಯ ಕುಮಾರನು ಕೆಟ್ಟು ಹೋಗಿರುವುದನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನು'' ಎಂದು ಹೇಳಿದನು. (19:10-11) ಬಾಬ್ ಹಾರ್ನ್‌ರ್‌ರವರು ''ಜನರು ಕೆಟ್ಟುಹೋಗುತ್ತಿರುವುದನ್ನು ನೋಡಿದರೆ ಅವರನ್ನು ದ್ವೇಷಿಸುತ್ತೇವೆ. ಆದರೆ ಅವರನ್ನು ಕೆಟ್ಟು ಹೋದವರೆಂದು ಕಾಣುವಾಗ ಅವರಿಗೆ ದಯೆ ತೋರಿಸುತ್ತೇವೆ'' ಎಂದು ಹೇಳಿದ್ದಾರೆ. ಯೇಸುವು ಕೆಟ್ಟು ಹೋಗುತ್ತಿರುವವರನ್ನಲ್ಲ ಕೆಟ್ಟು ಹೋದವರನ್ನು ಮಾತ್ರ ಪ್ರೀತಿಸುತ್ತಾನೆ. ನಾವು ಇತರರನ್ನು ನೋಡುವಾಗ ನಮ್ಮ ದೃಷ್ಟಿ ಯಾವ ರೀತಿಯದಾಗಿದೆ?

ಓ ಕರ್ತನೇ, ಆತ್ಮಗಳ ಬಗ್ಗೆ ನಿನಗಿರುವ ಪ್ರೀತಿಯನ್ನು ನನಗೆ ನೀಡಿ, ತಪ್ಪಿಸಿಕೊಂಡು ಅಲೆಯುತ್ತಿರುವ ಸಾವಿರಾರು ಕುರಿಗಳನ್ನು ನೋಡಿ ನೀನು ದುಃಖಿಸಿದಂತೆ ನಾನೂ ದುಃಖಿಸಿ ಗೋಳಾಡುವೆನು. – ಹ್ಯಾರಿಸನ್

**ಆಲೋಚನೆಯ ಜ್ವಾಲೆ: ಯಾರು ರಕ್ಷಿಸಲ್ಪಟ್ಟಿದ್ದರೋ ಅವರು ಕಳೆದುಹೋದವರನ್ನು ಹುಡುಕಲಿ.**

ನಾವು ಮಾಡುವ ಸಕಲ ಕಾರ್ಯಗಳಲ್ಲಿ ಯೇಸುವಿನ ಮಾದರಿಯನ್ನು ಅನುಸರಿಸೋಣ. 1 ಯೋಹಾನ 4:17ರಲ್ಲಿ ''ಕ್ರಿಸ್ತನು ಎಂಥವನಾಗಿದ್ದಾನೋ ನಾವೂ ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ'' ಎಂದು ಹೇಳಲಾಗಿದೆ. ಇದೇ ಐ.ಇ.ಎಂ.ನ ಸುವಾರ್ತಿಕರ ಕುಟುಂಬಗಳ 10ನೇ ವಾರ್ಷಿಕ ಸಮ್ಮೇಳನದ ಮುಖ್ಯ ವಿಷಯವಾಗಿತ್ತು. ಶ್ರೀ ಸಿ.ಬಿ. ಸಾಮ್ಯುವೆಲ್ ಬಿಷೋಪರಾದ ಸಿ.ವಿ. ಮಾಥ್ಯೂ ಮತ್ತು ಡಾ. ಪುಷ್ಪರಾಜ್ ಇವರೆಲ್ಲರ ಸಂದೇಶಗಳು ನಮ್ಮೆಲ್ಲರ ಹೃದಯಗಳಲ್ಲಿ ಕಿಚ್ಚನ್ನು ಮತ್ತೆ ಹೊತ್ತಿಸಿತು. ಇದೆಲ್ಲದರೊಂದಿಗೆ ರೆವೆ. ರಾಬಿನ್ ಪಾಲ್‌ರವರು ''ಯೇಸುವಿನಂತೆ ನಡೆಯಿರಿ'' ಎಂಬ ಗೋಷ್ಠಿಯನ್ನು ನಡೆಸಿದರು. ಶ್ರೀ ಬೆಂಜಮಿನ್ ನ್ಯೂಟನ್ ''ತಂದೆ ತಾಯಿಗಳ ಮಾದರಿಯ ಪರಿಪಾಲನೆ'' ಎಂಬುದರ ಕುರಿತು ಮಾತನಾಡಿದರು. ಡಾ. ಪಿ.ಸಿ. ಮಾಥ್ಯೂ ಮತ್ತು ಸೀಬಿ ''ಸುವಾರ್ತಿಕರ ಕುಟುಂಬ ಜೀವನದಲ್ಲಿ ಬರುವ ಸವಾಲುಗಳನ್ನು ಹೇಗೆ ಎದುರಿಸುವುದು'' ಎಂಬುದರ ಕುರಿತು ಮಾತನಾಡಿದರು. ಇದೆಲ್ಲದಕ್ಕೆ ಸೇರಿದಂತೆ ರೆವೆ. ಸುಸಾಂತ ಪತ್ರರವರು ಇಂದಿನ ಭಾರತದ ಪ್ರಚೋದಕ ದೃಶ್ಯವನ್ನು ನಮ್ಮ ಮುಂದಿಟ್ಟು ನಮಗಿರುವ ಅಸಂಖ್ಯಾತವಾದ ಅವಕಾಶಗಳನ್ನು ಹೇಗೆ ಸದುಪಯೋಗ ಪಡಿಸುವುದೆಂಬುದನ್ನು ತಿಳಿಸಿದರು. ಈ ಮೂಲಕ

ನಾವೆಲ್ಲರೂ ದೇವರ ಪ್ರಸನ್ನತೆಯಲ್ಲಿ ಮೊಣಕಾಲೂರಿ ಕಣ್ಣೀರಿನಲ್ಲಿ ನಮ್ಮ ದೇಶಕ್ಕಾಗಿ ಮೊರೆಯಿಟ್ಟೆವು. ಸಮ್ಮೇಳನದ ವಿವರಣೆಯನ್ನು ಆಗಸ್ಟಿನ ಸಂಚಿಕೆಯಲ್ಲಿ ನೀಡಲಾಗುವುದು.

ಅಂತಿಮ ಪ್ರತಿಷ್ಠಾರಾಧನೆಯಲ್ಲಿ ನಾವು ಒಬ್ಬರ ಪಾದಗಳನ್ನೊಬ್ಬರು ತೊಳೆದವು. ಹೃದಯ ಮಿಡಿಯುವ ಸಂದೇಶಗಳು ಮತ್ತು ನಮ್ಮ ಮುಂದಿರುವ ಯೇಸುವಿನ ಮಾದರಿಯಿಂದಾಗಿ ನಾವೆಲ್ಲರೂ ಕಣ್ಣೀರಿಟ್ಟೆವು. ಯೇಸುವಿನ ಶಿಷ್ಯರೆನ್ನಿಸಿಕೊಳ್ಳಲು ನಾವೆಷ್ಟು ನಮ್ಮನ್ನು ತಗ್ಗಿಸಿಕೊಳ್ಳಬೇಕಲ್ಲವೇ. ಕ್ರಿಸ್ತ ಯೇಸುವಿನಲ್ಲಿದ್ದ ಮನೋಭಾವನೆಯೇ ನಮ್ಮಲ್ಲಿಯೂ ಇರಬೇಕೆಂಬುದೇ ನಮ್ಮ ಪ್ರಾರ್ಥನೆ. ದಿನದಿಂದ ದಿನಕ್ಕೆ ಪರಸ್ಪರವಾದ ಪ್ರೀತಿಯು ಹೆಚ್ಚಬೇಕು. ಆತ್ಮಗಳಿಗಾಗಿ ನಮ್ಮ ಹಂಬಲವು ಇಂಗಿಹೋಗಬಾರದು.

ಈ ತಿಂಗಳಿನಲ್ಲಿ ಮಂಡಲಿ ಹಾಗೂ ಸೊಸೈಟಿಯ ಕೂಟಗಳು ನಡೆಯುವುವು. ಅದನ್ನು ಐ.ಇ.ಎಂ.ನ ಮಂಡಲಿಯ ಅಧ್ಯಕ್ಷರಾದ ರೆವೆ. ಡಾ. ಕುರಿಯನ್‌ರವರ ನೇತೃತ್ವದಲ್ಲಿ ನಡೆಸಲಾಗುವುದು. ''ಪ್ರತಿ ವಿಶ್ವಾಸಿಯನ್ನು ಅಕ್ಷರಸ್ಥ'' ನಾಗಿಸಬೇಕೆಂಬುದೇ ನಮ್ಮ ಮುಂದಿರುವ ಬೃಹದ್ ಸವಾಲಾಗಿದೆ. ಈ ದಿಕ್ಕಿನಲ್ಲಿ ವಿಶೇಷ ಪ್ರಯತ್ನವನ್ನು ನಡೆಸಲಾಗುವುದು. ಇವರು ದೇವರ ವಾಕ್ಯದಲ್ಲಿಯೂ ನಂಬಿಕೆಯಲ್ಲಿಯೂ ನೆಲೆಗೊಂಡರೆ ಈ ಲೋಕದಲ್ಲಿ ಕ್ರಿಸ್ತನಿಗಾಗಿ ಬಲವಾಗಿ ನಿಲ್ಲಲು ಶಕ್ತರಾಗುತ್ತಾರೆ.

ಅಸ್ಸಾಮ್ ಮತ್ತು ತ್ರಿಪುರದಲ್ಲಿ ಹೊಸದಾಗಿ ಸುವಾರ್ತಾ ಕ್ಷೇತ್ರಗಳನ್ನು ಪ್ರಾರಂಭಿಸುವ ಪ್ರಯತ್ನಕ್ಕಾಗಿ ಪ್ರಾರ್ಥಿಸಿರಿ. ನೇಪಾಳಕ್ಕೆ ಸುವಾರ್ತಿಕರನ್ನು ಕಳುಹಿಸುವ ಸಿದ್ಧತೆಯಲ್ಲಿದ್ದೇವೆ. ದೆಹಲಿಯಲ್ಲಿ ಸ್ಥಾನಪಲ್ಲಟವಾದವರ ಮಧ್ಯೆ ಸೇವೆಗಾಗಿಯೂ ಪ್ರಾರ್ಥಿಸಿರಿ.

ಈ ಸಂಚಿಕೆಯಲ್ಲಿ ಬಸ್ತರ್ ಕ್ಷೇತ್ರದ ಸೇವೆಯನ್ನು ಕೇಂದ್ರೀಕರಿಸಲಾಗಿದೆ. ಇದು ಬಹುಕಾಲದಿಂದ ಸೇವೆ ನಡೆಯುತ್ತಿರುವ ಕ್ಷೇತ್ರವಾಗಿದೆ. ಬೈಸನ್ ಹಾರನ್ ಮಡಿಯ, ಭತ್ರ, ಧುರ್ವ ಜನರ ಮಧ್ಯೆ ನಮ್ಮ ಸೇವೆಯು ನಡೆಯುತ್ತಿದೆ. ಅನೇಕ ವರ್ಷಗಳ ಹಿಂದೆ ನಾವು ಇಲ್ಲಿ ಸೇವೆಯನ್ನು ಪ್ರಾರಂಭಿಸಿದಾಗ ಕ್ರೈಸ್ತ ಸಾಕ್ಷಿಗಳೇ ಇರಲಿಲ್ಲ. ಈಗ ಸಭೆಗಳು ಸ್ಥಾಪನೆಯಾಗಿ ಹೆಚ್ಚು ಮಂದಿ ವಿಶ್ವಾಸಿಗಳಿದ್ದಾರೆ. ಕರ್ತನು ತನ್ನ ಸಭೆಯನ್ನು ಕಟ್ಟುತ್ತಿರುವುದಕ್ಕಾಗಿ ಆತನನ್ನು ಸ್ತುತಿಸುತ್ತೇವೆ.

**ನಮ್ಮ ಪ್ರಿಯ ಸಹಭಾಗಿಗಳೇ, ಐ.ಇ.ಎಂ.ನ ಔಟ್‌ರೀಚ್ ಮಾಸಿಕ ಪತ್ರಿಕೆಯನ್ನು ಓದಿ ಆಶೀರ್ವಾದ ಹೊಂದುತ್ತಿದ್ದೀರಾ? ಹಾಗಿದ್ದರೆ ಈ ಪತ್ರಿಕೆಯನ್ನು ಯಾರಿಗಾದರೂ ಪರಿಚಯಮಾಡಿದ್ದೀರೋ? ನಿಮ್ಮ ಕ್ರೈಸ್ತ ಸ್ನೇಹಿತರು ಮತ್ತು ಬಂಧುಗಳ ವಿಳಾಸಗಳನ್ನು ಕಳುಹಿಸಿರಿ ಹಾಗೂ ಕರ್ತನ ಸೇವೆಯಲ್ಲಿ ಅವರು ಭಾಗವಹಿಸಲು ಉತ್ತೇಜಿಸಿರೆಂದು ಕೇಳಿಕೊಳ್ಳುತ್ತೇವೆ. ಅವರಿಗೆ ಪ್ರತಿ ತಿಂಗಳು ಈ ಪತ್ರಿಕೆಯನ್ನು ಕಳುಹಿಸಲು ಇಚ್ಛಿಸುತ್ತೇವೆ.**

ಕರ್ತನ ಸೇವೆಯಲ್ಲಿ ನಿಮ್ಮವನಾದ

**ಪಿ. ಜಾನ್‌ವೆಸ್ಲಿ**



**ಐ.ಇ.ಎಂ.ನ ಸತ್ಯವೇದ ಭಾಷಾಂತರಕಾರರು**

# ಕರ್ನಾಟಕ ರಾಜ್ಯ ಕಾರ್ಯದರ್ಶಿಯವರಿಂದ

ಕ್ರಿಸ್ತನಲ್ಲಿ ಪ್ರಿಯ ನಂಬಿಗಸ್ತವಾಚಕರೇ,

ನಮ್ಮ ಕರ್ತನಾದ ಯೇಸುಕ್ರಿಸ್ತನ ತಂದೆ ದೇವರಿಂದ ಕೃಪೆಯೂ ಶಾಂತಿಯೂ ಉಂಟಾಗುವುದು.

ನಾವು ಯಾವಾಗಲೂ ನಿಮ್ಮೆಲ್ಲರನ್ನು ನೆನಪು ಮಾಡಿ ನಿಮಗಾಗಿ ಪ್ರಾರ್ಥಿಸುತ್ತೇವೆ.

ಸಭಾಸೇವೆ ಕಳೆದ ತಿಂಗಳಲ್ಲಿ ಬಂಗಾರಪೇಟೆಯ ಲಿನ್ ಕನ್ನಡ ಮೆಥೋಡಿಸ್ಟ್ ಸಭೆಯಲ್ಲಿ ಒಬ್ಬ ಸುವಾರ್ತಿಕನ ಪ್ರತಿಷ್ಠಾರಾಧನೆ ನಡೆಸಲಾಯಿತು. ಇದು ಆಶೀರ್ವಾದಪ್ರದವಾಗಿದ್ದು ಅನೇಕರನ್ನು ಉತ್ತೇಜಿಸಿತು. ಕಳೆದ ಮೇನಲ್ಲಿ ಸುವಾರ್ತಿಕರ ಕುಟುಂಬ ಸಮ್ಮೇಳನವು ಚೆನ್ನೈನಲ್ಲಿ ನಡೆಯಿತು. ನಮ್ಮ ರಾಜ್ಯದಿಂದ ಕೆಲವು ಯೌವನಸ್ಥರು ಸ್ವಯಂ ಸೇವೆಗಾಗಿ ಬಂದು ಹೆಚ್ಚು ಸಹಾಯ ಮಾಡಿದರು. ಇವರೆಲ್ಲರೂ ಸುವಾರ್ತಾ ಸೇವಾ ದೃಷ್ಟಿಯನ್ನು ಹೊಂದಿ ಕರ್ತನ ಸೇವೆಗೆ ಒಪ್ಪಿಸಿಕೊಡುವಂತೆ ಪ್ರಾರ್ಥಿಸಿರಿ.

ಈ ತಿಂಗಳಿನಲ್ಲಿ ಚಟ್ಟೀಸ್‌ಗಡ್‌ನ ಬಸ್ತರ ಕ್ಷೇತ್ರದ ಸೇವೆಯನ್ನು ಕೇಂದ್ರೀಕರಿಸಲಾಗಿದೆ. ಎಫೆಸ 6:19ರಲ್ಲಿ ಪೌಲನು ಹೇಳಿರುವಂತೆ ''ನಾನು ಬಾಯಿತೆರೆಯುವಾಗ ಪೂರ್ವಕಾಲದಲ್ಲೂ ಗುಪ್ತವಾಗಿರುವ ಸುವಾರ್ತಾ ಸತ್ಯಾರ್ಥವನ್ನು ಭಯವಿಲ್ಲದೆ ತಿಳಿಸುವುದಕ್ಕೆ ಬೇಕಾದ ಮಾತನ್ನು ದೇವರು ನನಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿರಿ. ನಾವೂ ನಮ್ಮ ಸುವಾರ್ತಿಕರಿಗಾಗಿ ಮನಃಪೂರ್ವಕವಾಗಿ ಪ್ರಾರ್ಥಿಸೋಣ. ಬಸ್ತರ್ ಕ್ಷೇತ್ರದಲ್ಲಿ ಬೈಸನ್ ಹಾರನ್ ಮಡಿಯಾ, ಭತ್ರಿ ಮತ್ತು ಧುರ್ವ ಜನರ ಮಧ್ಯೆ ವಿಶೇಷವಾಗಿ ಸೇವೆಯನ್ನು ಅನೇಕ ಸುವಾರ್ತಿಕರು ಮಾಡುತ್ತಿದ್ದಾರೆ. ಇತ್ತೀಚಿಗೆ ಇಲ್ಲಿ ಹಿಂಸೆ ವಿರೋಧಗಳಿದ್ದರೂ ಅನೇಕರು ಕರ್ತನಲ್ಲಿ ನಂಬಿಕೆಯಿಟ್ಟು ಸಭೆಗಳು ಹೆಚ್ಚುತ್ತಿವೆ. ಕರ್ತನು ನಮ್ಮ ಕ್ಷೇತ್ರಗಳಲ್ಲಿ ತನ್ನ ಸಭೆಯನ್ನು ಕಟ್ಟುತ್ತಿರುವುದಕ್ಕಾಗಿ ಆತನನ್ನು ಕೊಂಡಾಡುತ್ತೇವೆ. ಅವರ ಮಾತೃಭಾಷೆಯಲ್ಲಿ ಸತ್ಯವೇದವು ಭಾಷಾಂತರವಾಗುತ್ತಿದ್ದು ವಿಶ್ವಾಸಿಗಳು ದೇವರ ವಾಕ್ಯವನ್ನು ಓದುತ್ತಿದ್ದಾರೆ. ಇವರೆಲ್ಲರಿಗಾಗಿ ಪ್ರಾರ್ಥಿಸಿರಿ.

ಐ.ಇ.ಎಂ.ನ ಸುವಾರ್ತಿಕರ ಕುಟುಂಬಗಳ 10ನೇ ಸಮ್ಮೇಳನವು ಸುಲಲಿತವಾಗಿ ನಡೆದು ನಾವೆಲ್ಲರೂ ಪುನಶ್ಚೈತನ್ಯವನ್ನು, ಪುನರುಜ್ಜೀವನವನ್ನೂ, ಅನ್ಯೋನ್ಯತೆಯನ್ನೂ ಹೊಂದಿ ಆನಂದಿಸಿದೆವು. ನಿಮ್ಮೆಲ್ಲರ ಪ್ರಾರ್ಥನೆ ಹಾಗೂ ಆರ್ಥಿಕ ನೆರವಿಗಾಗಿ ವಂದಿಸುತ್ತೇನೆ.

ಸುವಾರ್ತಾ ಸೇವೆಗೆ ನಿಮ್ಮ ಪ್ರಾರ್ಥನೆ ಮತ್ತು ಬೆಂಬಲಕ್ಕಾಗಿ ನಿಮ್ಮೆಲ್ಲರಿಗೂ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ದೇವರು ತಾನೇ ನಿಮ್ಮೆಲ್ಲರನ್ನೂ ಆಶೀರ್ವದಿಸಲಿ

ಕರ್ತನ ಸೇವೆಯಲ್ಲಿ ನಿಮ್ಮವನಾದ

**ಡಿ. ಜೆಯಶೀಲನ್**

ಕರ್ನಾಟಕ ರಾಜ್ಯ ಕಾರ್ಯದರ್ಶಿ

ಸತ್ಯವೇದಾಧ್ಯಯನ: ಯೆಹೆಜ್ಕೇಲ 47:1-12

# ಸುವಾರ್ತಾ ಸೇವೆಯಲ್ಲಿ ಪವಿತ್ರಾತ್ಮ



*(ಹಳೆಯ ಒಡಂಬಡಿಕೆಯ ಕಾಲದಲ್ಲಿಯೂ ಜನರ ಜೀವಿತದಲ್ಲಿ ಪವಿತ್ರಾತ್ಮನು ಕಾರ್ಯನಿರತನಾಗಿದ್ದು ಮಾನವ ಕುಲಕ್ಕೆ ದೇವರ ನಿಯೋಗವನ್ನು ಪೂರ್ಣ ಗೊಳಿಸುತ್ತಿದ್ದನು. ಶ್ರೀ ಸಿ.ಬಿ. ಸಾಮ್ಯುವೆಲ್‌ರವರ ಎಫಿಕಾರಿನ ರಾಷ್ಟ್ರೀಯ ಮಾಜಿ ನಿರ್ದೇಶಕರಾಗಿದ್ದರು. ''ಹಳೆಯ ಒಡಂಬಡಿಕೆಯಲ್ಲಿ ದೇವರ ನಿಯೋಗದ ಕಾರ್ಯ ಚಟುವಟಿಕೆಯನ್ನು ಮೂರುಭಾಗವಾಗಿ ಅಧ್ಯಯನ ಮಾಡಿದರು. ಇವರ ಮೊದಲ ಅಧ್ಯಯನವು ಯೆಹೆಜ್ಕೇಲ 47:1-12ರ ಆಧಾರವಾಗಿರುವುದು. ನಮ್ಮ ಸುವಾರ್ತಿಕ ಶ್ರೀ ಲೂಕ್ ವಿ. ಟೈಟಸ್ ಈ ಅಧ್ಯಯನದ ಸಂಗ್ರಹವನ್ನು ಮಾಡಿದ್ದಾರೆ. ನೀವು ಇದರ ಮೂಲಕ ಉತ್ತೇಜನವನ್ನೂ ಆತ್ಮಿಕ ಆಶೀರ್ವಾದವನ್ನೂ ಹೊಂದುವಿರೆಂದು ನಂಬಿದ್ದೇವೆ)*

**ಪೀಠಿಕೆ**

ಈ ಸಮ್ಮೇಳನದ ಮುಖ್ಯ ವಿಷಯವು ''ಕ್ರಿಸ್ತನು ಎಂಥವನಾಗಿದ್ದಾನೋ ನಾವೂ ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ.'' (1 ಯೋಹಾನ 4:17) ಎಂಬುದು ಈ ಲೋಕದಲ್ಲಿ ದೇವರ ಸುವಾರ್ತಾ ಸೇವೆಯ ಹಿನ್ನೆಲೆಯಲ್ಲಿ ಬಹು ಸಮಂಜಸವಾಗಿದೆ. ಇಂದೂ ಸಹ ಯೇಸುವು ತನ್ನ ಉದ್ದೇಶವನ್ನು ನೆರವೇರಿಸಲು ನಮ್ಮ ಮೂಲಕ ಕಾರ್ಯನಿರತನಾಗಿದ್ದಾನೆ. ಯೇಸುವು ಬಂದಾಗ ದೇವರ ರಾಜ್ಯವನ್ನು ಪ್ರಕಟಿಸುವನು. ಹಳೆಯ ಒಡಂಬಡಿಕೆಯು ದೇವರ ಮಹಾಯೋಜನೆಯ ಭಾಗವಾಗಿದೆ. ಇದರಲ್ಲಿ ಅನೇಕ ದರ್ಶನಗಳಿವೆ. ಯೆಹೆಜ್ಕೇಲ 47:1-12ರಲ್ಲಿರುವುದು ಒಂದು ದರ್ಶನವಾಗಿದೆ. ಇದರಲ್ಲಿ ''ನದಿಯು ಎಲ್ಲೆಲ್ಲಿ ಹರಿಯುವುದೋ...'' ಅಲ್ಲೆಲ್ಲಾ ಬದಲಾವಣೆ ಪುನಃಸ್ಥಾಪನೆ, ಸಮೃದ್ಧಿ ಮತ್ತು ಸುರಕ್ಷತೆಯುಂಟಾಯಿತು. ಯೆಹೆಜ್ಕೇಲನ ನದಿಯು ದೇವಾಲಯದ ಯಜ್ಞವೇದಿಯ ಕೆಳಗಿನಿಂದ ಹರಿಯುತ್ತಿತ್ತು. ಇದು ಪವಿತ್ರಾತ್ಮನನ್ನು ಸೂಚಿಸುವುದು. ಹಾಗೂ ಯೋಹಾನನ ಸುವಾರ್ತೆಯಲ್ಲಿ ಯೇಸುವು ತಿಳಿಸಿದ ಪವಿತ್ರಾತ್ಮನು ಜೀವಜಲವೆನ್ನುವುದನ್ನು ಸೂಚಿಸುವುದು. ಇದು ನೂತನ ಹಾಗೂ ಸಮೃದ್ಧ ಜೀವನವನ್ನು ತರುವುದು. ಯಜ್ಞವೇದಿಯ ಕೆಳಗಿನಿಂದ ಬರುವ ಈ ನದಿಯು ಹತ್ತು ಕುತೂಹಲಕಾರಿಯೂ ಆತ್ಮಭರಿತ ಸೇವೆಯೂ ಹತ್ತು ಗುಣಗಳನ್ನೂ ಹೊಂದಿದೆ. ಇದು ಯೇಸುವು ಆಳುವ ಮುಂದಿನ ಸತ್ಯವೇದ ಆಧಾರಿತ ದರ್ಶನ ನೀಡುವುದು.

**1. ಸೊಂಪಾದ ಸೃಷ್ಟಿ (ವ.7)**

''ನಾನು ಅಲ್ಲಿ ಬಂದಾಗ ತೊರೆಯ ಎರಡು ದಡಗಳಲ್ಲಿಯೂ ಅನೇಕಾನೇಕ ವೃಕ್ಷಗಳು ಕಾಣಿಸಿದವು.'' ನದಿಯು ಹರಿದಲ್ಲೆಲ್ಲಾ - ದೇವರಾತ್ಮನು ಚಲಿಸಿದಲ್ಲೆಲ್ಲಾ; ಯೇಸುವು ಆಳುವಾಗ ಸೃಷ್ಟಿಯು ಅಭಿವೃದ್ಧಿ ಹೊಂದಿ ದೇವರಾಶೀರ್ವಾದವು ನೆಲೆಗೊಳ್ಳುವುದು.

**2. ಹೊಸತನ ಮತ್ತು ಸ್ವಸ್ಥತೆ (ವ.8,9)**

ಆತನು ನನಗೆ ಈ ಪ್ರವಾಹವು ಪೂರ್ವ ಪ್ರಾಂತ್ಯದ ಕಡೆಗೆ ಹೊರಟು ಅರಾಬಾ ಎಂಬ ತಗ್ಗಿಗೆ ಇಳಿದು ಲವಣ ಸಮುದ್ರದ ಕಡೆಗೆ ಹರಿಯುವುದು. ಲವಣ ಸಮುದ್ರಕ್ಕೆ ಸೇರಲು ಅದರ ನೀರು ಸಿಹಿಯಾಗುವುದು. ಈ ನದಿಯ ನೀರು ಹರಿಯುವುದರಿಂದ ಉಪ್ಪಿನ ನೀರು ಸಿಹಿ ಯಾಗುವುದು. ಎಲ್ಲೆಲ್ಲಿ ಆತ್ಮನು ಚಲಿಸುತ್ತಾನೋ ಅಲ್ಲಿ ಹೊಸತನ ಮತ್ತು ಸ್ವಸ್ಥತೆಯುಂಟಾಗುವುದು. ಪ್ರತಿ ಸನ್ನಿವೇಶದಲ್ಲಿಯೂ ದೇವರಾತ್ಮನು ಹೊಸತನವನ್ನುಂಟು ಮಾಡುವನು. ಯೇಸುವು ಈ ಚಲನೆಯನ್ನು ''ಹೊಸ ದ್ರಾಕ್ಷಾರಸ'' ಎಂಬುದಾಗಿ ತಿಳಿಯಪಡಿಸಿದ್ದಾನೆ. ಇದನ್ನು ಹಳೆಯ ರೀತಿಯಲ್ಲಿ ನಡೆಸುವುದೆಂದು ಅರ್ಥಮಾಡಿ ಕೊಳ್ಳಲಾಗುವುದಿಲ್ಲ, ಹೊಸತನವನ್ನು ''ಸ್ವಸ್ಥತೆ'' ಎಂದು ತಿಳಿಯಬಹುದು. ಇದು ದೇವರಾತ್ಮನ ಪ್ರಸನ್ನತೆಯ ಇನ್ನೊಂದು ಗುಣವಾಗಿದೆ.

**3. ಸಮೃದ್ಧ ಜೀವನ (ವ.9)**

''ಆ ತೊರೆಯು ಎಲ್ಲೆಲ್ಲಿ ಹರಿಯುತ್ತದೋ ಅಲ್ಲಲ್ಲಿ ಗುಂಪುಗುಂಪಾಗಿ ಚಲಿಸುವ ಸಕಲ ವಿಧ ಜಲ ಜಂತುಗಳು ಜೀವಿಸುವುವು; ಮೀನುಗಳು ತಂಡೋಪತಂಡ ವಾಗಿರುವುವು. ಈ ನೀರು ಸಮುದ್ರಕ್ಕೆ ಬೀಳಲು ಆ ನೀರು ಸಿಹಿಯಾಗುವುದು. ಈ ತೊರೆಯು ಎಲ್ಲೆಲ್ಲಿ ಹರಿದರೂ ಅಲ್ಲಲ್ಲಿ ಜೀವವುಂಟಾಗುವುದು.'' ದೇವರಾತ್ಮನು ಚಲಿಸಿದಲ್ಲೆಲ್ಲಾ ಯೇಸುವು ಆಳುತ್ತಾನೆ ಅಲ್ಲಿ ಸಮೃದ್ಧ

ಜೀವನವಿರುವುದು. ನಿರ್ಜೀವ, ಕಠಿಣತೆ ಮತ್ತು ತಾತ್ಸಾರ ಭಾವನೆಗಳು, ಹುಮ್ಮಸ್ಸು ಉದ್ದೇಶಗಳಿಗೆ ಎಡೆಕೊಡುವುದು. ಇದು ಜೀವನದ ಪರಿಮಾಣ ಮಾತ್ರವಲ್ಲ ದೇವರ ರಾಜ್ಯದ ಮೌಲ್ಯತೆಯಿರುವ ವಿಶೇಷ ಗುಣಮಟ್ಟದ ಜೀವಿತ ವಾಗುವುದು. ಯೇಸುವು ಜೀವ ಕೊಡುವುದಕ್ಕೂ ಹಾಗೂ ಸಮೃದ್ಧಿ ಮಾಡುವುದಕ್ಕೂ ಬಂದನು.

**4. ವಿಭಿನ್ನತೆ (ವ.10)**

''ಆಗ ಸಮುದ್ರದ ತೀರದಲ್ಲಿ ಬೆಸ್ತರು ನಿಂತಿರುವರು; ಎಂಗೆಡಿಯಿಂದ ಏನ್ ಎಗ್ಲೇಮಿನವರೆಗೆ ದಡವೆಲ್ಲಾ ಬಲೆ ಹಾಸುವ ಸ್ಥಳವಾಗುವುದು; ಬಗೆ ಬಗೆಯ ಮೀನುಗಳು ಮಹಾಸಾಗರದ ಮೀನುಗಳಂತೆ ಅವರಿಗೆ ರಾಶಿರಾಶಿಯಾಗಿ ಸಿಕ್ಕುವುವು.''

ದೇವರಾತ್ಮನು ಚಲಿಸುವ ಕಡೆಯಲ್ಲಿ ವೈವಿಧ್ಯತೆಗೆ ಅವಕಾಶವಿರುವುದು ಮತ್ತು ಅದಕ್ಕೆ ಮೌಲ್ಯತೆ ಮತ್ತು ಗೌರವವಿರುವುದು. ಇದು ಜೀವ ಸ್ವರೂಪನಾದ ದೇವರ ಪ್ರಸನ್ನತೆಯ ಗುರುತಾಗಿದೆ. ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತನ ದೇಹದಲ್ಲಿ ವಿವಿಧವಾದ ಆತ್ಮೀಕ ವರಗಳಿರುವುದನ್ನು ಕಾಣುತ್ತೇವೆ. ದೇಹದ ಪೋಷಣೆಗಾಗಿ ಬೇರೆಬೇರೆ ಆತ್ಮೀಕ ವರಗಳು ಕೊಡಲ್ಪಡುವುದು. ಈ ಹಿನ್ನೆಲೆಯಲ್ಲಿ ವೈವಿಧ್ಯತೆ ಯಲ್ಲಿ ಆನಂದಿಸುವುದು, ನಮ್ಮ ಮಧ್ಯೆ ದೇವರಾತ್ಮನ ಪ್ರಸನ್ನತೆಯನ್ನು ನಿರೂಪಿಸುವುದು.

**5. ಆಧಾರ ನೀಡುವ ವೃತ್ತಿ (ವ.10)**

''ಸಮುದ್ರ ತೀರದಲ್ಲಿ ಬೆಸ್ತರು ನಿಂತಿರುವರು. ಎಂಗೆಡಿಯಿಂದ ಏನ್ ಎಗ್ಲೇಮಿನವರೆಗೆ ದಡವೆಲ್ಲಾ ಬಲೆ ಹಾಸುವ ಸ್ಥಳ ವಾಗುವುದು; ಬಗೆಬಗೆಯ ಮೀನುಗಳು ಮಹಾಸಾಗರದ ಮೀನುಗಳಂತೆ ಅವರಿಗೆ ರಾಶಿರಾಶಿಯಾಗಿ ಸಿಕ್ಕುವುವು.''

ದೇವರಾತ್ಮನು ಚಲಿಸಿದಂತೆ ಗೌರವವು ಮತ್ತೆ ದೊರೆಯುವುದು ಮತ್ತು ಜನರು ಆರ್ಥಿಕವಾಗಿ ಸ್ವಾವಲಂಬಿ ಗಳಾಗುವರು. ಇದೂ ಸಹ ದೇವರ ಪ್ರಸನ್ನತೆಯ ಒಂದು ಕುತೂಹಲವಾದ ಗುಣವಾಗಿರುವುದು.

**6. ಕಾರ್ಯನಿರ್ವಹಣೆಯಲ್ಲಿ ಸಮತೋಲನ (ವ.11)**

''ಆದರೆ ಅದರ ಸುತ್ತಣ ಜವುಗು ನೆಲವೂ ಸವುಳು ಹೊಂಡಗಳೂ ಸಿಹಿಯಾಗುವುದಿಲ್ಲ, ಅವು ಉಪ್ಪಿನ ಗಣಿಗಳಾಗುವುವು.

ದೇವರಾತ್ಮನು ಚಲಿಸುವಾಗ ಪ್ರತಿ ಕಾರ್ಯದಲ್ಲಿಯೂ ದೈಹಿಕ, ಸಾಮಾಜಿಕ ಅಥವಾ ಆರ್ಥಿಕ ಅಗತ್ಯತೆಗೆ ತಕ್ಕಂತೆ ಸಮತೋಲನವಾಗಿ ನಡೆಸಲಾಗುವುದು.

**7. ಆಹಾರ ಮತ್ತು ಒದಗಿಸುವಿಕೆ (ವ.12)**

ತೊರೆಯ ಎರಡು ದಡಗಳಲ್ಲಿಯೂ ಸಕಲ ಫಲವೃಕ್ಷಗಳು ಬೆಳೆಯುವುವು; ದೇವರಾತ್ಮನು ಚಲಿಸುವಾಗ ಮತ್ತು ಯೇಸುವು ಆಳುವಾಗ ಆಹಾರದ ಮತ್ತು ಒದಗಿಸುವಿಕ 'ಯಲ್ಲಿ ಯಾವ ಕೊರತೆಯೂ ಬಾರದು. ಪ್ರತಿ ಮೂಲ ಅಗತ್ಯತೆಯೂ ಒದಗಿಸಲ್ಪಡುವುದು. ಯೇಸುವು ದೇವರ ರಾಜ್ಯದ ಈ ಸೂತ್ರವನ್ನು ಈ ಲೋಕದಲ್ಲಿ ದೈಹಿಕವಾಗಿದ್ದಾಗ ತೋರಿಸಿದನು.

**8. ಸುರಕ್ಷತೆ ಮತ್ತು ಕೆಡುವುದಿಲ್ಲ (ವ.12)**

ಅವುಗಳ ಎಲೆ ಬಾಡದು, ಹಣ್ಣು ತೀರದು. ಮೂಲವು ದೇವರಾಗಿದ್ದು ಪ್ರಸ್ತುತವಾಗಿ ಆತನ ಪ್ರಸನ್ನತೆಯಿಂದ ಆವರಿಸಿರುವಾಗ ಕೆಡುವ ಪರಿಸ್ಥಿತಿ ಇರುವುದಿಲ್ಲ, ಬದಲಾಗಿ ದೇವರಾಜ್ಯದ ಮೌಲ್ಯತೆಯಿರುವುದೆಲ್ಲವೂ ಸುರಕ್ಷಿತ ವಾಗಿರುವುದು. ನಾವು ಭೂಮಿಗೆ ಉಪ್ಪಾಗಿದ್ದೇವೆಂದು ಹೇಳಿದ್ದಾನೆ. ದೇವರಾತ್ಮನ ಇರುವಿಕೆಯಲ್ಲಿ ಈ ಸತ್ಯತೆಯು ಕುಟುಂಬದಲ್ಲಿ, ಸಮಾಜದಲ್ಲಿ ಮತ್ತು ಸಭೆಯಲ್ಲಿ ಅನ್ವಯಿಸುವುದು. 2 ಕೊರಿಂಥ 3:17ರಲ್ಲಿ ''ಆ ಕರ್ತನು ದೇವರಾತ್ಮನೇ; ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆ ಉಂಟು'' ಎಂದು ನೋಡುತ್ತೇವೆ.

**9. ಹೊಂದಾಣಿಕೆ (ವ.12)**

''ಅವುಗಳ ಎಲೆ ಬಾಡದು, ಹಣ್ಣು ತೀರದು; ತೊರೆಯ ನೀರು ಪವಿತ್ರಾಲಯದೊಳಗಿಂದ ಹೊರಟು ಬರುವುದರಿಂದ ಪ್ರತಿ ತಿಂಗಳು ಹೊಸ ಹೊಸ ಫಲವನ್ನು ಕೊಡುತ್ತಿರುವುದು.'' ಆತ್ಮನು ಹೊಸತನವನ್ನು ಮಾತ್ರವಲ್ಲ ಆ ಹೊಸತನದಲ್ಲಿ ಹೊಂದಾಣಿಕೆಯನ್ನುಂಟು ಮಾಡುವುದು ನಿಷ್ಫ ಲತೆಯಾಗುವುದೇ ಇಲ್ಲ.

**10. ಜನಾಂಗಗಳ ಸ್ವಸ್ಥತೆ (ವ.12)**

''.... ಹಣ್ಣು ಆಹಾರಕ್ಕೂ, ಸೊಪ್ಪು ಔಷಧಕ್ಕೂ ಅನುಕೂಲವಾಗುವುವು.'' ಪ್ರಕಟನೆ ಅಧ್ಯಾಯ 22ರಲ್ಲಿ ದೇವರ ಸಿಂಹಾಸನದಿಂದ ಹರಿಯುವ ನದಿಯನ್ನು ವಿವರಿಸಲಾಗಿದೆ. ಯೋಹಾನನು ಆ ನದಿಯು ಉಭಯ ಪಾರ್ಶ್ವದಲ್ಲಿ ಮರಗಳಿರುವುದನ್ನೂ ಅವುಗಳ ಎಲೆಗಳು ಜನಾಂಗದವರನ್ನು ಗುಣಪಡಿಸುವುದಾಗಿಯಾಗಿಯೂ ನೋಡಿದನು. (ಪ್ರಕಟನೆ 22:2) ದೇವರಾತ್ಮನು ಸಮಾಧಾನ ಪಡಿಸುವ ಆತ್ಮವಾಗಿದ್ದಾನೆ. ಎಲ್ಲಿ ಯೇಸುವು ಆಳುತ್ತಾನೋ ಜನಾಂಗಗಳಲ್ಲಿ, ಸಮುದಾಯಗಳಲ್ಲಿ, ಕುಟುಂಬಗಳಲ್ಲಿ ಹಾಗೂ ವ್ಯಕ್ತಿಗಳಲ್ಲಿ ಸ್ವಸ್ಥತೆ ಮತ್ತು ಸಮಾಧಾನವಿರುವುದು.

**ಮುಕ್ತಾಯ**

ಇಂದಿನ ಹಿನ್ನೆಲೆಯಲ್ಲಿ ನದಿಯು ಕ್ರೈಸ್ತ ಜೀವನದಲ್ಲೂ ಕ್ರಿಸ್ತನ ದೇಹವಾದ ಸಭೆಯಲ್ಲಿಯೂ ಹರಿಯುವುದು. ದೇವರಾತ್ಮನ ಕಾರ್ಯದಿಂದ ಈ ಎಲ್ಲಾ ಗುಣಗಳು ವಿಶಾಲ ಸಮಾಜದಲ್ಲಿ ಕಾರ್ಯ ನಡೆಸಬೇಕು. ''ಕ್ರಿಸ್ತನು ಎಂಥವನಾಗಿದ್ದಾನೋ ನಾವೂ ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ.''

---

ಬೈಸನ್ ಹಾರನ್ ಮಿಡಿಯಾದ ಆಡಿಯೋ ಬೈಬಲ್

# ಅವರು ದೇವರ ವಾಕ್ಯವನ್ನು ಕೇಳಬೇಕು

ಸುಮಾರು 10%ರಷ್ಟು ಬೈಸನ್ ಹಾರನ್ ಮಡಿಯಾ ಜನರು ಅನಕ್ಷರಸ್ಥರಾಗಿದ್ದಾರೆ. ಇವರಿಗೆ ಓದುವುದು ಕಷ್ಟಕರವಾಗಿದೆ. ಆಡಿಯೋ ಬೈಬಲ್ ಎಂಬ ತಂತ್ರಜ್ಞಾನ ಸಾಧನದಿಂದ ಸಿದ್ಧಪಡಿಸಿದ್ದು ಅನಕ್ಷರಸ್ಥರೂ ಸಹ ದೇವರ ವಾಕ್ಯವನ್ನು ತಮ್ಮ ಮಾತೃಭಾಷೆಯಲ್ಲಿ ಕೇಳಬಹುದು. ಸ್ಥಳೀಯ ಸುವಾರ್ತಿಕ ಸೌಂದರ್ ಬೆಂಗಳೂರಿಗೆ ಬಂದು ಟ್ರಾನ್ಸ್ ವರ್ಲ್ಡ್ ರೇಡಿಯೋ ಸ್ಟುಡಿಯೋದಲ್ಲಿ ಬೈಸನ್ ಹಾರನ್ ಮಡಿಯಾದ ಹೊಸ ಒಡಂಬಡಿಕೆಯ ರೆಕಾರ್ಡಿಂಗ್ ಮಾಡಿದನು. ಇದು ಸದ್ಯದಲ್ಲಿಯೇ ಸಿದ್ಧವಾಗುವುದು. ಈ ಯೋಜನೆಗಾಗಿ ಪ್ರಾರ್ಥಿಸಿರಿ.



**ಸೌಂದರ್ ಟಿ.ಡಬ್ಲ್ಯೂ.ಆರ್. ಸ್ಟುಡಿಯೋನಲ್ಲಿ**

ಶ್ರೀ/ಶ್ರೀಮತಿ ರಾಜ್‌ಕುಮಾರ್
ಬೈಸನ್ ಹಾರನ್ ಮಡಿಯಾ ಜನರ
ಮಧ್ಯೆ ಸಾಕ್ಷರತಾ ಕಾರ್ಯಕರ್ತೃಗಳಾಗಿದ್ದ ಸುವಾರ್ತಿಕರು

---

ವಿಶೇಷ ಪ್ರಾರ್ಥನಾ ಮಾಲಿಕೆಯಲ್ಲಿ ಈ ಕೆಳಗಿನ ಹೆಸರುಗಳನ್ನು ಬಿಡಲಾಗಿದ್ದಕ್ಕಾಗಿ ವಿಷಾದಿಸುತ್ತೇವೆ.

ಶ್ರೀ/ಶ್ರೀಮತಿ ಸುನಿಲ್‌ಕುಮಾರ್ ನಿವೃತ್ತ ಸುವಾರ್ತಿಕರು ಬೆಂಗಳೂರು

ಅಮಿಯಾನಂದ್ ನಾಗ್/ಅನ್ನಮೇರಿ (ಹೊಸೂರು), ರಮೇಶ್ ಎಲಾಂಚೆಳಿಯನ್/ಸೊಲೋಮಿ (ಹೊಸೂರು), ಜೆಬಕುಮಾರ್/ ಜೆಬಕ್ರೌನಿ (ಹೈದರಾಬಾದ್), ಜೀವನ ಪೌಲ್/ಮರ್ಸಿ (ಬಸ್ತರ್), ಪ್ರಸಾದ್ ಅಲೆಕ್ಸ್/ಅನಿಮೋಲ್ ಜೇಕೊಬ್ (ಬಸ್ತರ್)

**ಐ.ಇ.ಎಂ.ನ 47ನೇ ರಾಷ್ಟ್ರೀಯ ಸಮ್ಮೇಳನ**

2012ರ ಅಕ್ಟೋಬರ್ 25-28
ಮಣಿನಗರ್ ಮೆಥೋಡಿಸ್ಟ್ ಚರ್ಚ್ - ಮಣಿನಗರ್ ಅಹಮದಾಬಾದ್ - ಗುಜರಾತ್
**ವಿವರಣೆಗಾಗಿ: ಶ್ರೀ ಶೈಲೇಶ್ ಅಮೀನ್ ಐ.ಇ.ಎಂ. ಸಭಾಸೇವಾ ಕಾರ್ಯದರ್ಶಿ (ಉತ್ತರ ಭಾರತ) ಮೊಬೈಲ್: 09662542682**
**ಇಮೇಲ್:** shaishee2003@yahoo.co.in

**ಈ ದಿನಾಂಕವನ್ನು ಗುರುತುಮಾಡಿ**

---

**ಹಾಸ್ಟೆಲ್ಲುಗಳಿಗೆ ಜಾಗವನ್ನು ಕೊಳ್ಳುವುದು**

ಸದ್ಯದಲ್ಲಿ ಐ.ಇ.ಎಂ. 18 ಹಾಸ್ಟೆಲ್ಲುಗ್ಗಳನ್ನು ಅತಿ ಬಡಮಕ್ಕಳಿಗಾಗಿ ನಡೆಸಲಾಗುತ್ತಿದೆ. ಹೆಚ್ಚಿನವುಗಳನ್ನು ಬಾಡಿಗೆ ಮನೆಗಳಲ್ಲಿ ನಡೆಸಲಾಗುತ್ತಿದೆ. ದೇವರ ಚಿತ್ತವಿದ್ದಲ್ಲಿ ಚೆಂಚು (ಆ.ಪ್ರ.) ಗರಾಸಿಯಾ (ಗುಜರಾತು) ಥಾರು (ಉ.ಪ್ರ.) ಖೋಂಡ್ (ಒಡಿಶ) ಈ ನಾಲ್ಕು ಸ್ಥಳಗಳಲ್ಲಿ ಸ್ಥಳಗಳನ್ನು ಕೊಳ್ಳಲಾಗುವುದು. ಪ್ರತಿ ಜಾಗಕ್ಕೆ 115 ಲಕ್ಷ ಖರ್ಚಾಗುವುದು. ಈ ಯೋಜನೆಗಳಿಗೆ ಆರ್ಥಿಕ ನೆರವು ನೀಡಲು ವಿನಂತಿಸಿಕೊಳ್ಳುತ್ತೇವೆ.



ಕೋಟಿಯಾ ಹಾಸ್ಟೆಲ್ ಮಕ್ಕಳು

**ಸಂಪರ್ಕಿಸಲು:**

**The HoD (Finance), 38 Langford Road, Bangalore 560 025,Mobile: 09448597982 E-mail: solomon.sdoss@gmail.com**

# ಆ ಪ್ರಾರಂಭದ ವರ್ಷಗಳು

1978ರ ಜುಲೈನಲ್ಲಿ ಮಧ್ಯಪ್ರದೇಶದ ಮೆಥೋಡಿಸ್ಟ್ ಚರ್ಚ್‌ನ ಕಾನ್ಫರೆನ್ಸ್‌ರವರು ಐ.ಇ.ಎಂ.ನನ್ನು ಬಸ್ತರ್‌ಗೆ ಸುವಾರ್ತಿಕರನ್ನು ಕಳುಹಿಸಲು ಕೇಳಿಕೊಂಡಿತು. ಇದಕ್ಕನುಸಾರವಾಗಿ ರೆವೆ. ಶ್ರೀಮತಿ ಸುಂದರ್ ಜೇಕಬ್ ಮತ್ತು ರೆವೆ. ಶ್ರೀಮತಿ ಜೆಯಪಾಲ್ ಸಿತ್ತರ್‌ರವರನ್ನು



ಬಸ್ತರಿನಲ್ಲಿ ಆರಂಭದ ದಿನಗಳು

ಇಲ್ಲಿ ಸೇವೆಯನ್ನು ಪ್ರಾರಂಭಿಸಲು ಕಳುಹಿಸಲಾಯಿತು. ಬಸ್ತರ್ ಜಿಲ್ಲೆಯ (ಈಗಿನ ಚಟ್ಟೀಸ್‌ಗಡ್) ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್‌ರವರಾದ ರೆವೆ. ವಿಕ್ಟರ್ ಪೀಟರ್‌ರವರು ಎರಡು ಚಿಕ್ಕ ಮನೆಗಳನ್ನು ಕುರುಂಡಿ ಹಳ್ಳಿಯಲ್ಲಿ ಇವರಿಗಾಗಿ ಕಟ್ಟಿಸಿಕೊಟ್ಟರು. ಇಲ್ಲಿ ಸ್ವಲ್ಪ ಸಮಯ ಇದ್ದು ನಂತರ ಜಿಲ್ಲಾ ಕೇಂದ್ರ ಸ್ಥಳವಾದ ಜಗ್ದಲ್ ಪುರ್‌ನಿಂದ 19 ಕಿ.ಮೀ.ಗಳ ದೂರದಲ್ಲಿರುವ ಬಡೇ ಮುಡುಮ ಮತ್ತು ಜಗ್ದಲ್ ಪುರದ ಉತ್ತರ ದಲ್ಲಿರುವ ಸರ್ಗೀಪಾಲ್ ಈ ಎರಡು ಸ್ಥಳಗಳನ್ನು ಕಂಡು ಕೊಂಡರು. ಈ ಎರಡು ಸ್ಥಳಗಳಲ್ಲಿ ಮೆಥೋಡಿಸ್ಟ್ ಸಭೆಯ ಕಟ್ಟಡಗಳಿದ್ದವು. ಇದಕ್ಕೆ ಅನುಮತಿಯನ್ನು ಪಡೆದು ಆ ಮನೆಗಳನ್ನು ರಿಪೇರಿ ಮಾಡಿಕೊಂಡರು.

1983ರಲ್ಲಿ ಶ್ರೀ ಶೈಲೇಶ್ ಅಮೀನ್ ಮತ್ತು ಪತ್ನಿ ಪರ್ಲ್ ಶೀಲಾ ಇವರೊಂದಿಗೆ ಸೇರಿಕೊಂಡರು. ಶೀಲಾ ಶಿಕ್ಷಿತ ನರ್ಸಾಗಿದ್ದುದರಿಂದ ವೈದ್ಯಕೀಯ ಸೇವೆಯನ್ನು ಆರಂಭಿಸಿದರು. ಇವರು ಹಲ್ಬಿ, ಭತ್ರಿ ಭಾಷೆಗಳನ್ನು ಬೇಗನೆ ಕಲಿತುಕೊಂಡರು. ನಂತರ ಧುರ್ವ ಭಾಷೆಯನ್ನು ಕಲಿತರು. ಪರ್ಲ್ ಶೀಲಾ ಹಲ್ಬಿ ಮತ್ತು ಭತ್ರಿ ಭಾಷೆಗಳಲ್ಲಿ ಹಾಡುಗಳನ್ನು ರಚಿಸಿದ್ದಲ್ಲದೆ ಹಲ್ಬಿ ಭಾಷೆಯಲ್ಲಿ ಅಕ್ಷರಭ್ಯಾಸದ ಪುಸ್ತಕಗಳನ್ನು ಸಿದ್ಧಪಡಿಸಿದರು. ಜನರಿಗೆ ಹಲ್ಬಿ ತರಗತಿಗಳನ್ನು ಪ್ರಾರಂಭಿಸಿ ಅನೇಕರಿಗೆ ಇದು ಪ್ರಯೋಜಕವಾಯಿತು.

ಒಂದು ಸಂದರ್ಶನದಲ್ಲಿ ಬಿಷೋಪರಾದ ನಿಮ್ರೋದ್ ಕ್ರಿಶ್ಚಿಯನ್‌ರವರು ''ಬಸ್ತರ್ ಕ್ಷೇತ್ರದಲ್ಲಿ ನೂರಾರು ಜನರಿಗೆ ಸ್ನಾನದೀಕ್ಷೆ ಕೊಟ್ಟಿದ್ದೇನೆ'' ಎಂದು ಸಾಕ್ಷಿ ಹೇಳಿದರು. ಐ.ಇ.ಎಂ.ನ ವಾರ್ಷಿಕ ವರದಿಯ ಪ್ರಕಾರ ಬಸ್ತರ್‌ನಲ್ಲಿ 212 ಜನರು ದೀಕ್ಷಾಸ್ನಾನ ಹೊಂದಿದ್ದು ಇದು ಅತಿ ಹೆಚ್ಚಾದ ಸಂಖ್ಯೆಯಾಗಿದೆ.

ಸತ್ಯವೇದ ಭಾಷಾಂತರವನ್ನು ಪ್ರಾರಂಭಿಸಲಾಯಿತು. 1997ರಲ್ಲಿ ಎರಡು ಸಭೆಗಳನ್ನು ಮೆಥೋಡಿಸ್ ಸಭೆಗೆ ವಹಿಸಿಕೊಡಲಾಯಿತು. ನಮ್ಮ ಸುವಾರ್ತಿಕರಾದ ರೆವೆ.



ಕಲಿಯುವ ಆನಂದ

ಶ್ರೀಮತಿ ಸೌಲಿಕರ್ ಸರ್ಗೀಪಾಲ್‌ನ ಸಭಾಪಾಲಕ ರಾಗಿದ್ದಾರೆ. ಇದು ಭತ್ರಿ ಸಭೆಯಾಗಿದೆ. ಬಡೆ ಮುಡು ಮಾದಲ್ಲಿರುವ ಸಭೆಯಲ್ಲಿ ಮಹರ್, ಧುರ್ವ, ಬೈಸನ್ ಹಾರನ್ ಮಡಿಯಾ ಸಂಗಡದವರು ಆರಾಧಿಸುತ್ತಾರೆ. ಸುಮಾರು 100 ಕಿ.ಮೀ.ಗಳ ಅಂತರದಲ್ಲಿ ಅನೇಕ ಚಿಕ್ಕ ಸಭೆಗಳಿವೆ.

**ಶ್ರೀಮತಿ ಪರ್ಲ್ ಶೀಲಾ ಅಮೀನ್**

ಬಸ್ತರ್‌ನ ಹಿಂದಿನ ಸುವಾರ್ತಿಕಳು

ಈಗ ಗುಜರಾತಿನ ರಾಜ್ಯ ಕಾರ್ಯದರ್ಶಿ

ಬಸ್ತರಿನಲ್ಲಿ ದೂರ ದೃಷ್ಟಿಯು ನೆರವೇರಿತು

# ಪ್ರತಿ ವ್ಯಕ್ತಿಗೂ ಸುವಾರ್ತೆ ಪ್ರತಿಜನರ ಗುಂಪಿನಲ್ಲಿ ಒಂದು ಸಭೆ

**ಆದಿ ಪರಿಶೋಧಕರು**

ಈ ದೂರದೃಷ್ಟಿಯನ್ನಿಟ್ಟುಕೊಂಡು ಐ.ಇ.ಎಂ. ಬಸ್ತರಿನಲ್ಲಿ ಸುವಾರ್ತಾ ಕ್ಷೇತ್ರವನ್ನು ಪ್ರಾರಂಭಿಸಲಾಯಿತು. ಇದು ಚಟ್ಟೀಸ್‌ಗಡ್‌ನಲ್ಲಿ ಒಂದು ಜಿಲ್ಲೆಯಾಗಿದೆ. 1978ರಲ್ಲಿ ಶ್ರೀ ಜೆಯಪಾಲ್ ಸಿತ್ತರ್/ಎವಿಲಿನ್, ಶ್ರೀ ಸುಂದರ್ ಜೇಕಬ್/ಫೆಲ್ಸಿ ಆದಿ ಪರಿಶೋಧಕರಾಗಿ ಸೇವೆಯನ್ನು ಪ್ರಾರಂಭಿಸಿದರು. ಅನೇಕ ಹೋರಾಟದ ಮಧ್ಯೆ ದೇವರು ಇವರನ್ನು ಬಲವಾದ ತಳಹದಿ ಹಾಕಲು ಉಪಯೋಗಿಸಿದನು. ಸುವಾರ್ತಾ ಪ್ರಚಾರಣೆ, ಸಭಾ ಸ್ಥಾಪನೆ, ನಾಯಕರ ಶಿಕ್ಷಣ, ವೈದ್ಯಕೀಯ ಸೇವೆ, ಸತ್ಯವೇದದ ಭಾಷಾಂತರ ಮತ್ತು ಸಾಕ್ಷರತಾ ಕಾರ್ಯಕ್ರಮ ಇವೆಲ್ಲವನ್ನು ಪ್ರಾರಂಭಿಸಲಾಯಿತು. 1982ರಿಂದ ಮುಂದೆ ಇನ್ನೂ ಅನೇಕ ಸುವಾರ್ತಿಕರು ಇಲ್ಲಿನ ಸೇವೆಗೆ ಬಂದು ಸೇರಿದರು. ಇವರೆಲ್ಲರೂ ಇಲ್ಲಿನ ಪ್ರಾಂತಭಾಷೆಯನ್ನು ಕಲಿತು ಜನರ ಸಂಸ್ಕೃತಿಯನ್ನು ತಿಳಿದುಕೊಂಡರು.

**ಆತನ ಕೃಪೆಯ ಪಾರಿತೋಷಕ**

ನಾಲ್ಕು ಹಳ್ಳಿಗಳ ಮಕ್ಕಳನ್ನು ಲಮ್ಟಾಪುಟ್, ಸುಕ್ಮ, ಜಗ್ದಲ್‌ಪುರ್, ಮರಿಗುಡ ಮತ್ತು ಬಡೆ ಮುರ್ಮ ಶಾಲೆಗಳಲ್ಲಿ ಸೇರಿಸಲಾಯಿತು. ನಾನು 50 ಮಕ್ಕಳ ಮೇಲ್ವಿಚಾರಕನಾಗಿದ್ದೆನು. ರೆವೆ. ಪ್ರೇಮ್ ಕುಮಾರ್ ಎಂ.ಎಸ್.ಸಿ. (ಗಣಿತಶಾಸ್ತ್ರ) ಮಾಡಿದ ನಂತರ ದೇವರ ಕರೆ ಬಂದಿತು. ಈತ ಎಂ.ಟಿ.ಹೆಚ್. ವ್ಯಾಸಂಗವನ್ನು ಏ.ಸಿ.ಏ.ನಲ್ಲಿ ಪೂರ್ಣಗೊಳಿಸಿ ಈಗ ಬಿಲಾಸ್‌ಪುರದ ಒಂದು ಸಭಾ ಪಾಲಕನಾಗಿದ್ದಾನೆ. ಕೃಷ್ಣ ಕುಮಾರ್ ತನ್ನ ಎಂ.ಎಸ್.ಸಿ. (ರಾಸಾಯನಿಕ ಶಾಸ್ತ್ರ) ಮುಗಿಸಿ ಈಗ ಒಂದು ಪ್ರೌಢಶಾಲೆಯಲ್ಲಿ ಅಧ್ಯಾಪಕನಾಗಿದ್ದಾನೆ. ಕಮಲ್ ಕುಮಾರ್ ಕಶ್ಯಪ್ ಬಿ.ಕಾಮ್. ಮುಗಿಸಿ ಮುಸಲ್ಮಾನರ ಮಧ್ಯೆ ಸೇವೆ ಮಾಡಲು ಅಪೇಕ್ಷಿಸಿದನು. ತನ್ನ ಎಂ.ಡಿವ್. ವ್ಯಾಸಂಗವನ್ನು ಪುಣೆಯ ಯು.ಬಿ.ಎಸ್.ನಲ್ಲಿ ಮುಗಿಸಿ ಹೈದರಾಬಾದಿನ ಹೆನ್ರಿ ಮಾರ್ಟಿನ್ ಇನ್‌ಸ್ಟಿಟ್ಯೂಟಿನಲ್ಲಿ ಓದಿದ ನಂತರ ಈಗ ಸರ್ಗಿಪಾಲ್ ಮೆಥೋಡಿಸ್ಟ್ ಸಭಾಪಾಲಕನಾಗಿದ್ದಾನೆ. ಕು. ಆರಾಧನಾ ದನ್ ತನ್ನ ನರ್ಸಿಂಗ್ ಶಿಕ್ಷಣವಾದ ನಂತರ ಈ ಮುಂಬೈನ ಬಾಂಬೆ ಆಸ್ಪತ್ರೆಯಲ್ಲಿ ಸೇವೆ ಮಾಡುತ್ತಿದ್ದಾಳೆ. ರೆವೆ. ವಿನಯ್ ಪೀಟರ್ ಸರ್ ಈಗ ಮಧ್ಯಪ್ರದೇಶದ ರೀಜನಲ್ ಕಾನ್ಫರೆನ್ಸ್‌ನ ಕಾರ್ಯ ನಿರ್ವಾಹಕ ಕಾರ್ಯದರ್ಶಿ ರೆವೆ. ಜೆಯಪಾಲ್ ಸಿತ್ತರ್‌ರವರ ಶ್ರಮದ ಫಲವಾಗಿದ್ದಾರೆ. ರೆವೆ. ಡಾಲ್ವೆಯವರು ರೆವೆ. ಸುಂದರ್ ಜೇಕಬ್‌ರವರ ಸೇವೆಯ ಫಲವಾಗಿದ್ದಾರೆ.

ಸುವಾರ್ತಾ ಪ್ರಚಾರಣಾ ತಂಡವು ಯೌವನಸ್ಥರೊಂದಿಗೆ ರಚಿಸಲಾಗಿದ್ದು ನಮ್ಮ ಗುರಿ ನುಡಿಯು "ನಿಮ್ಮ ಅಕ್ಕಿ ಮತ್ತು ನಿಮ್ಮ ಸೈಕಲ್ ಎಂಬುದೇ. ನಮ್ಮ ಸೇವಾ ಪ್ರದೇಶವು 100 ಕಿ.ಮೀ.ಗಳ ಅಂತರವಾಗಿದ್ದು ಬಡೆ ಮುರ್ಮದಿಂದ ಒರಿಸ್ಸಾದ ಗಡಿಯವರೆಗೂ ಮತ್ತು ಆಂಧ್ರಪ್ರದೇಶದ ಸಿರೋಂಚದವರೆಗೂ ಆಗಿತ್ತು. ನಾವು ಸಾಮೂಹಿಕ ಸುವಾರ್ತಾ ಕಾರ್ಯಕ್ರಮಗಳನ್ನು ಹಳ್ಳಿಗಳ ಮೇಳಗಳು, ಹಳ್ಳಿಯ ಮಾರುಕಟ್ಟೆಗಳು, ಹಬ್ಬಗಳು, ವಾರ್ಷಿಕ ಪೂಜೆಗಳು, ವಿವಾಹ ಸಮಾರಂಭಗಳು, ವನ ಭೋಜನ ಸ್ಥಳಗಳು ಇವೆಲ್ಲಾ ಕಡೆಗಳಲ್ಲಿ ಯೌವನಸ್ಥರು ಬಹಿರಂಗ ಕೂಟಗಳನ್ನು ನಡೆಸಿ ಬೋಧಿಸಲು ಕಲಿತಿದ್ದಾರೆ.

**ಸುವಾರ್ತಿಕರ ಪ್ರತಿಷ್ಠಾರಾಧನೆ**

ಹತ್ತು ದಂಪತಿಗಳು 10 ಯುವಕರನ್ನು ಪೂರ್ಣಾವಧಿಯ ಸೇವೆಗಾಗಿ ಪ್ರತಿಷ್ಠಿಸಲಾಗಿದ್ದು ಇವರಲ್ಲಿ ನಾಲ್ಕು ಮಂದಿ ಐ.ಇ.ಎಂ.ನಲ್ಲಿ ಸೇವೆ ಮಾಡುತ್ತಿದ್ದಾರೆ. ಒಬ್ಬನು ಏಶಿಯನ್ ಕ್ರಿಶ್ಚಿಯನ್ ಅಕಾಡೆಮಿಯಲ್ಲಿ ವ್ಯಾಸಂಗ ಮುಗಿಸಿ ಬಿಲಾಸ್‌ಪುರದ ಬ್ರದರನ್ ಸಭೆಯಲ್ಲಿ ಸೇವೆ ಮಾಡುತ್ತಿದ್ದಾನೆ. ಮಿಕ್ಕವರು ಮೆಥೋಡಿಸ್ಟ್; ಇ.ಸಿ.ಐ., ಸಿ.ಜಿ.ಎಂ.ಎಂ. ಸಭೆಗಳಲ್ಲಿ ಸೇವೆ ಮಾಡುತ್ತಿದ್ದಾರೆ. ಕೆಲವರು ಎಂ.ಟಿ.ಹೆಚ್., ಬಿ.ಡಿ., ಬಿ.ಟಿ.ಹೆಚ್., ಜಿ.ಟಿ.ಹೆಚ್. ಮತ್ತು ಅಲ್ಪಾವಧಿ ವ್ಯಾಸಂಗಗಳನ್ನು ಮಾಡಿದ್ದಾರೆ.

**ಸತ್ಯವೇದ ಭಾಷಾಂತರ**

ಬಸ್ತರಿನಲ್ಲಿ 7 ಆದಿವಾಸಿ ಪಂಗಡಗಳಿವೆ. ಈ ಸ್ಥಳೀಯ ಭಾಷೆಗಳಲ್ಲಿ ಸತ್ಯವೇದ ಭಾಷಾಂತರದ ಅಗತ್ಯತೆಯು ಕಂಡು ಬಂದಿತು. ಜೀಸಸ್ ಚಲನ ಚಿತ್ರ ಮತ್ತು ಬೈಸನ್ ಹಾರನ್ ಮಡಿಯಾ ಭಾಷೆಯಲ್ಲಿ ಸತ್ಯವೇದ ಭಾಷಾಂತರವು ಪೂರ್ಣಗೊಂಡಿದೆ. ಭತ್ರಿ ಮತ್ತು ಧುರ್ವ ಭಾಷೆಗಳಲ್ಲಿ ಭಾಷಾಂತರವು ಮುಂದುವರೆಯುತ್ತಿದೆ. ಭತ್ರಿ ಜನರ ಮಧ್ಯೆ ಸಭೆಯು ವೃದ್ಧಿಯಾಗುತ್ತಿದೆ.

ಜಗ್ದಲ್‌ಪುರ್ ಮೆಥೋಡಿಸ್ಟ್ ಸಭೆಯಲ್ಲಿ ಸುಕ್ಮ, ಬೈಲಾಡಿಲ ಮತ್ತು ಕಿರಂದೂಲ್‌ನಲ್ಲಿ 3 ಸ್ಥಳೀಯ ಕಾರ್ಯದರ್ಶಿಗಳಿದ್ದಾರೆ. ಜಬ್ಬಲ್‌ಪುರ್‌ದ ಇಂಗ್ಲೀಷ್ ಮೆಥೋಡಿಸ್ಟ್ ಚರ್ಚಿನವರು ಝಾರ್ಕಂಡ್‌ನಲ್ಲಿರುವ ಸುವಾರ್ತಿಕ ರೆವೆ. ಸತ್ಯ ರಂಜನ್ ಸೊರೇನ್‌ರವರಿಗೆ ಬೆಂಬಲ ನೀಡುತ್ತಿದ್ದಾರೆ.

**ಶೈಲೇಶ್ ಅಮೀನ್**
ಬಸ್ತರಿನ ಹಿಂದಿನ ಸುವಾರ್ತಿಕ
ಸಭಾಸೇವಾ ಕಾರ್ಯದರ್ಶಿ (ಉತ್ತರ)

---

ಮುಂದಿನ ಯಥಾದೃಷ್ಟಿ

# ನಮ್ಮ ಮಡಿಯಾ ಜನರು

*(ಗತಕಾಲವು ನೆನಪುಗಳಿಂದ ತುಂಬಿದ್ದು ಮುಂದಿನದು ಹಾರೈಕೆಗಳಿಂದಲೂ ಪ್ರಾರ್ಥನಾ ಬೇಡಿಕೆಗಳಿಂದಲೂ ತುಂಬಿರುವುದು. ಡಾ. ಜೋಸೆಫ್ ಸೌಂದರರಾಜ್ ಮತ್ತು ಆತನ ಪತ್ನಿ ಡಾ. ಓಮನಾ ಸೌಂದರರಾಜ್ ಬೈಸನ್ ಹಾರನ್ ಮಡಿಯಾ ಜನರ ಮಧ್ಯೆ ಸತ್ಯವೇದ ಭಾಷಾಂತರಕಾರರಾಗಿ ಸೇವೆ ಮಾಡಿದರು. ಇವರು ಹೊಸ ಒಡಂಬಡಿಕೆಯನ್ನು ಬೈಸನ್ ಹಾರನ್ ಮಡಿಯಾ ಭಾಷೆಗೆ ಭಾಷಾಂತರಿಸಿದ್ದಾರೆ. ಬೈಸನ್ ಹಾರನ್ ಮಡಿಯಾ ಜನರ ಕುರಿತು ಕನಸನ್ನು ನಮ್ಮ ಮುಂದಿಟ್ಟು ಈ ಜನರಿಗಾಗಿ ಪ್ರಾರ್ಥಿಸುವಂತೆ ಕೇಳಿಕೊಂಡಿದ್ದಾರೆ.)*


**ಶ್ರೀಮತಿ ಓಮನಾ ಬೈಸನ್ ಹಾರನ್ ಮಡಿಯಾದ ಹೊಸ ಒಡಂಬಡಿಕೆಯನ್ನು ಹಿಡಿದಿದ್ದಾಳೆ**

ಇವರ ಸತ್ಯವೇದ ಭಾಷಾಂತರ ಸೇವೆಯು ವರ್ಗೀಯ ಮತ್ತು ಸಂಸ್ಥೆಗಳ ಎಲ್ಲೆ ಮೀರಿದ್ದಾಗಿದೆ. ಸೇವೆಯ ವ್ಯಾಪ್ತಿಯು ಇಡೀ ಜನರ ಪಂಗಡವಾಗಿದ್ದು, ಕ್ರಿಸ್ತನ ದೇಹವಾಗಿರುವವರನ್ನು ಒಳಗೊಂಡಿರುವುದು. ದೇವರು ತನ್ನ ಕರುಣೆ ಮತ್ತು ಕೃಪೆಯಿಂದ ಮಡಿಯಾ ಜನರಿಗೆ ಮಡಿಯಾ ಭಾಷೆಯಲ್ಲಿ ಹೊಸ ಒಡಂಬಡಿಕೆಯನ್ನು ನೀಡಲು ನಮ್ಮನ್ನು ಆಯ್ಕೆ ಮಾಡಿದನು.

ಮಡಿಯಾ ಜನರು ಮತ್ತು ಮಡಿಯಾ ಸಭೆಗಾಗಿ ನಮ್ಮ ಹೃದಯ ಮಿಡಿಯಿತು.

- ಮಡಿಯಾ ಜನರ ಮಧ್ಯೆ ಸೇವೆ ಮಾಡುತ್ತಿರುವ ಐ.ಇ.ಎಂ. ಸುವಾರ್ತಿಕರ ಪ್ರಯತ್ನವನ್ನು ಆಶೀರ್ವದಿಸಲೆಂದೂ
- ಹೆಚ್ಚಿನ ಮಂದಿ ಮಡಿಯಾ ಜನರು ಯೇಸುಕ್ರಿಸ್ತನ ಮೂಲಕ ರಕ್ಷಣೆಯ ಭರವಸೆಯನ್ನು ಹೊಂದುವಂತೆಯೂ
- ಪ್ರತಿ ಮಡಿಯಾ ವಿಶ್ವಾಸಿಯು ಅಕ್ಷರಸ್ಥನಾಗಿ ತನ್ನ ಮಾತೃಭಾಷೆಯಲ್ಲಿ ಸತ್ಯವೇದವನ್ನು ಓದಿ ಅದನ್ನು ತನ್ನ ಜೀವಿತಕ್ಕೆ ಅಳವಡಿಸಿಕೊಳ್ಳುವಂತೆಯೂ
- ತಮ್ಮ ಸ್ವಂತ ಜನರ ಮಧ್ಯೆ ಬಲವಾದ ಸಾಕ್ಷಿಗಳಾಗಿರುವಂತೆಯೂ



- ಸಂಸ್ಕೃತಿಗೆ ತಕ್ಕಂತೆ ಮಡಿಯಾ ಬೈಬಲ್ ಶಾಲೆಯನ್ನು ಪ್ರಾರಂಭಿಸಿ ಅಭಿವೃದ್ಧಿಪಡಿಸುವಂತೆಯೂ
- ಸ್ಥಳೀಯ ನಾಯಕರು ವಾಕ್ಯದಲ್ಲಿ ನೆಲೆಗೊಂಡು ತಮ್ಮ ಸ್ವಂತ ಜನರ ರಕ್ಷಣೆಯ ಬಗ್ಗೆ ಆಸಕ್ತರಾಗಿರುವಂತೆಯೂ
- ಮಡಿಯಾದ ಸ್ತ್ರೀಪುರುಷರೇ ಹಳೆಯ ಒಡಂಬಡಿಕೆಯನ್ನು ಭಾಷಾಂತರಿಸುವಂತೆಯೂ
- ಆರಾಧನೆಯಲ್ಲಿ ವೇದೋಕ್ತಿಯ ಆಧಾರಿತ ಹಾಡುಗಳನ್ನು ರಚಿಸಿ ಹಾಡುವಂತೆಯೂ
- ಮಡಿಯಾ ಸಭೆಯವರು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಪ್ರಶಂಸಿಸಲು ಹಾಗೂ ದೇವರ ವಾಕ್ಯಕ್ಕೆ ತಕ್ಕಂತೆ ಇಲ್ಲದಿರುವುದನ್ನು ಅರಿತು ಅದನ್ನು ನಿರಾಕರಿಸುವಂತೆಯೂ
- ಯೇಸುಕ್ರಿಸ್ತನ ಬರೋಣದವರೆಗೂ ಮಡಿಯಾ ಸಭೆಯು ಹಿಂಸೆಯನ್ನೂ ಎಲ್ಲಾ ಅಡೆತಡೆಗಳನ್ನೆದುರಿಸಿ, ದೃಢವಾಗಿರುವಂತೆಯೂ

ನಮ್ಮ ಈ ಹೃದಯದ ಭಾರವನ್ನು ನೀವೂ ಹಂಚಿಕೊಂಡು ಪ್ರಾರ್ಥಿಸುವಿರೆಂದು ನಂಬಿದ್ದೇವೆ.

ಒಂದು ಹೊರನೋಟ: ಬಸ್ತರಿನ ಭತ್ರಿ ಜನರು

# ಯೇಸುವು ಮಾರ್ಪಡಿಸುತ್ತಾನೆ

## ನೀಲಾವತಿಯ ಕಥೆ

ನೀಲಾವತಿಯು ಮಾನಸಿಕ ಕೊರತೆಯ ಮಹಿಳೆ. ಇವಳು ವಿವಾಹವಾಗಿದ್ದರೂ ಈ ಸಮಸ್ಯೆಯಿಂದಾಗಿ ತೌರಿನಲ್ಲಿಯೇ ಇರಬೇಕಾಯಿತು. ಇವರ ಮನೆಯು ನಮ್ಮ ಸುವಾರ್ತಿಕರು ಶ್ರೀ/ಶ್ರೀಮತಿ ಸಾಮ್ಯುವೆಲ್ ಎಬಿನ್‌ರವರಿರುವ ಮೊಕ್ಕಾ ಗಾಂವ್‌ನಿಂದ ಮೂರು ಕಿ.ಮೀ.ಗಳ ದೂರದಲ್ಲಿತ್ತು. ನೀಲಾವತಿಯ ಅಜ್ಜಿಗೆ ಈ ಸುವಾರ್ತಿಕರಿರುವುದು ತಿಳಿದಿದ್ದು ಅವಳನ್ನು ಸುವಾರ್ತಿಕರ ಬಳಿಗೆ ಪ್ರಾರ್ಥನೆ ಮಾಡಿಸಿಕೊಳ್ಳಲು ಕರೆತಂದಳು. ಭಾನುವಾರದ ಆರಾಧನೆ ಮುಗಿದ ನಂತರ



ಆರಾಧನೆಯ ಸಮಯ

ವಿಶ್ವಾಸಿಗಳೆಲ್ಲರೂ ಅವಳ ಸುತ್ತಲೂ ನಿಂತು ಅವಳಿಗಾಗಿ ಪ್ರಾರ್ಥಿಸಿದೆವು. ಅವಳನ್ನು ಪ್ರತಿ ಭಾನುವಾರ ಆಲಯಕ್ಕೆ ಕರೆತರುವಂತೆ ಅವಳಜ್ಜಿಗೆ ಹೇಳಿದೆವು. ಆರಾಧನೆಯ ನಂತರ ವಿಶ್ವಾಸಿಗಳೆಲ್ಲರೂ ಅವಳಿಗಾಗಿ ಪ್ರಾರ್ಥಿಸುತ್ತಿದ್ದರು. ಇದಲ್ಲದೆ ಜಗ್ದಲ್‌ಪುರದ ಒಬ್ಬ ಮಾನಸಿಕ ವೈದ್ಯರ ಬಳಿಗೆ ಕರೆದೊಯ್ದವು. ಆತನು ಇವಳಿಗೆ ಚಿಕಿತ್ಸೆಯನ್ನು ಪ್ರಾರಂಭಿಸಿದರು. ದೇವರ ಕೃಪೆಯಿಂದ ಅವಳು ಕ್ರಮೇಣ ಉತ್ತಮಗೊಂಡಳು. ಮೊದಲು ಬಟ್ಟೆಯನ್ನು ಸರಿಯಾಗಿ ಹಾಕಿಕೊಳ್ಳದೆ, ತಲೆಯನ್ನು ಬಾಚಿಕೊಳ್ಳುತ್ತಿರಲಿಲ್ಲ. ಈಗ ದೇವರ ಕೃಪೆಯಿಂದ ಮನೆಯಲ್ಲಿ ಅಡಿಗೆ ಮಾಡುತ್ತಾಳೆ ತಾಯಿಯೊಂದಿಗೆ ಕೆಲಸಕ್ಕೆ ಹೋಗುತ್ತಾಳೆ. ಮನೆ ಕೆಲಸವನ್ನೆಲ್ಲಾ ಮಾಡುತ್ತಾಳೆ. ಅವಳಿಗೆ ಸುವಾರ್ತೆಯನ್ನು ಹಂಚಿಕೊಳ್ಳುತ್ತಿದ್ದೇನೆ. ಅವಳ ಕುಟುಂಬದವರೂ ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿದ್ದಾರೆ. ಈ ಕುಟುಂಬದವರು ಕ್ರಿಸ್ತನನ್ನು ರಕ್ಷಕನಾಗಿ ಅಂಗೀಕರಿಸುವಂತೆಯೂ. ಇವರ ಮೂಲಕ ಅನೇಕರು ಕರ್ತನ ಪ್ರೀತಿಯನ್ನು ತಿಳಿಯುವಂತೆಯೂ ಪ್ರಾರ್ಥಿಸಿರಿ.

## ಸುವಾರ್ತಾ ಪ್ರಚಾರಣೆ ಮತ್ತು ಸಭಾಸ್ಥಾಪನೆ

ಮೊಕ್ಕಾಗಾಂವ್‌ನ ವಿಶ್ವಾಸಿಗಳೂ ನಂಬಿಕೆಯಲ್ಲಿ ಬೆಳೆಯುತ್ತಿದ್ದಾರೆ. ಕಳೆದ ವರ್ಷ ದೇವರು ಕೃಪೆಯಿಂದ ಹೊಸ ಹಳ್ಳಿಗಳಲ್ಲಿ ಅವಕಾಶ ನೀಡುತ್ತಿದ್ದಾನೆ. 6 ಮಂದಿ ಕರ್ತನಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಲು ಸಿದ್ಧರಾಗಿದ್ದಾರೆ. ಕಳೆದ ವರ್ಷ ದೇವರು ಚೊಕನಾರ್ ಮತ್ತು ಮೈಲ್‌ಬೇಡ ಹಳ್ಳಿಗಳಲ್ಲಿ ಸೇವೆಗೆ ಅವಕಾಶ ನೀಡಿದ್ದಾನೆ. ಈಗ ಅಲ್ಲಿ ಆರಾಧನಾ ಗುಂಪುಗಳನ್ನು ಪ್ರಾರಂಭಿಸಿದ್ದೇವೆ.

ದೇವರು ಜನರನ್ನು ಮಾರ್ಪಡಿಸುವಾಗ ಅವರ ಜೀವಿತವೇ ಇತರರಿಗೆ ಮಾತನಾಡುವುದು ಮತ್ತು ಇನ್ನೂ ಹೆಚ್ಚಿನ ಸಂಪರ್ಕಗಳು ಸ್ಥಾಪಿತವಾಗುವುವು. ಬದಲಾದ ಜೀವಿತದ ಕೆಲವು ಸಾಕ್ಷಿಗಳನ್ನು ಕೇಳಿರಿ.

ಲಕ್ಮು ಕುಟುಂಬವು ಚೊಕನಾರ್ ಹಳ್ಳಿಯಲ್ಲಿದ್ದಾರೆ. ಲಕ್ಮುಗೆ 4 ಮಕ್ಕಳು. ಅವನ ದೊಡ್ಡ ಮಗಳು ಪದ್ಮಿನಿಗೆ ವಿವಾಹವಾಯಿತು. ಆದರೆ ಗಂಡನು ಅಪಘಾತದಲ್ಲಿ ಸತ್ತನು. ಇದು ಅವಳ ಮನಸ್ಸಿಗೆ ಪರಿಣಾಮ ಬೀರಿ ಮಾನಸಿಕ ಕೊರತೆಗೊಳಗಾದಳು. ನಮ್ಮ ಸ್ಥಳೀಯ ಸುವಾರ್ತಿಕ ತಿಲುರಾಮ್ ಈ ವಿಷಯವನ್ನು ಕೇಳಿ ಅವಳನ್ನು ಚೊಕನಾರ್‌ಗೆ ಕರೆತಂದನು. ನಾವು ಲಕ್ಮು ಕುಟುಂಬವನ್ನು ಆರಾಧನೆಗೆ ಬರುವಂತೆ ಹೇಳಿದೆವು. ಆರಾಧನೆಯ ನಂತರ ಎಲ್ಲಾ ವಿಶ್ವಾಸಿಗಳು ಒಟ್ಟಾಗಿ ಪದ್ಮಿನಿಗಾಗಿ ಪ್ರಾರ್ಥಿಸಿದೆವು. ಹೀಗೆ ಸ್ವಲ್ಪ ಸಮಯದವರೆಗೂ ಮುಂದುವರೆಸಿದೆವು. ನಾವೂ ಅವರ ಮನೆಗೆ ಹೋಗಿ ಪ್ರಾರ್ಥಿಸುತ್ತಿದ್ದೆವು. ಹಾಗೂ ಮೊದಲ



**ಭತ್ರಿ ಭಾಷೆಯ ಒಂದು ಕ್ಯಾಲೆಂಡರ್ ತೆಗೆದುಕೊಳ್ಳುತ್ತಿರುವುದು**



ಯೇಸುವು ಭಕ್ತಿ ಭಾಷೆಯನ್ನು ಬರೆಯುತ್ತಾನೆ

ಭಾನುವಾರ ಆರಾಧನೆಗೆ ಬರಲು ಹೇಳಿದೆವು. ಮೊಕ್ಕಾ ಗಾಂವ್ 15 ಕಿ.ಮೀ.ಗಳು ದೂರದಲ್ಲಿದೆ. ಸ್ವಲ್ಪ ಸಮಯದ ನಂತರ ಪದ್ಮಿನಿ ಸುಧಾರಿಸಿದಳು. ನಾವು ಅವರಿಗೆ ಆದಿಕಾಂಡ ಗ್ರಂಥದಿಂದ ಬೋಧಿಸಿದೆವು. ಒಂದು ದಿನ ಅವರ ದೇವರ ಫೋಟೋಗಳನ್ನು ಗೋಣೀಚೀಲದಿಂದ ಮುಚ್ಚಿದ್ದನ್ನು ನೋಡಿದೆವು. ದಿನಗಳೆದಂತೆ ಫೋಟೋಗಳೂ ಗೋಣೀ ಚೀಲವೂ ಇಲ್ಲವಾದವು. ಅವರು ಪವಿತ್ರಾತ್ಮನ ಸ್ವರಕ್ಕೆ ವಿಧೇಯರಾಗುತ್ತಿದ್ದಂತೆ ಅವರ ಜೀವಿತವು ಬದಲಾಯಿತು. ಈ ಕುಟುಂಬದವರು ಯೇಸುವಿನ ಹಿಂಬಾಲಕರಾಗುವಂತೆ ಪ್ರಾರ್ಥಿಸಿರಿ.

**ಬಾಲವಾಡಿ ಕೇಂದ್ರ**

2010ರ ಫೆಬ್ರವರಿಯಲ್ಲಿ ಮೊಕ್ಕಾಗಾಂವ್‌ನಲ್ಲಿ ಒಂದು ಬಾಲವಾಡಿ ಕೇಂದ್ರವನ್ನು ಪ್ರಾರಂಭಿಸಲು ದೇವರು ಸಹಾಯ ಮಾಡಿದನು. ವಿಶ್ವಾಸಿಗಳು ಕರ್ತನಲ್ಲಿ ನಂಬಿಕೆಯಿಟ್ಟ ಕಾರಣದಿಂದ ಅವರನ್ನು ಕುಲಬಾಹಿರರನ್ನಾಗಿಸಿದ್ದು ಅವರು ಕಷ್ಟಪಡುತ್ತಿದ್ದುದೇ ಇದಕ್ಕೆ ಕಾರಣ. ಬಾಲವಾಡಿಯ ಮೂಲಕ ಪುಟ್ಟ ಮಕ್ಕಳನ್ನು ನೋಡಿಕೊಳ್ಳುವ ಅವಕಾಶಕ್ಕಾಗಿ ಸ್ತೋತ್ರ ಮಾಡುತ್ತೇವೆ. ಕೆಲವು ಅಜ್ಜಿ ತಾತಂದಿರು ಬಂದು ನಮ್ಮ ಮಕ್ಕಳು ತಂದೆ ತಾಯಿಗಳನ್ನು ಕಳೆದುಕೊಂಡಿದ್ದಾರೆ ದಯವಿಟ್ಟು ಅವರನ್ನು ಸೇರಿಸಿಕೊಳ್ಳಿರಿ ಎಂದು ಬೇಡಿ ಕೊಂಡರು. ಹೀಗೆ ಇತರ ಹಳ್ಳಿಗಳಿಂದಲೂ ಮಕ್ಕಳನ್ನು ತೆಗೆದುಕೊಂಡು ಈಗ 39 ಮಕ್ಕಳಿದ್ದಾರೆ. ಈ ಮಕ್ಕಳ ತಂದೆ ತಾಯಿಗಳನ್ನು ಸಂಪರ್ಕಿಸುವುದು, ಮಕ್ಕಳನ್ನು ಆತ್ಮೀಕ ವಾಗಿಯೂ ವಿದ್ಯಾಭ್ಯಾಸದಲ್ಲಿಯೂ ಮುಂದುವರೆಯಲು ಉತ್ತೇಜಿಸುವುದೇ ನಮ್ಮ ಗುರಿಯಾಗಿದೆ. ನಮ್ಮ ಕಾರ್ಯಕ್ರಮಗಳಲ್ಲಿ ವಿ.ಬಿ.ಎಸ್. ಆಟಗಳು, ವಚನಗಳನ್ನು ಬಾಯಿಪಾಠ ಮಾಡುವುದು, ನೈರ್ಮಲ್ಯತೆ, ಇಂಗ್ಲೀಷ್ ಭಾಷೆಯನ್ನು ಕಲಿಸುವುದು, ಇವೆಲ್ಲವೂ ಸೇರಿದೆ.

**ಸೇವೆಯ ಗುರಿಗಳು 2012-13**

| | |
|---|---|
| 4 | ಹೊಸ ಹಳ್ಳಿಗಳು |
| 30 | ಹೊಸ ಸಂಪರ್ಕಗಳು |
| 15 | ಹೊಸ ಆಸಕ್ತರು |
| 6 | ಹೊಸ ವಿಶ್ವಾಸಿಗಳು |
| 2 | ಹೊಸ ಆರಾಧನಾ ಗುಂಪುಗಳು |
| 5 | ಅಕ್ಷರಸ್ಥರು |

**ಸತ್ಯವೇದ ಭಾಷಾಂತರ - ಪೂರ್ಣಗೊಂಡಿರುವುದು**

- ಯೋಹಾನನ ಸುವಾರ್ತೆ 1,2,3 ಯೋಹಾನನ ಪತ್ರಿಕೆಗಳ ಕರಡುಪ್ರತಿ
- ಇಬ್ರಿಯ ಪತ್ರಿಕೆಯ ಪುನರಾವರ್ತನೆ
- ಅಪೊಸ್ತಲ ಕೃತ್ಯಗಳನ್ನು ಹಳ್ಳಿಯವರೊಂದಿಗೆ ವಿಮರ್ಷಣೆ ಮುಂದುವರೆದಿದೆ. 5 ಅಧ್ಯಾಯಗಳನ್ನು ನೋಡಬೇಕು
- ಅಪೊಸ್ತಲರ ಕೃತ್ಯಗಳ 3 ಅಧ್ಯಾಯಗಳನ್ನು ಮರು ಭಾಷಾಂತರಿಸುವುದು
- ಭಾಷಾಂತರಿಸಿದ ವೇದೋಕ್ತಿಯನ್ನು ಸಭೆಗಳಲ್ಲಿ ಉಪ ಯೋಗಿಸಲು ಉತ್ತೇಜಿಸುವುದು

**2012-13ರ ಗುರಿಗಳು ಮತ್ತು ಯೋಜನೆಗಳು**

- 2ನೇ ಕೊರಿಂಥ ಮತ್ತು ಫಿಲಿಪ್ಪಿ, ಕೊಲೊಸ್ಸೆ, 2 ಥೆಸಲೋನಿಕ, ಯಾಕೋಬ 1 ಮತ್ತು 2ನೇ ಪೇತ್ರ ಪತ್ರಿಕೆ ಗಳು ಹಾಗೂ ಪ್ರಕಟನಾ ಗ್ರಂಥದ ಪ್ರಥಮ ಕರಡು ಪ್ರತಿಯನ್ನು ಪೂರ್ಣಗೊಳಿಸುವುದು
- ಇಬ್ರಿಯರಿಗೆ, 1 ಕೊರಿಂಥ ಮತ್ತು ರೋಮಾಯ ಪತ್ರಿಕೆಗಳನ್ನು ಹಳ್ಳಿಯವರೊಂದಿಗೆ ವಿಮರ್ಷಿಸುವುದು
- ಅಪೊಸ್ತಲರ ಕೃತ್ಯಗಳು, ಇಬ್ರಿಯರಿಗೆ, 1 ಕೊರಿಂಥ ಮತ್ತು ರೋಮಾಯ ಪತ್ರಿಕೆಗಳನ್ನು ಸಮಾಲೋಚಕರೊಂದಿಗೆ ವಿಮರ್ಷಿಸುವುದು
- ಮಾರ್ಕ ಮತ್ತು ಲೂಕನ ಸುವಾರ್ತೆಗಳ ಪುನರಾವರ್ತನೆ
- ಅಪೊಸ್ತಲರ ಕೃತ್ಯಗಳ ಗ್ರಂಥದ ಮುದ್ರಣ
- ಲೂಕನ ಸುವಾರ್ತೆಯ ಆಡಿಯೋ ರೆಕಾರ್ಡಿಂಗ್
- 5 ಸಾಕ್ಷರತಾ ಕಾರ್ಯಕ್ರಮದ ಕೇಂದ್ರಗಳನ್ನು ಪ್ರಾರಂಭಿಸುವುದು



ಮಾತೃಭಾಷಾ ಭಾಷಾಂತರಕಾರರ ತಂಡ

# ಸ್ತೋತ್ರದ ಮತ್ತು ಪ್ರಾರ್ಥನಾ ಮಾಲಿಕೆ

*(ಪ್ರಾರ್ಥನಾ ಕೊಠಡಿಗೆ ಮತ್ತೆ ಸ್ವಾಗತಿಸುತ್ತೇವೆ. ಒಂದು ಸೈನ್ಯವು ಯುದ್ಧಕ್ಕೆ ಹೋದಾಗ ಹೋರಾಡುವ ಸೈನಿಕರಿಗೆ ಒಂದು ಭರವಸೆಯೆಂದರೆ ಸಾಮಾನುಗಳನ್ನು ಸರಬರಾಜು ಮಾಡುವ ವಿಭಾಗದವರು. ನೀವು ನಿಮ್ಮ ಕೆಲಸವನ್ನು ಮಾಡಿರಿ ನೀವೇನು ಕೇಳುತ್ತೀರೋ ಅದನ್ನು ನಾವು ಒದಗಿಸುತ್ತೇವೆ ಎಂಬುದೇ ಹೇಳುವುದೇ ಅವರ ಆದರಣೆಯಾಗಿದೆ. ಈಗಾಗಲೇ ಜಯಗಳಿಸಿದ ದೇವರಿಗೆ ತನ್ನ ಮಕ್ಕಳ ಅಗತ್ಯತೆಗಳು ತಿಳಿದಿದೆ. ಆದರೆ ಆತನು ನೇರವಾಗಿ ಪರಲೋಕದಿಂದ ತನ್ನ ಆಶೀರ್ವಾದವನ್ನು ಸುರಿಸುವುದಿಲ್ಲ ಬದಲಾಗಿ ಒದಗಿಸುವ ವಿಭಾಗಕ್ಕೆ (ಪ್ರಾರ್ಥನಾ ಸಹಭಾಗಿಗಳು) ಅಗತ್ಯತೆಗಳ ಬಗ್ಗೆ ತಿಳಿಯ ಪಡಿಸುತ್ತಾನೆ. ಹಾಗೂ ಅವರನ್ನು ಆಶೀರ್ವಾದಿಸುತ್ತಾನೆ. ಹೀಗೆ ಅವರು ಆತನ ಜನರ ಅಗತ್ಯತೆಗಳನ್ನು ಒದಗಿಸುವಂತೆ ಮಾಡುತ್ತಾನೆ. ಇದಂತಹ ಒದಗಿಸುವ ಸರಣಿ! ಪ್ರಿಯ ಸ್ನೇಹಿತರೇ ನೀವು ಪ್ರಾರ್ಥಿಸುವಾಗ ದೇವರು ಒದಗಿಸಿದನು. ಜುಲೈ ತಿಂಗಳಿನಲ್ಲಿಯೂ ನಿಮ್ಮ ಪ್ರಾರ್ಥನೆಯ ಮೂಲಕ ಬೆಂಬಲ ನೀಡಿರಿ. ನಿಮ್ಮ ಅಗತ್ಯತೆ ನಮಗಿದೆ)*

## 1 ಐ.ಇ.ಎಂ. ಸುವಾರ್ತಿಕರ ಕುಟುಂಬದ ಸಮ್ಮೇಳನ ಟಿ.ಡಬ್ಲ್ಯೂ.ಆರ್.-ಎಲ್.ಟಿ.ಸಿ. ಪರಮೆನ್‌ಕೆನಿ - ಚೆನ್ನೈ

**ಸ್ತೋತ್ರಮಾಡಿರಿ**

ದೇವ ಸೇವಕರ ಮೂಲಕ ಸುವಾರ್ತಿಕರನ್ನು ಉತ್ತೇಜಿಸಿದಕ್ಕಾಗಿಯೂ ಬರುವಾಗ, ಹಿಂತಿರುಗುವಾಗ ಪ್ರಯಾಣದಲ್ಲಿ ದೊರೆತ ಸಂರಕ್ಷಣೆಗಾಗಿಯೂ ಸಮ್ಮೇಳನದ ಎಲ್ಲಾ ಅಗತ್ಯತೆಗಳನ್ನು ಒದಗಿಸಿದಕ್ಕಾಗಿಯೂ

**ಪ್ರಾರ್ಥಿಸಿರಿ**

ಅವರ ಹೃದಯಗಳಲ್ಲಿ ಬಿತ್ತಿದ ವಾಕ್ಯ ಬೀಜವು ಸುವಾರ್ತಾ ಕ್ಷೇತ್ರಗಳಲ್ಲಿ ಹೆಚ್ಚಿನ ಫಲನೀಡುವಂತೆಯೂ ಅಪಘಾತಕ್ಕೀಡಾದವರು ಬೇಗನೆ ಗುಣ ಹೊಂದುವಂತೆಯೂ

## 2 ಪಂಜಾಬ್

**ಸ್ತೋತ್ರಮಾಡಿರಿ**

- ಈ ವರ್ಷದ ವಿ.ಬಿ.ಎಸ್. ಕಾರ್ಯಕ್ರಮದಲ್ಲಿ 10 ಹಳ್ಳಿಗಳಲ್ಲಿ 379 ಮಕ್ಕಳು ಭಾಗವಹಿಸಿದಕ್ಕಾಗಿಯೂ
- ಇದೇ ಏಪ್ರಿಲ್ 14ರಂದು ನತಾನದಲ್ಲಿ 6 ವಿಶ್ವಾಸಿಗಳು ಕರ್ತನಲ್ಲಿ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿದಕ್ಕಾಗಿಯೂ
- ಸುವಾರ್ತಿಕರು ಸತೀಶ್ ಕ್ರಿಸ್ಟಿ ಮತ್ತು ಶೈಲಾ ಸಿ.ಎಂ.ಸಿ. ವೆಲ್ಲೂರಿನಲ್ಲಿ ಸಿ.ಎಲ್.ಹೆಚ್.ಟಿ.ಸಿ. ಶಿಕ್ಷಣವನ್ನು ಫಲದಾಯಕವಾಗಿ ಮುಗಿಸಿದಕ್ಕಾಗಿಯೂ
- ಮೆಹ್ರಾಜ್ ಹಳ್ಳಿಯಲ್ಲಿ ಹೊಲಿಗೆ ಶಿಕ್ಷಣ ಹೊಂದುತ್ತಿರುವ ಹೊಸ ವಿದ್ಯಾರ್ಥಿಗಳಿಗಾಗಿಯೂ

**ಪ್ರಾರ್ಥಿಸಿರಿ**

- ವಿಶ್ವಾಸಿ ಜಸ್‌ಪ್ರೀತ್ ಸಿಂಗ್ ಬೈಬಲ್ ಕಾಲೇಜ್‌ನಲ್ಲಿ ವ್ಯಾಸಂಗ ಮಾಡಲು ಅಪೇಕ್ಷಿಸಿರುವಾಗ ಆತನಿಗೆ ಬೇಕಾದ ಮಾರ್ಗದರ್ಶನಕ್ಕಾಗಿಯೂ
- ವಿ.ಬಿ.ಎಸ್.ನಲ್ಲಿ ಭಾಗವಹಿಸಿದ ಮಕ್ಕಳು ಯೇಸುವನ್ನು ವೈಯಕ್ತಿಕವಾಗಿ ತಿಳಿದು ಸಬ್ಬತ್ತಿನ ಶಾಲೆಗೆ ಬರುವಂತೆಯೂ
- ಹೊಲಿಗೆ ಶಿಕ್ಷಣ ತೆಗೆದುಕೊಳ್ಳುತ್ತಿರುವ 16 ಹೊಸ ವಿದ್ಯಾರ್ಥಿಗಳು ಯೇಸುವನ್ನು ಅಂಗೀಕರಿಸುವಂತೆಯೂ

## 3 ಉತ್ತರ ಪ್ರದೇಶ - ಬಲ್ರಾಮ್‌ಪುರ್

**ಸ್ತೋತ್ರಮಾಡಿರಿ**

- 6 ಹೊಸ ಆಸಕ್ತರು ಆರಾಧನೆಗೆ ಕ್ರಮವಾಗಿ ಬರುತ್ತಿರುವುದಕ್ಕಾಗಿಯೂ
- ವಿಶ್ವಾಸಿಗಳು ಕರ್ತನಲ್ಲಿ ಬಲಗೊಳ್ಳಲು ಆಸಕ್ತರಾಗಿರುವುದಕ್ಕಾಗಿಯೂ ಇವರು ಕ್ರಮವಾಗಿ ಆರಾಧನೆಗೆ ಬರುತ್ತಾ ಸತ್ಯವೇದವನ್ನು ಓದುತ್ತಿದ್ದಾರೆ
- ಕಳೆದ ತಿಂಗಳಿನಲ್ಲಿ 20 ಮಂದಿಯನ್ನು ಸಂಪರ್ಕಿಸಿದ್ದಕ್ಕಾಗಿಯೂ

**ಪ್ರಾರ್ಥಿಸಿರಿ**

- ಸುವಾರ್ತಿಕ ತ್ರಾಯ ಮತ್ತು ಸ್ಥಳೀಯ ಸುವಾರ್ತಿಕ ಕಿಶೋರ್ ಪ್ರಸಾದ್ ಹೊಸ ಪ್ರದೇಶದಲ್ಲಿ ಸೇವೆಯನ್ನು ಪ್ರಾರಂಭಿಸದಿರುವುದಕ್ಕಾಗಿಯೂ
- ಸ್ಥಳೀಯ ಸುವಾರ್ತಿಕ ಅಭಯ್ ಕುಮಾರ್ ಮತ್ತು ಕುಟುಂಬದವರ ಆರೋಗ್ಯಕ್ಕಾಗಿಯೂ
- ಲೋನೆನ್‌ಪುರವ ಹಳ್ಳಿಯಲ್ಲಿ ಪ್ರಾರ್ಥನಾ ಶೆಡ್ಡನ್ನು ಕಟ್ಟಿಸಲು ಬೇಕಾದ 60,000/- ರೂ.ಗಳ ಸಹಾಯಕ್ಕಾಗಿಯೂ

## 4 ಉತ್ತರ ಪ್ರದೇಶ - ಥಾರು

**ಸ್ತೋತ್ರಮಾಡಿರಿ**

- ಹಾಸ್ಟೆಲ್ಲಿನ ಮಕ್ಕಳು ಒಳ್ಳೆಯ ಫಲಿತಾಂಶ ಹೊಂದಿದಕ್ಕಾಗಿ

**ಪ್ರಾರ್ಥಿಸಿರಿ**

- ಜುಲೈ ಮತ್ತು ಆಗಸ್ಟ್‌ನಲ್ಲಿ ನಡೆಯುವ ಕಾರ್ಯಾಗಾರದಲ್ಲಿ ಸುವಾರ್ತಿಕರು 1ನೇ ಕೊರಿಂಥದವರಿಗೆ ಬರೆದ ಪತ್ರಿಕೆಯ ಕರಡು ಪ್ರತಿಯನ್ನು ಸಿದ್ಧಪಡಿಸಲು ಬೇಕಾದ ಜ್ಞಾನ ಮಾರ್ಗದರ್ಶನಕ್ಕಾಗಿಯೂ
- ಈ ವರ್ಷದಲ್ಲಿ ಪ್ರವಾಹದಿಂದ ಬೆಳೆಯು ನಷ್ಟವಾಗದಂತೆಯೂ

## ಬಿಹಾರ್ - ರಕ್ಸೌಲ್

**ಸ್ತೋತ್ರಮಾಡಿರಿ**

- ಬೇಸಿಗೆಯ ಝಳದಿಂದ ಸುವಾರ್ತಿಕರು ಸಂರಕ್ಷಿಸಲ್ಪಟ್ಟಿದ್ದಕ್ಕಾಗಿಯೂ
- ಎಲ್ಲಾ ಅಡಚಣೆಗಳ ಮಧ್ಯೆ ಸುವಾರ್ತಿಕರು ಸೇವೆಯಲ್ಲಿ ಮುಂದುವರೆಯುತ್ತಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ಭೋಜ್‌ಪುರಿ ಭಾಷೆಯಲ್ಲಿ ಹೊಸ ಒಡಂಬಡಿಕೆಯನ್ನು ಭಾಷಾಂತರಿಸಲು ಮಾತೃಭಾಷಾ ಭಾಷಾಂತರಕಾರರಿಗಾಗಿಯೂ
- ಸತ್ಯವೇದ ಭಾಷಾಂತರಕ್ಕೆ ಅಗತ್ಯವಾದ ಉಪಕರಣಗಳಿಗಾಗಿಯೂ
- ಬೆಂಕಿಯ ಅನಾಹುತದಿಂದ 160 ಮಂದಿ ಮನೆಗಳನ್ನು ಕಳೆದುಕೊಂಡಿರುವಾಗ ಆದಷ್ಟು ಬೇಗನೆ ಪರಿಹಾರ ದೊರೆಯುವಂತೆಯೂ

## 5 ಉತ್ತರ ಪ್ರದೇಶ - ರಾಬರ್ಟ್ಸ್ ಗಂಜ್

**ಸ್ತೋತ್ರಮಾಡಿರಿ**

- ಶ್ರೀ/ಶ್ರೀಯುತ ಅನಿಲ್ ಎರಡು ತಿಂಗಳಿನಿಂದ ಆರಾಧನೆಗೆ ಬರುತ್ತಿದ್ದು ಈಗ ನಂಬಿಕೆಯನ್ನು ವ್ಯಕ್ತಪಡಿಸಲು ಸಿದ್ಧರಾಗಿರುವುದಕ್ಕಾಗಿಯೂ
- ವಿರೋಧದ ಮಧ್ಯೆ ಭಾನುವಾರದ ಆರಾಧನೆಯನ್ನು ಹಳ್ಳಿಗಳಲ್ಲಿ ಕ್ರಮವಾಗಿ ನಡೆಸುತ್ತಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ಸ್ಥಳೀಯ ಸುವಾರ್ತಿಕರು ಮಹೇಂದ್ರ ಪ್ರಸಾದ್, ರಂಬ್ರಿಕೇಶ್, ಬಾಲಸುಂದರ್ ಸೇವೆಯಲ್ಲಿ ಆಸಕ್ತರಾಗಿರಲು ಜ್ಞಾನಬಲಕ್ಕಾಗಿಯೂ
- ಶ್ರೀ/ಶ್ರೀಮತಿ ಅನಿಲ್‌ಗೆ ಮಕ್ಕಳಾಗದೆ ಅವರ ಮನೆಯವರು ಹಿಂಸೆ ಪಡಿಸುತ್ತಿರುವುದರಿಂದ ಅವರಿಗೆ ಮಕ್ಕಳಾಗುವಂತೆಯೂ
- ಹಾಸ್ಟೆಲ್, ಹೊಲಿಗೆ ಶಿಕ್ಷಣ, ಸಾಕ್ಷರತಾ ಕಾರ್ಯಕ್ರಮ ಇವೆಲ್ಲಾ ಕಾರ್ಯಕ್ರಮಗಳನ್ನು ತಡೆಯಿಲ್ಲದೆ ದೇವರ ಮಹಿಮೆಗಾಗಿ ಮುಂದುವರಿಸುವಂತೆಯೂ

**ಇಂದು ಓ.ಟಿ.ಐ.ನಲ್ಲಿ ಪ್ರಾರಂಭವಾಗುವ ಐ.ಇ.ಎಂ. ಮಂಡಲಿಯ ಕೂಟಗಳಿಗೆ ಬೇಕಾದ ಜ್ಞಾನ ಮತ್ತು ನಡಿಸುವಿಕೆಗಾಗಿ ಪ್ರಾರ್ಥಿಸಿರಿ**

## 6 ಉತ್ತರ ಪ್ರದೇಶ - ಫಟೇಪುರ್

**ಸ್ತೋತ್ರಮಾಡಿರಿ**

- ಸಹಾಯಕರಾದ ಸಮ್‌ಜೀತ್ ಮತ್ತು ಆತ್ಮರಾಮ್ ಮತ್ತು 4 ವಿಶ್ವಾಸಿಗಳು ಫರ್ಮ್ ಫೌಂಡೇಶನ್ ಕಾರ್ಯಕ್ರಮದಲ್ಲಿ ಪ್ರತಿ ಬುಧವಾರ ಭಾಗವಹಿಸಿದ್ದಕ್ಕಾಗಿಯೂ
- 5 ಮಂದಿ ಹೊಸ ಆಸಕ್ತರು ಆರಾಧನೆಗೆ ಕ್ರಮವಾಗಿ ಭಾಗವಹಿಸುತ್ತಿರುವುದಕ್ಕಾಗಿಯೂ
- ವಿಶ್ವಾಸಿಗಳು ಈ ವರ್ಷದಲ್ಲಿ ಒಳ್ಳೆಯ ಸುಗ್ಗಿ ಹೊಂದಿದ್ದಕ್ಕಾಗಿಯೂ

**ಪ್ರಾರ್ಥಿಸಿರಿ**

- ಫರ್ಮ್ ಫೌಂಡೇಶನ್ ಕಾರ್ಯಕ್ರಮದಲ್ಲಿ ಭಾಗವಹಿಸಿದವರು ಕರ್ತನಲ್ಲಿ ಬಲಗೊಂಡು ನಂಬಿಗಸ್ತರಾಗಿರುವಂತೆಯೂ
- ಹೊಲಿಗೆ ಶಿಕ್ಷಣ, ಬಾಲವಾಡಿ ಕೇಂದ್ರ ಇವುಗಳು ಮೂಲಕ ದೇವರ ರಾಜ್ಯವು ಮುಂದುವರೆಯುವಂತೆಯೂ

**ಇಂದು ಓ.ಟಿ.ಐ.ನಲ್ಲಿ ನಡೆಯುವ ಐ.ಇ.ಎಂ.ನ ಸೊಸೈಟಿ ಕೂಟಗಳಿಗಾಗಿ ಪ್ರಾರ್ಥಿಸಿರಿ**

## 7 ಪಶ್ಚಿಮ ಬಂಗಾಳ ದೀಮಾ ಬೀಚ್‌ಲೈನ್

**ಸ್ತೋತ್ರಮಾಡಿರಿ**

- ನಾಲ್ಕು ವಿಶ್ವಾಸಿಗಳು ಇದೇ ಮೇ 6ರಂದು ಕರ್ತನಲ್ಲಿ ನಂಬಿಕೆಯನ್ನು ವ್ಯಕ್ತ ಪಡಿಸಿದ್ದಕ್ಕಾಗಿಯೂ
- ವಿಶ್ವಾಸಿ ಬುಚ್ಚ ಇಂದ್ವಾರ್ ಬಿದಿರನ್ನು ಸಂಗ್ರಹಿಸುತ್ತಿರುವಾಗ ಹೆಚ್ಚು ಗಾಯಗೊಂಡರೂ ಅದ್ಭುತವಾಗಿ ಮರಣದಿಂದ ಪಾರಾಗಿದಕ್ಕಾಗಿಯೂ
- ದೀಮಾ ಬೀಚ್‌ಲೈನ ಬೆತೆಲ್ ನರ್ಸರಿ ಶಾಲೆಯಲ್ಲಿ 19 ವಿದ್ಯಾರ್ಥಿಗಳು ವೇದೋಕ್ತಿಯ ವಚನಗಳು, ಹೊಸ ಹಾಡುಗಳನ್ನು ಕಲಿಯುತ್ತಿರುವುದಕ್ಕಾಗಿಯೂ

ಪ್ರಾರ್ಥಿಸಿರಿ

- ನಂಬಿಕೆಯನ್ನು ವ್ಯಕ್ತಪಡಿಸಿದವರು ದೇವರ ವಾಕ್ಯದಲ್ಲಿ ನೆಲೆಗೊಂಡು ಬಲಗೊಳ್ಳುವಂತೆಯೂ
- ಈ ವರ್ಷದಲ್ಲಿ 25 ವಿಶ್ವಾಸಿಗಳು ನಮ್ಮ ನಂಬಿಕೆಯನ್ನು ವ್ಯಕ್ತಪಡಿಸುವಂತೆಯೂ
- 40 ಡೇಬೋರಾ ಮಹಿಳೆಯರು ಇತರರು ಕರ್ತನನ್ನು ತಿಳಿಯುವಂತೆ ಉತ್ತೇಜಿಸುವಂತೆಯೂ

*ಸತ್ಯವೇದ ಭಾಷಾಂತರ: ಇಂದಿನಿಂದ 17ರವರೆಗೂ ಡೆಹ್ರಾಡೂನ್‌ನಲ್ಲಿ ನಡೆಯಲಿರುವ ಮಾತೃಭಾಷಾ ಭಾಷಾಂತರ ಕಾಲದ ಶಿಕ್ಷಣ ಕಾರ್ಯಕ್ರಮಕ್ಕಾಗಿಯೂ ಪ್ರಾರ್ಥಿಸಿರಿ

## 8 ಒಡಿಶ - ಮಯೂರ್‌ಭಂಜ್

ಸ್ತೋತ್ರಮಾಡಿರಿ

- ಹಾಸ್ಟೆಲ್ಲಿನ 39 ಹುಡುಗಿಯರು ಪರೀಕ್ಷೆಯಲ್ಲಿ ಉತ್ತಮವಾಗಿ ಮಾಡಿರುವುದಕ್ಕಾಗಿಯೂ
- ಅನೇಕರು ಹೊಸದಾಗಿ ಆರಾಧನೆಗೆ ಬರುತ್ತಿರುವುದಕ್ಕಾಗಿಯೂ
- ಸುವಾರ್ತಿಕರು ಮತ್ತು ಸ್ಥಳೀಯ ಸುವಾರ್ತಿಕರಲ್ಲಿ ಅನ್ಯೋನ್ಯತೆ ಒಮ್ಮತವಾಗಿ ಸೇವೆಯ ನಿರ್ಧಾರ ತೆಗೆದುಕೊಳ್ಳುವುದಕ್ಕಾಗಿಯೂ
- ಜೂನ್ ಮೊದಲನೇ ವಾರದಲ್ಲಿ ನಡೆದ ಯುವಜನ ಶಿಬಿರದಲ್ಲಿ ಹೆಚ್ಚು ಮಂದಿ ಭಾಗವಹಿಸಿ ತಮ್ಮ ಕುಶಲತೆಗಳನ್ನು ಕರ್ತನ ಸೇವೆಗೆ ಉಪಯೋಗಿಸಲು ಉತ್ತೇಜನ ಹೊಂದಿದಕ್ಕಾಗಿಯೂ

ಪ್ರಾರ್ಥಿಸಿರಿ

- ಮಟಿಕೋನಿ, ವೆಗೆಡಿಹಾರ್ ಲಂಡುಸಾಹಿ ಮತ್ತು ಅಪ್ರೊಮಸೆಲ್ಲಿ ಹಳ್ಳಿಗಳಲ್ಲಿ ಆಲಯದ ಕಟ್ಟಡಗಳಿಗೆ ಬೇಕಾದ 90.000/- ರೂ.ಗಳ ಸಹಾಯಕ್ಕಾಗಿಯೂ
- ಈಗಿರುವ ಹಾಸ್ಟೆಲ್ ಕಟ್ಟಡವು ಶಿಥಿಲವಾಗಿರುವುದರಿಂದ ಒಂದು ಹೊಸ ಕಟ್ಟಡಕ್ಕಾಗಿಯೂ
- 18 ವಿಶ್ವಾಸಿಗಳು ಕರ್ತನಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿದ್ದು ಕರ್ತನಲ್ಲಿ ಆತ್ಮೀಕವಾಗಿ ಬಲಗೊಳ್ಳುವಂತೆಯೂ
- ಝೂರ್ಕಂಡ್‌ನಲ್ಲಿ ಸೇವೆಗೆ ಹೆಚ್ಚಿನ ಅವಕಾಶಕ್ಕಾಗಿಯೂ ಮತ್ತು ಜನರಲ್ಲಿ ಆಸಕ್ತಿಗಾಗಿಯೂ
- ವಿಶ್ವಾಸಿ ಉದಯ್ ಮತ್ತು ಕುಟುಂಬದವರು ಸ್ವಂತ ಜನರ ಹಿಂಸೆ ವಿರೋಧದಲ್ಲಿ ದೃಢವಾಗಿರುವುದಕ್ಕಾಗಿಯೂ
- ಸುವಾರ್ತಿಕರು ಶ್ರೀ/ಶ್ರೀಮತಿ ಮಿಲನ್ ಝೂರ್ಕಂಡ್ ಕ್ಷೇತ್ರದ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವಂತೆಯೂ

## ಒಡಿಶ - ಹೊ ಭಾಷೆಯಲ್ಲಿ ಸತ್ಯವೇದ ಭಾಷಾಂತರ

ಸ್ತೋತ್ರಮಾಡಿರಿ

- ಹಳೆಯ ಕಂಪ್ಯೂಟರ್ ಒಡೆದು ಹೋದರೂ ಎಲ್ಲಾ ವಿಷಯ ಸಂಗ್ರಹವನ್ನು ಪಡೆದಿದ್ದಕ್ಕಾಗಿಯೂ ಹೊಸ ಕಂಪ್ಯೂಟರ್ ದೊರೆತಿದ್ದಕ್ಕಾಗಿಯೂ

ಪ್ರಾರ್ಥಿಸಿರಿ

- ಆದಷ್ಟು ಬೇಗನೆ ಅಪೊಸ್ತಲದ ಕೃತ್ಯಗಳ ಪುಸ್ತಕದ ಭಾಷಾಂತರವು ಪೂರ್ಣಗೊಳ್ಳುವಂತೆಯೂ
- ಮುದ್ರಣವಾದ 1 ಮತ್ತು 2ನೇ ತಿಮೊಥೆ ಮತ್ತು ತೀತನ ಪುಸ್ತಕಗಳನ್ನು ಆರಾಧನೆಯಲ್ಲಿ ಉಪಯೋಗಿಸುವಂತೆಯೂ

## 9 ಚಟ್ಟೀಸ್‌ಗಡ್ - ಭತ್ರಿ

ಸ್ತೋತ್ರಮಾಡಿರಿ

- ಭತ್ರಿ ಜನರಲ್ಲಿ ಸುವಾರ್ತಾ ಸಂದೇಶಕ್ಕೆ ಆಸಕ್ತಿಯಿಂದಿರುವುದಕ್ಕಾಗಿಯೂ
- ವೇದೋಕ್ತಿಯ ಬಳಕೆಯು ಕಾರ್ಯಗತವಾಗುತ್ತಿದೆ. ಮತ್ತು ಭತ್ರಿ ವೇದೋಕ್ತಿ ಭಾಗಗಳು ಆರಾಧನೆಯನ್ನು ಉಪಯೋಗಿಸುತ್ತಿರುವುದಕ್ಕಾಗಿಯೂ

ಪ್ರಾರ್ಥಿಸಿರಿ

- ಇಬ್ರಿಯ ಪತ್ರಿಕೆಯ ಭಾಷಾಂತರ ಹಾಗೂ ಎಫೆಸದವರಿಗೆ ಕರಡು ಪ್ರತಿಯು ಬೇಗನೆ ಪೂರ್ಣಗೊಳ್ಳುವಂತೆಯೂ
- 1ನೇ ಯೋಹಾನನ ಪತ್ರಿಕೆಯ ವಿಮರ್ಷಣೆಯ ಮುಂದುವರೆಯುವಂತೆಯೂ ಭಾಷಾಸಹಾಯಕರು ಸಿಗುವಂತೆಯೂ

## ಧುರ್ವ

ಸ್ತೋತ್ರಮಾಡಿರಿ

- ಭಾಷಾಂತರ ಕೆಲಸವು ಕ್ರಮೇಣ ಮುಂದುವರೆಯುತ್ತಿರುವುದಕ್ಕಾಗಿಯೂ

ಪ್ರಾರ್ಥಿಸಿರಿ

- ಧುರ್ವ ಹಳ್ಳಿಗಳಲ್ಲಿರುವ ವಿಶ್ವಾಸಿಗಳು ಆರಾಧನೆಯನ್ನು ಕ್ರಮವಾಗಿ ನಡೆಸುವಂತೆಯೂ

- ಮಾತೃಭಾಷಾ ಭಾಷಾಂತರಕಾರರು ರೈಡರ್ ಮತ್ತು ಮನು ಭಾಷಾಂತರಿಸಲ್ಪಟ್ಟ ಭಾಗಗಳನ್ನು ಸಮುದಾಯ ವಿಮರ್ಶೆ ಮಾಡಲು ಸಹಾಯಿಸುವಂತೆಯೂ
- ಬಾಯಿಮಾತಿನಲ್ಲಿ ಕಥೆ ಹೇಳುವ ಯೋಜನೆಯು ಪರಿಣಾಮಕಾರಿಯಾಗಿರುವಂತೆಯೂ

## 10 ಪಶ್ಚಿಮ ಬಂಗಾಳ - ಕೂಚ್ ಬೆಹಾರ್

**ಸ್ತೋತ್ರಮಾಡಿರಿ**

- ಇದೇ ಏಪ್ರಿಲ್ 11ರಂದು ಇಬ್ಬರು ವಿಶ್ವಾಸಿಗಳು ಕರ್ತನಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿದಕ್ಕಾಗಿಯೂ
- ಇದೇ ಏಪ್ರಿಲ್ ಕೂಚ್ ಬೆಹಾರ್‌ನಲ್ಲಿ ನಡೆಸಿದ ಗ್ಲೋಮೋಸ್ ಶಿಕ್ಷಣ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಸ್ಥಳೀಯ ಸುವಾರ್ತಿಕರು ಆತ್ಮೀಕವಾಗಿ ಬಲಗೊಂಡು ಸೇವೆಯಲ್ಲಿ ಪರಿಣಾಮಕಾರಿಯಾಗುವಂತೆ ಉತ್ತೇಜಿಸಲ್ಪಟ್ಟದ್ದಕ್ಕಾಗಿಯೂ
- ನಾಲ್ಕು ಆಸಕ್ತರು ಕರ್ತನಾದ ಯೇಸುವನ್ನು ರಕ್ಷಕನಾಗಿ ನಂಬಿ ಆತನನ್ನು ಹಿಂಬಾಲಿಸಲು ತೀರ್ಮಾನಿಸಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ನಂಬಿಕೆಯನ್ನು ವ್ಯಕ್ತಪಡಿಸಿದ ಇಬ್ಬರು ವಿಶ್ವಾಸಿಗಳು ತಮ್ಮ ಜನರಿಗೆ ಸಾಕ್ಷಿಗಳಾಗಿರುವಂತೆಯೂ
- ಈ ವರ್ಷದಲ್ಲಿ 15 ಹಳ್ಳಿಗಳಲ್ಲಿ ಸುವಾರ್ತೆಯನ್ನು ಹಂಚಿಕೊಂಡು 10 ವಿಶ್ವಾಸಿಗಳು ನಂಬಿಕೆಯನ್ನು ವ್ಯಕ್ತಪಡಿಸಬೇಕೆಂಬ ಗುರಿಸಾಧನೆಗಾಗಿಯೂ
- 50 ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಮಕ್ಕಳ ವಿದ್ಯಾಭ್ಯಾಸ ಕೇಂದ್ರವನ್ನು ಪ್ರಾರಂಭಿಸಲು ಕಾತುರರಾಗಿ ಕಾದಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ** ಈ ವರ್ಷದಲ್ಲಿ ಮೇಘಾಲಯದ ರಾಜ್ಯ ಸಮ್ಮೇಳನ ನಡೆಸಲು ಒಂದು ಆಲೋಚನಾ ಸಮಿತಿಯು ಒಂದು ಗೂಡಿ ಪ್ರಾರ್ಥಿಸಿ ಆಲೋಚನೆ ಮಾಡುವುದಕ್ಕಾಗಿಯೂ

## 11 ಪಶ್ಚಿಮ ಬಂಗಾಳ - ಜಲ್‌ಪೈಗುರಿ

**ಸ್ತೋತ್ರಮಾಡಿರಿ**

- 4 ವಿಶ್ವಾಸಿಗಳು ಕರ್ತನಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಲು ಸಿದ್ಧರಾಗಿರುವುದಕ್ಕಾಗಿಯೂ
- ನಿಮ್ತಿ ಮತ್ತು ಪೈತ್ಕಾಪ್ರ ಹಳ್ಳಿಗಳಲ್ಲಿ ಸುವಾರ್ತೆಗೆ ಹೆಚ್ಚಿನ ಆಸಕ್ತಿಯಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ನಿಮ್ತಿ ಮತ್ತು ಪೈತ್ಕಾಪ್ರ ಹಳ್ಳಿಗಳಲ್ಲಿ ಹೊಸದಾಗಿ 13 ಜನರನ್ನು ಸಂಪರ್ಕಿಸುವುದಕ್ಕಾಗಿಯೂ
- ಕರ್ತನಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿದವರು ಸ್ವಂತ ಜನರಿಗೆ ಯೇಸುವಿನ ಬಗ್ಗೆ ಸಾಕ್ಷಿ ಹೇಳುವಂತೆಯೂ

## ಸಭಾಸೇವೆ - ಕರ್ನಾಟಕ

**ಸ್ತೋತ್ರಮಾಡಿರಿ**

- ಕನ್ನಡ ಮಾಸಿಕ ಪತ್ರಿಕೆಯನ್ನು ಹೆಚ್ಚಿನ ಮಂದಿ ಪಡೆಯುತ್ತಿರುವುದಕ್ಕಾಗಿಯೂ
- ಮೈಸೂರಿನಲ್ಲಿ ಬೋಧಕರ ಅನ್ಯೋನ್ಯ ಕೂಟದಲ್ಲಿ ಸೇವೆಯ ಬಗ್ಗೆ ಹಂಚಿಕೊಂಡಿದ್ದರಿಂದ ಹೊಸ ಅವಕಾಶಗಳು ದೊರೆಯುತ್ತಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ಮೈಸೂರು ಪ್ರದೇಶದಲ್ಲಿ ಸೇವೆಯು ಮುಂದುವರೆಯುವಂತೆಯೂ
- ಬಂಗಾರ ಪೇಟೆಯ ಸುವಾರ್ತಾ ಸೇವಾ ಸಹ ನಿರ್ದೇಶಕ ಶ್ರೀಮತಿ ಮಾಲತಿಯ ಪತಿ ಡಾನಿಯೆಲ್‌ನ ಆರೋಗ್ಯಕ್ಕಾಗಿಯೂ
- ರಾಜ್ಯ ಕಾರ್ಯದರ್ಶಿ ಶ್ರೀ ಜೆಯಶೀಲನ್‌ರವರ ಬೆನ್ನಿನ ಬಾಧೆಯು ಗುಣವಾಗುವಂತೆಯೂ

## 12 ಮಹಾರಾಷ್ಟ್ರ - ನಾಸಿಕ್

**ಸ್ತೋತ್ರಮಾಡಿರಿ**

- ಇದೇ ಏಪ್ರಿಲ್ 22ರಿಂದ 24ರವರೆಗೆ ನಡೆದ ಮಹಿಳಾ ಒಕ್ಕೂಟದಲ್ಲಿ ಸುಮಾರು 60 ಮಹಿಳೆಯರು ಭಾಗವಹಿಸಿದಕ್ಕಾಗಿಯೂ ಕೆಲವರು ಉತ್ಸಾಹದಿಂದ 25 ವಚನಗಳ ಬಾಯಿಪಾಠ ಹೇಳಿದ್ದಕ್ಕಾಗಿಯೂ
- ಔತ್ಯಪೆನಿ ಹಳ್ಳಿಯಲ್ಲಿ ನಡೆದ ಯುವಜನ ಶಿಬಿರದಲ್ಲಿ 100 ಯೌವನಸ್ಥರು ಭಾಗವಹಿಸಿದರು. 11 ಯುವಕರು ಕರ್ತನಲ್ಲಿ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿದರು. ವಿಶ್ವಾಸಿಯ ಮಗ ಡಾನಿಯೇಲ್ ಗೌಲಿ ಏಪ್ರಿಲ್‌ನಲ್ಲಿ ತನ್ನ ವ್ಯಾಸಂಗವನ್ನು ಮುಗಿಸಿ ಈಗ ಬಂದರ್‌ಪಾಡದ ಜೀವನ್ ಜ್ಯೋತಿ ಬಾಲ ವಿಕಾಸ ಕೇಂದ್ರದಲ್ಲಿ ಯೋಜನಾ ಸಹ ನಿರ್ದೇಶಕನಾಗಿ ಕೆಲಸಮಾಡುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ಒಳ್ಳೆಯ ಮಳೆ ಬಂದು ವಿಶ್ವಾಸಿಗಳು ಹೊಲವನ್ನು ಉತ್ತು ಬೆಳೆಯನ್ನು ಹೊಂದುವಂತೆಯೂ ಕೆಲಸದ ನಿಮಿತ್ತ ಹೊರಗೆ ಹೋದವರು ಸುರಕ್ಷಿತರಾಗಿ ಹಿಂತಿರುಗುವಂತೆಯೂ

- ಹನ್ನಾ ಪ್ರಾರ್ಥನಾ ಗುಂಪು ಇನ್ನೂ ಅನೇಕ ಮಹಿಳೆಯರನ್ನು ದೇವರು ಪ್ರಾರ್ಥನೆಗೆ ಉತ್ತರ ನೀಡುತ್ತಾನೆಂಬ ನಂಬಿಕೆಗೆ ನಡೆಸುತ್ತಿರುವುದಕ್ಕಾಗಿಯೂ
- ಪ್ರತಿ ಹಳ್ಳಿಯಿಂದ 20 ಸ್ವಯಂ ಸೇವಕರು ಮುಂದೆ ಬಂದು ಸಭೆಯಲ್ಲಿ ನಡೆಸಲಿರುವ ಸಾಕ್ಷರತಾ ಕಾರ್ಯಕ್ರಮಕ್ಕೆ ಸಹಾಯ ಮಾಡುವಂತೆಯೂ
- ಮಾರ್ಚ್ ಮತ್ತು ಮೇ ತಿಂಗಳುಗಳಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿದ 24 ವಿಶ್ವಾಸಿಗಳ ನಂಬಿಕೆಯಲ್ಲಿ ಬಲಗೊಂಡು ಕರ್ತನಿಗೆ ಬಲವಾದ ಸಾಕ್ಷಿಗಳಾಗಿರುವಂತೆಯೂ
- ಗೋಡಂಬೆ ಹಳ್ಳಿಯಲ್ಲಿ ಹಾಸ್ಟೆಲ್ಲಿನ ಒಂದು ಅನುಕೂಲವಾದ ಕಟ್ಟಡವು ಅನುಕೂಲವಾಗುವಂತೆಯೂ ಮಕ್ಕಳ ಆರೋಗ್ಯಕ್ಕಾಗಿಯೂ

## 13 ಆಂಧ್ರಪ್ರದೇಶ - ಚಿನ್ನೂರು

**ಸ್ತೋತ್ರಮಾಡಿರಿ**

- ಮುಲ್ಕಲ್ ಪೇಟೆಯ ಸ್ಥಳೀಯ ಸುವಾರ್ತಿಕ ಶಿವಣ್ಣ ಕುಟುಂಬಕ್ಕಾಗಿ ಚಿನ್ನೂರು ಕ್ಷೇತ್ರದ ಸಭೆಗಳಿಂದ ತಕ್ಷಣವೇ ಹಣ ಸಹಾಯವನ್ನು ಮಾಡಿದಕ್ಕಾಗಿಯೂ ಈ ಹಣವನ್ನು ಶಿವಣ್ಣನ 1½ ವರ್ಷದ ಮಗುವಿನ ಹೆಸರಿನಲ್ಲಿ ಬ್ಯಾಂಕಿಗೆ ಹಾಕಲಾಯಿತು.
- ಇದೇ ಏಪ್ರಿಲ್‌ನಲ್ಲಿ 53 ವಿಶ್ವಾಸಿಗಳು ಕರ್ತನಲ್ಲಿ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿದ್ದಕ್ಕಾಗಿಯೂ
- ನಮ್ಮ ಬೆಂಬಲಿಗರೂ ನರವೃಪೇಟೆದ ಆಲಯದ ಕಟ್ಟಡಕ್ಕಾಗಿ ಹಣ ಸಹಾಯ ಮಾಡಿದಕ್ಕಾಗಿಯೂ ಕಟ್ಟಡದ ಕೆಲಸವು ಮುಂದುವರೆಯುತ್ತಿದೆ

**ಪ್ರಾರ್ಥಿಸಿರಿ**

- ನಂಬಿಕೆಯನ್ನು ವ್ಯಕ್ತಪಡಿಸಿದವರು ಆತ್ಮೀಕವಾಗಿ ಬಲಗೊಳ್ಳುವಂತೆಯೂ
- ಚಿನ್ನೂರು ಮತ್ತು ನಾಗಂಪೇಟೆಯ ಆಲಯದ ಕಟ್ಟಡಗಳು ಪ್ರಾರಂಭವಾಗುವಂತೆಯೂ
- 5 ಸುವಾರ್ತಿಕರ ಕುಟುಂಬಗಳು 7 ಸ್ಥಳೀಯ ಸುವಾರ್ತಿಕರು ಹಾಗೂ 7 ಸಭಾನಾಯಕರ ಆರೋಗ್ಯ ಮತ್ತು ಸೇವೆಗಾಗಿಯೂ
- 700 ಆಸಕ್ತರೂ 200 ಸಂಪರ್ಕಿಸಿದವರೂ ಸುವಾರ್ತೆಗೆ ಆಸಕ್ತರಾಗುವಂತೆಯೂ

## 14 ಮಧ್ಯ ಪ್ರದೇಶ - ಚಟ್ಟಾರ್‌ಪುರ್

**ಸ್ತೋತ್ರಮಾಡಿರಿ**

- ಇದೇ ಮಾರ್ಚ್ 8ರಂದು ವಿಶ್ವಾಸಿಗಳು ಕರ್ತನಲ್ಲಿ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿದಕ್ಕಾಗಿಯೂ
- ಬೇಸಿಗೆಯ ಭಯಂಕರ ಝಳದಿಂದ ದೊರೆತ ಸಂರಕ್ಷಣೆಗಾಗಿಯೂ
- ಈಶಾನಗರದಲ್ಲಿ 40 ಜನರನ್ನು ಸಂಪರ್ಕಿಸಿದ್ದು 10 ಮಂದಿ ಆಸಕ್ತರಾಗಿದ್ದಾರೆ. ಒಬ್ಬನು ವಿಶ್ವಾಸಿಯಾಗಿದ್ದಾನೆ ಈ ಅದ್ಭುತ ಅವಕಾಶಕ್ಕಾಗಿಯೂ
- ಹೊಲಿಗೆ ಶಿಕ್ಷಣದ ಮೂಲಕ ಪರಿಣಾಮಕಾರಿಯಾಗಿ ಸೇವೆ ನಡೆಯುತ್ತಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ಸೇವೆಗೆ ವಿರೋಧಿಸುವವರು ಜೀವಸ್ವರೂಪನಾದ ದೇವರ ಸೇವಕರ ವಿರುದ್ಧ ಹೋರಾಡುವುದು ವ್ಯರ್ಥವೆಂದು ತಿಳಿಯುವಂತೆಯೂ
- ಈ ಪ್ರದೇಶದಲ್ಲಿ ಹೆಚ್ಚು ಪ್ರಚಲಿತವಾದ ಶಿಶು ವಿವಾಹದ ಸಂಪ್ರದಾಯವು ನಿಲ್ಲುವಂತೆಯೂ
- 20 ಹೊಸ ಹಳ್ಳಿಗಳಲ್ಲಿ ಸುವಾರ್ತಾ ಪ್ರಚಾರಣೆಗೆ ಅವಕಾಶ ದೊರೆಯುವಂತೆಯೂ

## 15 ಸಭಾಸೇವೆ - ಅಸ್ಸಾಮ್

**ಸ್ತೋತ್ರಮಾಡಿರಿ**

- ಗೌಹಾತಿಯ ಜೋಮಿ ಕ್ರಿಶ್ಚಿಯನ್ ಫೆಲೋಶಿಪ್‌ನಲ್ಲಿ "ಮಿಶನ್ ಭಾನುವಾರದ" ಕಾರ್ಯಕ್ರಮವು ಸಫಲವಾಗಿದಕ್ಕಾಗಿಯೂ
- ಕಾಚಾರ್ ಜಿಲ್ಲೆಯಲ್ಲಿ ಸೂಕ್ತವಾದ ವ್ಯಕ್ತಿಯನ್ನು ಸುವಾರ್ತಾ ಸೇವಾ ಸಹ ನಿರ್ದೇಶಕನನ್ನಾಗಿ ನೇಮಿಸಿದಕ್ಕಾಗಿಯೂ

**ಪ್ರಾರ್ಥಿಸಿರಿ**

- ಹೊಸ ಪ್ರದೇಶಗಳ ಸಭೆಗಳಲ್ಲಿ ಸುವಾರ್ತಾ ಸೇವೆಯಲ್ಲಿ ಪಾಲ್ಗೆದುಕೊಳ್ಳುವಂತೆ ಉತ್ತೇಜಿಸುವುದಕ್ಕಾಗಿಯೂ
- ಕಾಚಾರ್ ಬೆಟ್ಟದ ಜಿಲ್ಲೆಯ ಉತ್ತರದಲ್ಲಿರುವ ಹಲ್ಪ ಲಾಂಗ್‌ನಲ್ಲಿ ನಡೆದ ಸುವಾರ್ತಾ ಗೋಷ್ಠಿಯು ಇಂದು ಮುಕ್ತಾಯಗೊಂಡಿದ್ದಕ್ಕಾಗಿಯೂ

## 16 ಸಭಾಸೇವೆ - ಕೇರಳ

**ಸ್ತೋತ್ರಮಾಡಿರಿ**

- ಮುಖ್ಯ ಸಭೆಗಳಲ್ಲಿ ಹೊಸದಾಗಿ ಸಂಪರ್ಕಮಾಡಿರುವುದಕ್ಕಾಗಿಯೂ

- ರಾಜ್ಯ ಸಮ್ಮೇಳನದ ನಂತರ ಹೊಸಬೆಂಬಲಿಗರು ಮತ್ತು ಗುಂಪುಗಳು ಐ.ಇ.ಎಂ.ನ ಸೇವೆಯಲ್ಲಿ ಭಾಗವಹಿಸುವುದಾಗಿ ಮುಂದೆಬಂದಿರುವುದಕ್ಕಾಗಿಯೂ
- ಟ್ರಿವಾಂಡ್ರಮ್‌ನ ವೈದ್ಯಕೀಯ ವಿದ್ಯಾರ್ಥಿಗಳ ಮಧ್ಯೆ ಮಾಡಿದ ಫಲದಾಯಕವಾದ ಸೇವೆಯ ಮೂಲಕ ಕೆಲವರು ಕೋಯಾ ಕ್ಷೇತ್ರ ಸಂದರ್ಶನ ಮಾಡಿದಕ್ಕಾಗಿಯೂ

**ಪ್ರಾರ್ಥಿಸಿರಿ**

- ಸುವಾರ್ತಿಕರು ಜಾರ್ಜ್ ಮಾಥ್ಯೂ ಮತ್ತು ಶರ್ಲಿ ಮಾವೆಲಿಕರದ ಸುತ್ತಲಿನ ಸಭೆಗಳನ್ನು ಸಂಪರ್ಕಿಸಿ ಸೇವೆಯಲ್ಲಿ ಭಾಗವಹಿಸಲು ಉತ್ತೇಜಿಸುವಂತೆಯೂ
- ಕೇರಳದಲ್ಲಿ ಇನ್ನೂ ಹೆಚ್ಚು ಸ್ಥಳೀಯ ಕಾರ್ಯದರ್ಶಿಗಳು ಮತ್ತು ಸುವಾರ್ತಿಕರನ್ನು ಗುರುತಿಸಿ ಸೇರಿಸಿಕೊಳ್ಳುವಂತೆಯೂ
- ಕು. ಸೋಸಮ್ಮ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿರುವಾಗ ಆಕೆಯು ಬೇಗನೆ ಗುಣ ಹೊಂದುವಂತೆಯೂ

## 17 ಆಂಧ್ರಪ್ರದೇಶ - ಚಿನ್ನೂರು ಬಬ್ಬೆರ್‌ಚಿಲ್ಕ

**ಸ್ತೋತ್ರಮಾಡಿರಿ**

- 6 ಹಳ್ಳಿಗಳಲ್ಲಿ 12 ಮಂದಿ ಅಧ್ಯಾಪಕರು ವಿ.ಬಿ.ಎಸ್. ಕಾರ್ಯಕ್ರಮದಲ್ಲಿ 400 ಮಕ್ಕಳಿಗೆ ಪಾಠಗಳನ್ನು ಹೇಳಿಕೊಟ್ಟರು. ಮಕ್ಕಳು ಯೇಸುವಿನ ಬಗ್ಗೆ ತಿಳಿದಿದ್ದಕ್ಕಾಗಿಯೂ
- 20 ವಿಶ್ವಾಸಿಗಳು ಇದೇ ಮಾರ್ಚ್ 9ರಂದು ಕರ್ತನಲ್ಲಿ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿದರು. ಆಸಕ್ತ ಅಸಂಪಲ್ಲಿ ಪೋಸಯ್ಯ ಮತ್ತು ಕುಟುಂಬದ 5 ಸದಸ್ಯರು ಯೇಸುವನ್ನು ರಕ್ಷಕನಾಗಿ ಅಂಗೀಕರಿಸಿಕೊಂಡು ಏಪ್ರಿಲ್ 6ರಿಂದ ಆರಾಧನೆಗೆ ಬರುತ್ತಿರುವುದಕ್ಕಾಗಿಯೂ
- ನಾಕಲಪಲ್ಲಿ ಹಳ್ಳಿಯ ವಿಶ್ವಾಸಿಗಳು ಒಂದು ಸ್ಥಳವನ್ನು ಕೊಂಡು ಅದರಲ್ಲಿ ಆಲಯವನ್ನು ಕಟ್ಟಲು ಆಲೋಚಿಸಿದ್ದಾರೆ, ಕಟ್ಟಡಕ್ಕೆ 20,000/-ರೂ.ಗಳು ಖರ್ಚಿದೆ.

**ಪ್ರಾರ್ಥಿಸಿರಿ**

- ವಿ.ಬಿ.ಎಸ್. ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಕ್ಕಳು ಯೇಸುವನ್ನು ತಿಳಿಯುವುದು ಮಾತ್ರವಲ್ಲ ರಕ್ಷಕನಾಗಿ ಅಂಗೀಕರಿಸುವಂತೆಯೂ
- ಆಸಕ್ತ ಬಾಪುವಿಗೆ ಕುತ್ತಿಗೆಯಲ್ಲಿ ಕ್ಯಾನ್ಸರ್ ಆಗಿದ್ದು ಅವನು ಗುಣಹೊಂದುವಂತೆಯೂ ಆದರೂ ಇವನು ಕ್ರಮವಾಗಿ ಆಲಯಕ್ಕೆ ಬರುತ್ತಿದ್ದಾನೆ
- ಕೋತಪಲ್ಲಿ ಹಳ್ಳಿಯಲ್ಲಿ ಅನೇಕ ಸಂಪರ್ಕಗಳಿದ್ದು ಅವರು ಸುವಾರ್ತೆಯಲ್ಲಿ ಆಸಕ್ತರಾಗುವಂತೆಯೂ

## 18 ಸಭಾಸೇವೆ - ಮೀಸೋರಾಮ್

**ಸ್ತೋತ್ರಮಾಡಿರಿ**

- ಇ.ಸಿ.ಎಂ., ಸಿ.ಸಿ.ಐ.ಎಮ್.ನ ಮಹಿಳೆಯರು ಐ.ಇ.ಎಂ.ನ ಪೂರ್ವೋತ್ತರ ಮಹಿಳಾ ವಿಭಾಗದ ಸೇವೆಯಲ್ಲಿ ಭಾಗಿಗಳಾಗಿರುವುದಕ್ಕಾಗಿಯೂ
- ನಮ್ಮ ಬೆಂಬಲಿಗರೂ ಪ್ರಾರ್ಥನ ಸಹಭಾಗಿಗಳೂ ಸುವಾರ್ತಿಕರ ಕುಟುಂಬದ 10ನೇ ಸಮ್ಮೇಳನದ ಖರ್ಚಿಗಾಗಿ ಹೆಚ್ಚು ಹಣ ಸಹಾಯ ಮಾಡಿದಕ್ಕಾಗಿಯೂ
- ಸುವಾರ್ತಾ ಸೇವೆಯ ಬಗ್ಗೆ ಉತ್ತೇಜನ ಹೊಂದಿ ಪ್ರಾರ್ಥನಾ ಸಹಭಾಗಿಗಳು ಕ್ರಮವಾಗಿ ಬೆಂಬಲ ನೀಡಲು ಒಪ್ಪಿಕೊಂಡಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ಚಂಪಾ ಜಿಲ್ಲೆಯಲ್ಲಿರುವ ಶ್ರೀ/ಶ್ರೀಮತಿ ಮುವಾನ್ ಟಾಂಬಿಂಗ್ ಫಲದಾಯಕವಾದ ಸೇವೆ ಮಾಡುವಂತೆಯೂ
- ಮೀಜೋರಾಮ್‌ನ ಅನೇಕ ಸುವಾರ್ತಾ ಸಂಸ್ಥೆಗಳು ಒಮ್ಮತವಾಗಿ ಸೇವೆ ಮಾಡುವಂತೆಯೂ
- ಮೀಜೋರಾಮ್‌ನಲ್ಲಿ ಸೈತಾನನ ಗುಂಪಿನವರು ಕಾಲೋಸಿಬ್ ಜಿಲ್ಲೆಯಲ್ಲಿ ಸತ್ಯವೇದವನ್ನು ಸುಟ್ಟಿದ್ದಾರೆ, ಯೌವನಸ್ಥರನ್ನು ಮೋಸಪಡಿಸುತ್ತಿದ್ದಾರೆ ಇವರು ದುಷ್ಕೃತ್ಯಗಳನ್ನು ನಿಲ್ಲಿಸುವಂತೆಯೂ

## 19 ಮಧ್ಯಪ್ರದೇಶ - ಲಕ್ನಾಡೋನ್

**ಸ್ತೋತ್ರಮಾಡಿ**

- ಮೂವರು ಕರ್ತನಲ್ಲಿ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿದಕ್ಕಾಗಿಯೂ
- ವಿಶ್ವಾಸಿ ನೈಲೇಶ್ ಕರ್ತನ ಸೇವೆಗೆ ತನ್ನನ್ನು ಸಮರ್ಪಿಸಿಕೊಂಡಿದಕ್ಕಾಗಿಯೂ
- ಅಮರಲ ಹಳ್ಳಿಯ ಒಂದು ಕುಟುಂಬದವರು ಕರ್ತನನ್ನು ಅಂಗೀಕರಿಸಲು ಸಿದ್ಧರಾಗಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ಆಸಕ್ತಳು ಶ್ರೀಮತಿ ಲಕ್ಷ್ಮಿ ಕಣ್ಣಿನ ಬಾಧೆಯಿಂದ ಗುಣಹೊಂದುವಂತೆಯೂ
- ಹೊಟ್ಟೆ ಊದಿಕೊಂಡು ಕಷ್ಟಪಡುತ್ತಿರುವ ಸೋನಿಯಾ ಹಳ್ಳಿಯ ಒಬ್ಬ ಸ್ತ್ರೀ ಗುಣ ಹೊಂದುವಂತೆಯೂ

- ಮೂರು ಹೊಸ ಹಳ್ಳಿಗಳಲ್ಲಿ ಹೆಚ್ಚಿನ ಜನರನ್ನು ಸಂಪರ್ಕಿಸುವಂತೆಯೂ

## 20 ಸಭಾಸೇವೆ - ಮೇಘಾಲಯ

**ಸ್ತೋತ್ರಮಾಡಿರಿ**

- ಇದೇ ಏಪ್ರಿಲ್ 27ರಿಂದ 29ರವರೆಗೆ ಸ್ಮಿತ್ ಪ್ರೆಸ್ಬಿಟೇರಿಯನ್ ಚರ್ಚಿನಲ್ಲಿ ನಡೆದ ಪೂರ್ವೋತ್ತರ ಭಾರತದ ಪ್ರಥಮ ಮಹಿಳಾ ಸಮ್ಮೇಳನದಲ್ಲಿ ಹೆಚ್ಚು ಮಹಿಳೆಯರು ಭಾಗವಹಿಸಿದ್ದಕ್ಕಾಗಿಯೂ
- ಭಾಗವಹಿಸಿದವರು ಕರ್ತನಿಗೆ ಸಮರ್ಪಿಸಿಕೊಂಡು ಆತನ ಸೇವೆಯಲ್ಲಿ ಭಾಗವಹಿಸುವುದಕ್ಕೆ ಉತ್ತೇಜನ ಹೊಂದಿದಕ್ಕಾಗಿಯೂ
- ಇದೇ ಮೇನಲ್ಲಿ ಚೆನ್ನೈನಲ್ಲಿ ನಡೆದ ಐ.ಇ.ಎಂ. ಸುವಾರ್ತಿಕರ ಕುಟುಂಬದ 10ನೇ ಸಮ್ಮೇಳನದಲ್ಲಿ 11 ಮಂದಿ ತಾವೇ ಭಾಗವಹಿಸಿದ್ದಕ್ಕಾಗಿಯೂ

**ಪ್ರಾರ್ಥಿಸಿರಿ**

- ಇದೇ ತಿಂಗಳು ಮೂರನೇ ವಾರದಲ್ಲಿ ನಮ್ಮ ಬೆಂಬಲಿಗರು ಸುವಾರ್ತಾ ಕ್ಷೇತ್ರವನ್ನು ಸಂದರ್ಶಿಸ ಬೇಕೆಂದಿರುವಾಗ ಅದು ಪ್ರಚೋದಕವಾಗಿಯೂ ಫಲದಾಯಕವಾಗಿಯೂ ಇರುವಂತೆ

## 21 ಸಭಾಸೇವೆ ಒಡಿಶ

**ಸ್ತೋತ್ರಮಾಡಿರಿ**

- ಸುವಾರ್ತಿಕರು ಆಶಿಶ್‌ಕುಮಾರ್ ಮತ್ತು ಸುನೀತ ಬೆಢ್ವೆಮ್‌ಪುರದಲ್ಲಿ ನೆಲೆಸಿ ಸ್ಥಳೀಯ ಸಭೆಯನ್ನು ಸಂಪರ್ಕಿಸಿರುವುದಕ್ಕಾಗಿಯೂ
- ರಾಜ್ಯ ಕಛೇರಿಯನ್ನು ಕಟಕ್‌ನಿಂದ ಭುವನೇಶ್ವರಕ್ಕೆ ಬದಲಾಯಿಸಿದಕ್ಕಾಗಿಯೂ
- ಇದೇ ಏಪ್ರಿಲ್ 15ರಂದು ಜಟ್ನಿಯಲ್ಲಿ ನಡೆದ ಕುಟುಂಬಗಳ ಒಕ್ಕೂಟವು ಹೆಚ್ಚಿನ ಆಸಕ್ತಿಯುಂಟು ಮಾಡಿದಕ್ಕಾಗಿಯೂ

**ಪ್ರಾರ್ಥಿಸಿರಿ**

- ಇದೇ ಜುಲೈ 6-8ರವರೆಗೆ ಖುರ್ದನಲ್ಲಿ ನಡೆಯುವ ಬ್ಲಾಸ್ಟ್‌ಯೂತ್ ಕಾರ್ಯಕ್ರಮಕ್ಕಾಗಿಯೂ
- ಒಡಿಶ ಸಭಾಸೇವೆಯ ತಂಡದವರು ಆರೋಗ್ಯ ಹೊಂದಿ ಮತ್ತೂ ಉತ್ಸಾಹದಿಂದ ಸಭಾಸೇವೆಯನ್ನು ಮುಂದುವರಿ ಸುವಂತೆಯೂ

## 22 ಅಂಡಮಾನ್ಸ್

**ಸ್ತೋತ್ರಮಾಡಿರಿ**

- ಗಿದ್ಯೋನ್ ಮತ್ತು ನಾರಾಯಣ ಎಂಬ ಹೊಸ ಸುವಾರ್ತಿಕರು ಇದೇ ಜೂನ್‌ನಿಂದ ಸೇವೆಗೆ ಬಂದಿರುವುದಕ್ಕಾಗಿಯೂ
- ಸ್ಥಳೀಯ ಸುವಾರ್ತಿಕರು ನೋಬೊರ್ ಟೊಪ್ಪೊ ಕಣ್ಣಿನ ಶಸ್ತ್ರ ಚಿಕಿತ್ಸೆಯು ಸಫಲಗೊಂಡಿದಕ್ಕಾಗಿಯೂ
- ಪೋರ್ಟ್‌ಬ್ಲೇರ್‌ನ ನ್ಯೂಲೈಫ್ ಫೆಲೋಶಿಪ್‌ನವರೂ ಇತರರೂ ಬೆಂಬಲ ನೀಡುತ್ತಿರುವುದಕ್ಕಾಗಿಯೂ
- ನಿಂಬುತಲ ಕದಂತಲಾ ಮತ್ತು ಆರ್.ಆರ್.ಒ.ನಲ್ಲಿ 100ಕ್ಕೂ ಹೆಚ್ಚು ಮಕ್ಕಳು ವಿ.ಬಿ.ಎಸ್. ಕಾರ್ಯಕ್ರಮದಲ್ಲಿ ಭಾಗವಹಿಸಿದಕ್ಕಾಗಿಯೂ
- ವಿಶ್ವಾಸಿಗಳು ಪಾಲ್‌ಕುಮಾರ್ ಮತ್ತು ಶಂಪ ಬೈಬಲ್ ಕಾಲೇಜ್‌ನ ಮೊದಲ ವರ್ಷದ ವ್ಯಾಸಂಗವನ್ನು ಫಲದಾಯಕವಾಗಿ ಮುಗಿಸಿದಕ್ಕಾಗಿಯೂ

**ಪ್ರಾರ್ಥಿಸಿರಿ**

- ಬೆಂಗಾಲಿ, ತೆಲುಗು, ಸಾದ್ರಿ ಜನರಲ್ಲಿ ಆಸಕ್ತಿಯು ಮೂಡುವಂತೆಯೂ ನಮ್ಮ ಹೊಸ ಸುವಾರ್ತಿಕರೂ ಇಲ್ಲಿನ ಸನ್ನಿವೇಶಗಳಿಗೆ ಹೊಂದಿಕೊಂಡು ಭಾಷೆಯನ್ನು ಕಲಿತು ಸಂಸ್ಕೃತಿಯನ್ನು ಬೇಗನೆ ತಿಳಿದುಕೊಳ್ಳುವಂತೆಯೂ
- ನಿಂಬುತಲ ಜೆಟ್ಟಿ ಮತ್ತು ಕದಂತಲದಲ್ಲಿ ಆರಾಧನಾ ಕೇಂದ್ರಗಳನ್ನು ಕಟ್ಟಿಸಲು ಬೇಕಾದ ಹಣ ಸಹಾಯಕ್ಕಾಗಿಯೂ
- ವಿಶ್ವಾಸಿಗಳು ಗುರಿಯಕ್ ಜಾನಕ ಮಯಿ, ಲಕ್ಷ್ಮಿ ಜಯರಾವ್ ಮತ್ತು ಯಶೋಧ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಲು ಸಿದ್ಧರಾಗಿರುವುದಕ್ಕಾಗಿಯೂ ಆಸಕ್ತರು ರಾಜಕುಮಾರ್, ಸುಕ್ರಿ, ಎಸ್ಡೋರ್, ಕಸ್ತು, ಸಾಮೇಶ್ವರ್, ಪರ್ದ, ರಾಯ್ಮಣಿ, ಮತ್ತಿತರರು ಕ್ರಿಸ್ತನನ್ನಂಗೀಕರಿ ಸುವಂತೆಯೂ

## 23 ಸಭಾಸೇವೆ - ಆಂಧ್ರಪ್ರದೇಶ

**ಸ್ತೋತ್ರ ಮಾಡಿರಿ**

- ಆಂಧ್ರಪ್ರದೇಶದಿಂದ ಐ.ಇ.ಎಂ. ಸುವಾರ್ತಿಕರ ಕುಟುಂಬದ ಸಮ್ಮೇಳನದಲ್ಲಿ ಕೆಲವರು ತಾವೇ ಸ್ವತಹವಾಗಿ ಭಾಗವಹಿಸಿದಕ್ಕಾಗಿಯೂ
- ಐ.ಇ.ಎಂ. ಭಾನುವಾರದ ಕಾರ್ಯಕ್ರಮಗಳಿಗೆ ಹೆಚ್ಚಿನ ಆಸಕ್ತಿಯಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ಇದೇ ತಿಂಗಳು 3ನೇ ವಾರದಲ್ಲಿ ವಿಜಯವಾಡದಲ್ಲಿ ಎ.ಪಿ. ಸಭಾಸೇವೆಯ ಯೋಜನಾ ಕೂಟವು ನಡೆಯುವುದಕ್ಕಾಗಿಯೂ
- ಆಗಸ್ಟಿನ ಮೊದಲನೇ ವಾರದಿಂದ 40 ದಿನಗಳು ಪ್ರಾರ್ಥನಾ ಸರಣಿಯನ್ನು ಪ್ರಾರಂಭಿಸುವುದಕ್ಕಾಗಿಯೂ

## ಆಂಧ್ರಪ್ರದೇಶ - ಅರಾಕು ಶ್ರೇಣಿ

**ಸ್ತೋತ್ರಮಾಡಿರಿ**

- ಸುವಾರ್ತಾ ಪ್ರಚಾರಣೆಯಲ್ಲಿ ವಿಶ್ವಾಸಿಗಳೂ ಸ್ಥಳೀಯ ಸುವಾರ್ತಿಕರೂ ಸಕ್ರಿಯವಾಗಿ ಉತ್ಸಾಹದಿಂದ ಭಾಗವಹಿಸುವುದಕ್ಕಾಗಿಯೂ
- ಬೇಸಿಗೆಯಲ್ಲಿ ಸುವಾರ್ತಿಕರಿಗೆ ದೊರೆತ ಆರೋಗ್ಯ ಕ್ಕಾಗಿಯೂ

**ಪ್ರಾರ್ಥಿಸಿರಿ**

- ಪ್ರತಿ ವಿಶ್ವಾಸಿಯೂ ಎಚ್ಚರವಹಿಸಿ ವಚನಗಳನ್ನು ಬಾಯಿಪಾಠ ಮಾಡುವಂತೆಯೂ
- ಸಭೆಯಲ್ಲಿ ಸಾಕ್ಷರತಾ ಕಾರ್ಯಕ್ರಮವನ್ನು ನಡೆಸುವುದರ ಮೂಲಕ ಪ್ರತಿ ವಿಶ್ವಾಸಿಯೂ ಅಕ್ಷರಸ್ಥನಾಗಬೇಕೆಂದು ಎಚ್ಚರವಹಿಸುವಂತೆಯೂ ಕೋಟಿಯ ಭಾಷೆಯಲ್ಲಿ ಹಾಡಿನ ಪುಸ್ತಕವನ್ನು ಸಿದ್ಧಪಡಿಸುವಂತೆಯೂ

## 24 ಅಸ್ಸಾಮ್ - ಗೌಹಾತಿ

**ಸ್ತೋತ್ರಮಾಡಿರಿ**

- ಗೌಹಾತಿಯ ವಿಮಾನ ನಿಲ್ದಾಣದ ಕಾಲೋನಿಯಲ್ಲಿ ಪ್ರತಿ ಶುಕ್ರವಾರ ಸತ್ಯವೇದಾಧ್ಯಯನವನ್ನು ನಡೆಸುತ್ತಿರುವು ದಕ್ಕಾಗಿಯೂ
- ಕಾಮ್ರುಪ್ ಮತ್ತೆ ನೋಗಾಂವ್ ಜಿಲ್ಲೆಗಳಲ್ಲಿ ಜೂನ್ 25ರಿಂದ 29ರವರೆಗೆ ಸಮೀಕ್ಷೆ ನಡೆಸಿ. ಅಲ್ಲಿರುವ ಬಿಹಾರಿ, ನೇಪಾಳಿ, ಆದಿವಾಸಿ ಮತ್ತು ಒಡಿಶ ಜನರ ಗುಂಪುಗಳ ಮಧ್ಯೆ ಸೇವೆಯ ಪ್ರಯತ್ನವನ್ನು ಮಾಡುತ್ತಿರು ವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ನ್ಯೂ ಬಾಂಗೈಗಾಂವ್ ಜಿಲ್ಲೆಯ ರಾಜ್ ಬನ್ಸಿ ಜನರ ಮಧ್ಯೆಯೂ (ಆಗಸ್ಟ್ 3-5) ಸಿಲ್ಚಾರ್ ಜಿಲ್ಲೆಯ ರಾಂಗೆಮೈಯಿ ನಾಗಾಗಳ ಮಧ್ಯೆಯೂ (ಸೆಪ್ಟೆ 5-9) ಸಮೀಕ್ಷೆಯನ್ನು ಸಫಲತೆಯಿಂದ ನಡಿಸುವಂತೆಯೂ
- ಪೂರ್ವೋತ್ತರವಲಯದ ಕ್ಷೇತ್ರ ಸಹನಿರ್ದೇಶಕರ ಕೂಟವನ್ನು ಗೌಹಾತಿಯಲ್ಲಿ ಇದೇ ಜುಲೈ 26-29 ರವರೆಗೂ ಸೇವೆಯ ಒಮ್ಮತ ತಂಡದವರು ಗೌಹಾತಿ ಯಲ್ಲಿ ಇದೇ ಜುಲೈ 29-31ರವರೆಗೂ ನಡೆಸುವ ಕೂಟಗಳಿಗಾಗಿಯೂ

## 25 ತಮಿಳುನಾಡು - ಕೃಷ್ಣಗಿರಿ ಮತ್ತು ಹೊಸೂರು

**ಸ್ತೋತ್ರಮಾಡಿರಿ**

- ವಿ.ಬಿ.ಎಸ್. ಕಾರ್ಯಕ್ರಮದಲ್ಲಿ 150 ಮಕ್ಕಳು ಭಾಗವಹಿಸಿದಕ್ಕಾಗಿಯೂ ಅವರಲ್ಲಿ ಕೆಲವರು ಕ್ರಮವಾಗಿ ಸಬ್ಬತ್ತಿನ ಶಾಲೆಗೆ ಬರುತ್ತಿರುವುದಕ್ಕಾಗಿಯೂ
- ಹಾಸ್ಟೆಲ್ಲಿನ ಮಕ್ಕಳು 10ನೇ ಮತ್ತು 12ನೇ ತರಗತಿಗಳ ಪರೀಕ್ಷೆಗಳಲ್ಲಿ ಉತ್ತಮವಾಗಿ ಮಾಡಿದ್ದು ಒಳ್ಳೆಯ ಫಲಿತಾಂಶವನ್ನು ನಿರೀಕ್ಷಿಸುತ್ತಿರುವುದಕ್ಕಾಗಿಯೂ
- 40 ಮಕ್ಕಳು ಪಾಠ ಹೇಳಿಸಿಕೊಳ್ಳುತ್ತಿರುವುದಕ್ಕಾಗಿಯೂ 10 ಮಂದಿ ಹೊಸೂರಿನಲ್ಲಿ ಡೊರ್ಕಾಸ್ ಹೊಲಿಗೆ ಶಿಕ್ಷಣ ಪಡೆಯುತ್ತಿರುವುದಕ್ಕಾಗಿಯೂ ಇವರೆಲ್ಲರೂ ಸುವಾರ್ತೆ ಯನ್ನು ಕೇಳುವ ಅವಕಾಶಕ್ಕಾಗಿಯೂ
- ಹೊಸೂರು ಕ್ಷೇತ್ರದಲ್ಲಿ ದೆಬೋರಾ ಯೋಜನೆಯ ಕೂಟಗಳು ಫಲದಾಯಕವಾಗಿ ನಡೆಸುತ್ತಿರುವು ದಕ್ಕಾಗಿಯೂ ಇದೇ ಜೂನ್‌ನಲ್ಲಿ ಕೃಷ್ಣಗಿರಿಯಲ್ಲಿ ಚಲನಚಿತ್ರವನ್ನು ಪ್ರದರ್ಶಿಸಿದಕ್ಕಾಗಿಯೂ

**ಪ್ರಾರ್ಥಿಸಿರಿ**

- ಪೂವತ್ತಿ ಹಳ್ಳಿಯಲ್ಲಿ ನಡೆಸುತ್ತಿರುವ ಸಾಕ್ಷರತಾ ಕಾರ್ಯಕ್ರಮದಿಂದ ಲಾಭ ಹೊಂದಿಕೊಳ್ಳುವಂತೆಯೂ
- ಹೊಸೂರಿನಲ್ಲಿ ಇದೇ ತಿಂಗಳು ಹಿರಿಯರ ಕೂಟವನ್ನು ನಡೆಸುವುದಕ್ಕಾಗಿಯೂ
- ಕೃಷ್ಣಗಿರಿ ಮತ್ತು ಎಲಾತಗಿರಿಯ ಹಾಸ್ಟೆಲ್ಲುಗಳಿಗೆ ಅರ್ಹರಾದ ಹುಡುಗ ಹುಡುಗಿಯರನ್ನು ಆಯ್ಕೆ ಮಾಡಿಕೊಳ್ಳಲು ಬೇಕಾದ ಜ್ಞಾನಕ್ಕಾಗಿಯೂ
- ಹಾಸ್ಟೆಲ್ಲಿನ ಹುಡುಗರು ಮೈಕಲ್ ಮತ್ತು ವಿನೋದ್‌ಗೆ ಕಾಲೇಜುಗಳಲ್ಲಿ ಅವಕಾಶ ದೊರೆಯುವಂತೆಯೂ

## 26 ಒಡಿಶ - ಕೊರಾಪುಟ್

**ಸ್ತೋತ್ರಮಾಡಿರಿ**

- "ಕುವಿ ಜೀವ ರಕ್ಷಿಸಲ್ಪಟ್ಟಿದ್ದು" ಎಂಬ ಎರಡನೆಯ ಡಿವಿಡಿ ಯನ್ನು ಇದೇ ಏಪ್ರಿಲ್ 9ರಂದು ವಿ.ಎಫ್.ಸಿ.ಯವರ ಸಹಭಾಗಿತ್ವದಲ್ಲಿ ಬಿಡುಗಡೆ ಮಾಡಿದಕ್ಕಾಗಿಯೂ
- ಇದೇ ಏಪ್ರಿಲ್ 10-12ರವರೆಗೆ ನಡೆದ ಕ್ಷೇತ್ರ ಸಮ್ಮೇಳನದಲ್ಲಿ ಹೆಚ್ಚಿನ ಮಂದಿ ಉತ್ತೇಜನ ಹೊಂದಿದಕ್ಕಾಗಿಯೂ

- ಸುವಾರ್ತಿಕರು ಶ್ರೀ/ಶ್ರೀಮತಿ ಪ್ರಭಾತ್‌ರವರು ಸಮೀಕ್ಷೆ ನಡೆಸುತ್ತಿರುವಾಗ ಸುವಾರ್ತೆಗೆ ವಿರೋಧಿಸುವವರ ಆಕ್ರಮಣದಿಂದ ಸಂರಕ್ಷಿಸಲ್ಪಟ್ಟಿದ್ದಕ್ಕಾಗಿಯೂ ಒಂದು ದಿನದ ಯುವಜನ ಕೂಟದಲ್ಲಿ ಯೌವನಸ್ಥರು ದೇವರ ಮಾರ್ಗದರ್ಶನಕ್ಕಾಗಿ ಬೇಡಿಕೊಳ್ಳಲು ಉತ್ತೇಜಿಸಲ್ಪಟ್ಟಿದ್ದಕ್ಕಾಗಿಯೂ ಫೀಬಾ ರೇಡಿಯೋದವರು ಐ.ಇ.ಎಂ.ನ ಸಹಭಾಗಿತ್ವದಲ್ಲಿ ಕುವಿ ರೇಡಿಯೋ ಕಾರ್ಯಕ್ರಮವನ್ನು ಪ್ರಚಾರ ಮಾಡಲು ಸಿದ್ಧರಾಗಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ಆಸಕ್ತನಾದ ಚಿತ್ರೋ ಚಿಕ್ಕಂದಿನಿಂದ ದೇಹದ ಕೀಲುಗಳ ಸಮಸ್ಯೆಯಿಂದ ಗುಣಹೊಂದುವಂತೆ ಪ್ರಾರ್ಥಿಸಿ ಹೀಗೆ ಅವನ ಇಡೀ ಕುಟುಂಬದವರು ಯೇಸುವನ್ನು ನಂಬುವಂತೆಯೂ
- ಸಭೆಯಲ್ಲಿ ಮಾತೃಭಾಷೆಯ ಸಾಕ್ಷರತಾ ಕಾರ್ಯಕ್ರಮವನ್ನು ನಡೆಸುವುದರ ಮೂಲಕ ವಿಶ್ವಾಸಿಗಳು ಓದು ಬರಹವನ್ನು ಕಲಿತು ತಮ್ಮ ಭಾಷೆಯಲ್ಲಿ ದೇವರ ವಾಕ್ಯವನ್ನು ಓದಿ ಅರ್ಥಮಾಡಿಕೊಳ್ಳುವಂತೆಯೂ
- ಶ್ರೀ/ಶ್ರೀಮತಿ ಪ್ರಭಾತ್ ಹೊಸ ಪ್ರದೇಶದಲ್ಲಿ ಸೇವೆಯನ್ನು ಪ್ರಾರಂಭಿಸುವಂತೆಯೂ
- ಹಿರಿಯರೂ ಸ್ಥಳೀಯ ಸುವಾರ್ತಿಕರೂ ಸಹಾಯಕರೂ ಒಮ್ಮತವಾಗಿ ಸೇವೆ ಮಾಡುತ್ತಾ ಅನೇಕ ಸಭೆಗಳನ್ನು ಪ್ರಾರಂಭಿಸುವಂತೆಯೂ
- ಜೀವನ್ ಜ್ಯೋತಿ ಹುಡುಗರ ಹಾಸ್ಟೆಲ್ಲಿಗೆ ಹೊಸದಾಗಿ ಹುಡುಗರನ್ನು ಆಯ್ಕೆ ಮಾಡಿಕೊಳ್ಳುವಂತೆಯೂ

## 27 ಸಮುದಾಯ ಆರೋಗ್ಯ ಸಂರಕ್ಷಣೆ ಮತ್ತು ಅಭಿವೃದ್ಧಿ ಯೋಜನೆ - ಹೊಸೂರು

**ಸ್ತೋತ್ರಮಾಡಿರಿ**

- ಕೆಲವು ಸುವಾರ್ತಿಕರು ವೆಲ್ಲೂರಿನ 'ರೂಷ' ಕೇಂದ್ರದಲ್ಲಿ ಸಿ.ಎಲ್.ಹೆಚ್.ಟಿ.ಸಿ. ಶಿಕ್ಷಣವನ್ನು ಹೊಂದಿರುವುದಕ್ಕಾಗಿಯೂ
- ಮುಂದಿನ ಸಿ.ಎಲ್.ಹೆಚ್.ಟಿ.ಸಿ. ಶಿಕ್ಷಣವನ್ನು 25 ಮಂದಿ ಸಿದ್ಧರಾಗಿರುವುದಕ್ಕಾಗಿಯೂ
- ಈ ಸೇವೆಯನ್ನು ಮುಂದುವರೆಸಲು ಕರ್ತನ ನಡೆಸುವಿಕೆಗಾಗಿಯೂ

**ಪ್ರಾರ್ಥಿಸಿರಿ**

- ಸಿ.ಎಲ್.ಹೆಚ್.ಟಿ.ಸಿ. ಶಿಕ್ಷಣ ಹೊಂದಿದವರು ಕುಶಲತೆಯನ್ನು ತಮ್ಮ ಸುವಾರ್ತಾ ಕ್ಷೇತ್ರಗಳಲ್ಲಿ ಉಪಯೋಗಿಸುವಂತೆಯೂ
- ನಮ್ಮ ಎಲ್ಲಾ ಕ್ಷೇತ್ರಗಳಲ್ಲಿ ಸಾಕ್ಷರತಾ ಕಾರ್ಯಕ್ರಮವನ್ನು ಪ್ರಾರಂಭಿಸುವಂತೆಯೂ
- ಅನೇಕ ಕ್ಷೇತ್ರಗಳಲ್ಲಿ ಸಮುದಾಯ ಕಲ್ಯಾಣ ಯೋಜನೆಗಳನ್ನು ಪ್ರಾರಂಭಿಸುವಂತೆಯೂ

## 28 ಉತ್ತರ ಪ್ರದೇಶ - ಉತ್ರಾಲ

**ಸ್ತೋತ್ರಮಾಡಿ**

- ಪ್ರಾರ್ಥನೆಗೆ ಉತ್ತರವಾಗಿ ವಿವಾಹವಾಗಿ 8 ವರ್ಷಗಳ ನಂತರ ವಿಶ್ವಾಸಿ ಮಿಟ್ಟುನ್ ಹೆಂಡತಿ ಗರ್ಭವತಿಯಾಗಿದ್ದಕ್ಕಾಗಿಯೂ
- ಪಿಡಿಯಾ ಹಳ್ಳಿಯಲ್ಲಿ ಸುವಾರ್ತಾ ಪ್ರಚಾರಣೆಗೆ ಅವಕಾಶ ದೊರೆತಿರುವುದಕ್ಕಾಗಿಯೂ ನಮ್ಮ ವಿಶ್ವಾಸಿಗಳ ಮೂಲಕ ಅಲ್ಲಿ ಅನೇಕ ಜನರನ್ನು ಸಂಪರ್ಕಿಸಿರುವುಕ್ಕಾಗಿಯೂ
- ಹಾಸ್ಟೆಲ್ಲಿನ ಮಕ್ಕಳು ಒಂದು ವರ್ಷದ ವಿದ್ಯಾಭ್ಯಾಸವನ್ನು ಸಫಲತೆಯಿಂದ ಪೂರ್ಣಗೊಳಿಸಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ವಿಶ್ವಾಸಿ ಪಾರ್ವತಿ ಕ್ಷಯ ರೋಗದಿಂದ ಗುಣ ಹೊಂದುವಂತೆಯೂ
- ಬೇಸಿಗೆಯ ಝಳದಿಂದ ಸಂರಕ್ಷಣೆಗಾಗಿಯೂ

## 29 ಅಸ್ಸಾಮ್ - ಗೋಲ್‌ಘಾಟ್

**ಸ್ತೋತ್ರಮಾಡಿರಿ**

- ಹಲ್ಮೀರಾ ಹಳ್ಳಿಯಲ್ಲಿ ಅನೇಕ ಮಕ್ಕಳು ಪಾಠ ಹೇಳಿಸಿಕೊಂಡು ಲಾಭ ಹೊಂದುತ್ತಿರುವುದಕ್ಕಾಗಿಯೂ
- ಕರ್ಬಿ ಅಂಗ್ಲಾಂಗ್ ಪ್ರದೇಶದಲ್ಲಿ ಜನರು ಕ್ಷೇತ್ರ ಮತ್ತು ಸಭಾಸಭೆಯಲ್ಲಿ ಸಹಾಯಮಾಡಲು ಸಿದ್ಧರಾಗಿರುವುದಕ್ಕಾಗಿಯೂ

**ಪ್ರಾರ್ಥಿಸಿರಿ**

- ಅಹೋಮ್ ಮತ್ತು ಅಮ್ಲಾಂಗ್ ಜನರ ಮಧ್ಯೆ ಸೇವೆಗೆ ಅವಕಾಶ ದೊರೆಯುವಂತೆಯೂ
- ಸೇವೆಗೆ ಬೆಂಬಲ ನೀಡಲು ಇನ್ನೂ ಹೆಚ್ಚು ಸ್ಥಳೀಯ ಸುವಾರ್ತಿಕರ ಅಗತ್ಯತೆಗಾಗಿಯೂ

## 30 ಮಹಾರಾಷ್ಟ್ರ - ಯೋಜನಾ ಕಛೇರಿ ನಾಗ್‌ಪುರ್

**ಸ್ತೋತ್ರಮಾಡಿರಿ**

- ಹಾಸ್ಟೆಲ್ಲಿನ ಕೆಲವು ಮಕ್ಕಳಿಗೆ ದೊರೆತ ಸಂರಕ್ಷಣೆಗಾಗಿಯೂ ಕೆಲವು ಮಕ್ಕಳು ವ್ಯಾಸಂಗದಲ್ಲಿ ಅತ್ಯುತ್ತಮವಾಗಿ

ಮಾಡಿದ್ದರಿಂದ ಎರಡು ತರಗತಿಗಳು ಮುಂದೆ ಹೋಗುವ ಅವಕಾಶ ದೊರೆತಿದ್ದಕ್ಕಾಗಿಯೂ

- 16 ಹಾಸ್ಟೆಲ್ಲುಗಳು ಮತ್ತು 3 ಬಾಲವಾಡಿ ಕೇಂದ್ರಗಳ ಮೂಲಕ 535 ಮಕ್ಕಳ ಪರಿಪಾಲನೆ ಮಾಡುತ್ತಿರುವಾಗಿ ಇವೆಲ್ಲಾ ಅಗತ್ಯತೆಗಳನ್ನು ದೇವರು ಒದಗಿಸಿದಕ್ಕಾಗಿಯೂ

**ಪ್ರಾರ್ಥಿಸಿರಿ**

- ರಾಬರ್ಟ್ಸ್‌ಗಂಜ್ (ಉತ್ತರ ಪ್ರದೇಶ) ಮತ್ತು ಹೊ (ಒಡಿಶ) ಕ್ಷೇತ್ರಗಳಲ್ಲಿ ಎರಡು ಹಾಸ್ಟೆಲ್ಲುಗಳಿಗೆ ಹೊಸದಾಗಿ ಸೇರಿಸಿರುವ ಮಕ್ಕಳ ಹೊಸ ವಾತಾವರಣಗಳನ್ನು ಹೊಂದಿಕೊಳ್ಳುವಂತೆಯೂ
- ಹಾಸ್ಟೆಲ್ಲುಗಳನ್ನು ಪ್ರಾರಂಭಿಸಲು ಈಗಿರುವ ಹಾಸ್ಟೆಲ್ಲುಗಳನ್ನು ನಿರ್ವಹಿಸುವುದಕ್ಕೂ ಬೇಕಾದ ಹಣ ಸಹಾಯಕ್ಕಾಗಿಯೂ

### 31 ಸಭಾಸೇವೆ - ನಾಗಾಲ್ಯಾಂಡ್

**ಸ್ತೋತ್ರಮಾಡಿರಿ**

- ಅಶಾಂತತೆಯ ಮಧ್ಯೆ ಪ್ರಯಾಣದಲ್ಲಿ ದೊರೆತ ಸಂರಕ್ಷಣೆಗಾಗಿಯೂ
- ಸುವಾರ್ತಿಕರಿಗೆ ದೊರೆತ ಆರೋಗ್ಯಕ್ಕಾಗಿಯೂ

**ಪ್ರಾರ್ಥಿಸಿರಿ**

- ಬೇರೆ ಬೇರೆ ಸಭೆಗಳಲ್ಲಿ ನಡೆಸುವ ಸುವಾರ್ತಾ ಶಿಬಿರಗಳಿಗಾಗಿಯೂ
- ಐ.ಇ.ಎಂ. ಮತ್ತು ಯುನೈಟೆಡ್ ಸಂಗಟನ್ ಬ್ಯಾಪ್ಟಿಸ್ಟ್ ಸಭೆಗಳ ಅಸೋಸಿಯೇಶನ್ ಮತ್ತು ಯಿಖುಮ್ ಬ್ಯಾಪ್ಟಿಸ್ಟ್ ಚರ್ಚುಗಳ ಮಧ್ಯೆ ಎಂ.ಒ.ಯು.ಗಳನ್ನು ಸಹಿಹಾಕುವಂತೆಯೂ

**ಮೊಣಕಾಲಿನ ಮೇಲೆ ಬಾಗಿದವನು ದೃಢವಾಗಿ ನಿಲ್ಲಬಲ್ಲನು**

# ಮಹತ್ತಾದ ವಿಷಯಗಳು ಮುಂಬರಲಿದೆ

2011 ಏಪ್ರಿಲ್‌ನಲ್ಲಿ ಕಮೇಲಿಯಿಂದ ದಿಲ್‌ಮೆಲಿಗೆ ಹೋದ 9 ತಿಂಗಳಿನೊಳಗೆ ಸೇವೆಗೆ ಅವಕಾಶ ದೊರೆಯುತ್ತಿರುವುದನ್ನು ನೋಡಿದೆವು. ದೇವರು ಜೀರಾಲ್, ಜೋಗಲ್ ಕುಟುಂಬದವರು ಮತ್ತು ಸುಕ್ದಿ ಇವರೆಲ್ಲರನ್ನೂ ಅನೇಕ ಅಸ್ವಸ್ಥತೆಯಿಂದ ಗುಣಪಡಿಸಿದನು. ನಾವು ಎರಡು ಆಸಕ್ತರ ಕೂಟಗಳನ್ನು ಹೊಸ ವಿಶ್ವಾಸಿಗಳಿಗೆ ಕ್ರಿಸ್‌ಮಸ್ ಕಾರ್ಯಕ್ರಮವನ್ನು ನಡೆಸಿದೆವು.

ನಾವು 10 ಹಳ್ಳಿಗಳನ್ನು ಸಂದರ್ಶಿಸಿದೆವು. ಹೊಸ ಅವಕಾಶಗಳನ್ನು ಕಂಡುಕೊಂಡೆವು. ಅನೇಕ ವಿಶ್ವಾಸಿಗಳು ಕರ್ತನಲ್ಲಿ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಲು ಸಿದ್ಧರಾದರೂ ಸುವಾರ್ತೆಗೆ ವಿರೋಧಿಸುವವರು ತಡೆಗಟ್ಟಿದರು. 2012ರ ಮಾರ್ಚ್ ಮೂರನೆಯ ವಾರದಲ್ಲಿ ಜೀರಾಲ್‌ನಿಂದ ಈ ವಿಷಯವನ್ನು ತಿಳಿದೆವು. ಒಂದುವೇಳೆ ನಾವು ಬೀಸ್‌ಪುರ್ ಹಳ್ಳಿಯಲ್ಲಿ ಆರಾಧನೆಯನ್ನು ನಡೆಸಿದರೆ ಜೀರಾಲ್‌ನನ್ನು ಹಳ್ಳಿಯಿಂದ ಹೊರಗೆ ಹಾಕುತ್ತಾರೆಂದೂ ತಿಳಿದು ಬಂದಿತು. ಆದರೂ ಕರ್ತನು ಬಹಿರಂಗವಾಗಿ ವಿಶ್ವಾಸಿಗಳನ್ನು ಭೇಟಿ ಮಾಡಲು ಅವಕಾಶ ನೀಡಿದನು. ವಿರೋಧಿಗಳಿಂದ ಅಡಚಣೆಗಳಿದ್ದರೂ ಕರ್ತನು ನಮಗೆ ಅದ್ಭುತ ವಿಷಯಗಳನ್ನು ಮುಂದಿಟ್ಟಿದ್ದಾನೆಂದು ನಂಬಿದ್ದೇವೆ. ನಮಗಾಗಿ ಪ್ರಾರ್ಥಿಸಿರಿ.

**ಜೀವನ್ ಪಾಲ್ ಮತ್ತು ಮರ್ಸಿ**

ಬೈಸನ್ ಹಾರನ್ ಮಡಿಯಾ ಜನರ ಸುವಾರ್ತಿಕರು



**ಜನನ:** ಆಂಧ್ರಪ್ರದೇಶದ ಅರಾಕು ಶ್ರೇಣಿಯಲ್ಲಿ ಸುವಾರ್ತಿಕರಾದ ಶ್ರೀ/ಶ್ರೀಮತಿ ಕನಕ ರತ್ನಮ್‌ರವರಿಗೆ ಇದೇ ಜೂನ್ 4ರಂದು ಹೆಣ್ಣುಮಗುವು ಜನಿಸಿತು. ಈ ದಂಪತಿಗಳು ಮಗಳನ್ನು ಕರ್ತನ ಪ್ರೀತಿ ಮತ್ತು ಭಯಭಕ್ತಿಯಲ್ಲಿ ಬೆಳೆಸಲು ಕರ್ತನ ನಡೆಸುವಿಕೆಗಾಗಿ ಪ್ರಾರ್ಥಿಸಿರಿ.

ಸುವಾರ್ತಿಕನ ಆತ್ಮಕಥೆ: ಫ್ರೆಡ್ರಿಕ್ ಟಕ್ಕರ್

# ಆತನು ಸೇವೆ ಮಾಡಲು ತ್ಯಾಗ ಮಾಡಿದನು



ರಾಜಮನೆತನದ ಗಣ್ಯ ಐಶ್ವರ್ಯವಂತ ಕುಟುಂಬದ ಮಗನಾದ ಫ್ರೆಡ್ರಿಕ್ ಟಕ್ಕರ್‌ರವರು ಇಂಡಿಯನ್ ಸಿವಿಲ್ ಸರ್ವಿಸ್‌ನಲ್ಲಿ ಉತ್ತಮ ಸ್ಥಾನದ ಹುದ್ದೆಯನ್ನು ಬಿಟ್ಟು 'ಸಾಲ್ವೇಶನ್ ಆರ್ಮಿ'ಯಲ್ಲಿ ಕರ್ತನ ಸೇವೆಗೆ ಸಮರ್ಪಿಸಿಕೊಂಡು ಭಾರತವನ್ನೂ ಸೇರಿಸಿ ಅನೇಕ ದೇಶಗಳಲ್ಲಿ ಸೇವೆ ಸಲ್ಲಿಸಿದರು.

ಫ್ರೆಡ್ರಿಕ್ ಟಕ್ಕರ್‌ರವರು 1853ರ ಮೇ 21ರಂದು ಪೂರ್ವೋತ್ತರ ಭಾರತದಲ್ಲಿ ಜನಿಸಿದರು. ಏಳು ವರ್ಷದವನಾದಾಗ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಲ್ಪಟ್ಟರು. ನಂತರ ಚೆಲ್ಟೆನ್ ಹ್ಯಾಮ್ ಕಾಲೇಜಿನಲ್ಲಿ ಓದಿದ ನಂತರ 1874ರಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್ ಕೆಲಸ ಮಾಡಲು ಪ್ರಾರಂಭಿಸಿದರು. ಅಮೆರಿಕಾದ ಸುವಾರ್ತಿಕರು ಡಿ.ಎಲ್. ಮೂಡಿ ಮತ್ತು ಐರಾ ಸ್ಯಾಂಕಿಯವರು ಲಂಡನ್ನಿನಲ್ಲಿ ನಡೆಸಿದ ಚಳುವಳಿಯಲ್ಲಿ ಕರ್ತನಿಗೆ ತಮ್ಮನ್ನು ಒಪ್ಪಿಸಿಕೊಟ್ಟರು. 24ನೇ ವಯಸ್ಸಿನಲ್ಲಿ 42 ವಯಸ್ಸಿನ ಲೂಯಿಸಾ ಮೇರಿ ಬೋಡೆಯವರನ್ನು ವಿವಾಹವಾದರು.

ಟಕ್ಕರ್‌ರವರು ಸಾಲ್ವೇಶನ್ ಆರ್ಮಿಯ ಬಗ್ಗೆ ಕೇಳಿ ಜನರಲ್ ವಿಲಿಯಮ್ ಬೂತ್‌ರವನ್ನು ಭೇಟಿಯಾದರು. ಪ್ರಾರಂಭದಲ್ಲಿ ಇವರು ಟಕ್ಕರ್‌ರವರನ್ನು ಸಾಲ್ವೇಶನ್ ಆರ್ಮಿಗೆ ಸೇರಿಸಿಕೊಳ್ಳಲು ಆಸಕ್ತಿ ತೋರದಿದ್ದರೂ ನಂತರ ಅವಕಾಶ ನೀಡಿದಾಗ ಟಕ್ಕರ್‌ರವರು ತಮ್ಮ ಉತ್ತಮ ಹುದ್ದೆಗೆ ರಾಜೀನಾಮೆ ನೀಡಿದರು. ಇದು ಅವರ ಕುಟುಂಬಕ್ಕೆ ಬೇಸರವನ್ನುಂಟು ಮಾಡಿತು. 1882ರಲ್ಲಿ ಇವರನ್ನು ಪತ್ನಿಯೊಂದಿಗೆ ಭಾರತದಲ್ಲಿ ಸಾಲ್ವೇಶನ್ ಆರ್ಮಿಯ ಸುವಾರ್ತಿಕರಾಗಿ ಕಳುಹಿಸಲಾಯಿತು. ಇಲ್ಲಿ ಇವರನ್ನು ''ಫಕೀರ್ ಸಿಂಗ್'' ಎಂದರೆ ''ದೇವರ ಸಿಂಹ'' ಎಂದರ್ಥ. ಇವರು ಜೊತೆಗಾರರೊಂದಿಗೆ ಕಾವಿ ಬಟ್ಟೆಯನ್ನು ಧರಿಸಿ ಬಹಿಷ್ಕೃತರ ಮಧ್ಯೆ ಸೇವೆ ಮಾಡಿದರು. ಇವರ ಪತ್ನಿ ಲೂಯಿಸಾ ಕಾಲರಾ ರೋಗಕ್ಕೆ ಬಲಿಯಾದ ನಂತರ ಇವರು 1888ರಲ್ಲಿ ಎಮ್ಮ ಬೂತ್‌ರವರನ್ನು ವಿವಾಹವಾದರು.

ಎಮ್ಮ ಖಾಯಿಲೆಯಾದಾಗ ತಮ್ಮ ಪ್ರಿಯ ಭಾರತ ದೇಶವನ್ನು ಬಿಟ್ಟು ಲಂಡನ್ನಿನ ಅಂತರ ರಾಷ್ಟ್ರೀಯ ಕೇಂದ್ರ ಕಛೇರಿಯಲ್ಲಿ ಸೇವೆ ಮಾಡಲು ಪ್ರಾರಂಭಿಸಿದರು. ಟಕ್ಕರ್‌ರವರನ್ನು ಅಮೆರಿಕಾದ ಸಾಲ್ವೇಶನ್ ಆರ್ಮಿಯ ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಆದರೆ 1903ರಲ್ಲಿ ಎಮ್ಮ ಟಕ್ಕರ್‌ರವರು ರೈಲ್ವೆ ಅಪಘಾತದಲ್ಲಿ ಮೃತರಾದರು. ಟಕ್ಕರ್‌ರವರು ಭಾರತದಲ್ಲಿ ಸೇವೆ ಮಾಡಲು ಅಪೇಕ್ಷಿಸಿದರೂ ಅವರನ್ನು ಮತ್ತೆ ಅಂತರ ರಾಷ್ಟ್ರೀಯ ಕೇಂದ್ರ ಕಛೇರಿಗೆ ಹಿಂದಕ್ಕೆ ಕರೆದುಕೊಳ್ಳಲಾಯಿತು. 1906ರಲ್ಲಿ ಇವರ ಜೀವನಕ್ಕೆ ಸರಿಹೊಂದಿಕೊಳ್ಳುವ ಕರ್ನಲ್ ಮಿನ್ನಿ ರೈಡ್‌ರವರನ್ನು ವಿವಾಹವಾದರು. ಇವರಿಬ್ಬರು ಭಾರತಕ್ಕೆ ಹಿಂತಿರುಗಿ ಅನೇಕ ವರ್ಷಗಳು ಸೇವೆ ಸಲ್ಲಿಸಿದರು.

1919ರಲ್ಲಿ ಟಕ್ಕನ್‌ರವರು ಅಸ್ವಸ್ಥರಾಗಿದ್ದರಿಂದ ಇವರನ್ನು ಬಲವಂತವಾಗಿ ಇಂಗ್ಲೆಂಡಿಗೆ ಹಿಂದಕ್ಕೆ ಕಳುಹಿಸಲಾಯಿತು. ಭಾರತಕ್ಕೆ ಹಿಂತಿರುಗಲು ಬಯಸಿದರು. ಜನರಲ್ ಬ್ರಾಮ್ವೆಲ್ ಬೂತ್‌ರವರು ಅದಕ್ಕೆ ಸಮ್ಮತಿಸಲಿಲ್ಲ. 1924ರಲ್ಲಿ ತಮ್ಮ ಸೇವೆಯಿಂದ ನಿವೃತ್ತರಾದರು. 1928ರಲ್ಲಿ ಈ ಸಮರ್ಪಿತ ಜೀವವು ಲಂಡನ್ನಿನ ಸ್ಟೋಕ್ ನ್ಯೂಯಿಂಗ್‌ಟನ್‌ನಲ್ಲಿ ಕರ್ತನ ಪಾದ ಸನ್ನಿಧಿ ಸೇರಿದರು. ಇವರನ್ನು ಅಬ್ನ ಪಾರ್ಕಿನ ಸಮಾಧಿಯಲ್ಲಿ ಹೂಳಿಡಲಾಯಿತು.

ಫ್ರೆಡ್ರಿಕ್ ಟಕ್ಕರ್‌ರವರು ಅನೇಕ ಪದ್ಯಗಳನ್ನೂ ಹಾಡುಗಳನ್ನೂ ಜೊತೆಗೆ ಸಾಲ್ವೇಶನ್ ಆರ್ಮಿಯ ಪ್ರಿಯವಾದ 100 ಹಾಡುಗಳನ್ನೂ ರಚಿಸಿದರು. 1893ರಲ್ಲಿ ಇವರೇ 'ದಿ ಆಫೀಸರ್'ನ ಪ್ರಥಮ ಸಂಪಾದಕರಾದರು. ಇದಲ್ಲದೆ 'ಕ್ಯಾತರೀನ್ ಬೂತ್‌ರವರ ಜೀವನ ಚರಿತ್ರೆ', 'ದಿ ಕೌನ್ಸಲ್' ಮತ್ತು 'ಮುಕ್ತಿಫೌಜ್' ಇವೇ ಮೊದಲಾದ ಪುಸ್ತಕಗಳನ್ನು ಬರೆದಿದ್ದಾರೆ.

ನನ್ನ ಆಸ್ಪತ್ರೆಯ ಅನುಭವ

# ಬಾಧೆಯಲ್ಲಿ ಲಾಭ

ಇತ್ತೀಚಿನ ನನ್ನ ಅನಾರೋಗ್ಯತೆಗಾಗಿ ದೇವರಿಗೆ ವಂದಿಸುತ್ತೇನೆ. ಪ್ರಾರಂಭದಲ್ಲಿ ದೇವರು ನಾನು ಈ ನೋವನ್ನು ಅನುಭವಿಸಲು ಯಾಕೆ ಬಿಟ್ಟನೆಂಬುದು ತಿಳಿಯದಿದ್ದರೂ ಇದಕ್ಕಾಗಿ ದೇವರನ್ನು ಕೊಂಡಾಡುತ್ತೇನೆ. ಇದು ನನ್ನನ್ನು ಆತನ ಸಮೀಪಕ್ಕೆ ಸೆಳೆಯಿತು. ಮತ್ತು ಆತನು ನನ್ನ ಪಾಲಿಗೆ ಒಳ್ಳೆಯವನೆಂಬುದನ್ನು ಮತ್ತೆ ಕಂಡುಕೊಂಡೆನು. ನನ್ನ ನೋವು ನನ್ನ ಪಕ್ಕದ ರೋಗಿಯ ದಕ್ಕಿಂತಲೂ ಕಡಿಮೆಯಾಗಿತ್ತು. ನಾಲ್ಕು ದಿನಗಳಾದರೂ ಅವನನ್ನು ಆರೈಕೆ ಮಾಡುವುದಕ್ಕಾಗಲೀ ಊಟ ಮತ್ತು ಔಷಧಿ ಗಳನ್ನಾಗಲೀ ತರುವವರು ಯಾರೂ ಇರಲಿಲ್ಲ.

ನನ್ನ ಮಕ್ಕಳು ಸೋನಿಯಾ ಮತ್ತು ಜೆರೂಶ ಮನೆಯ ಜವಾಬ್ದಾರಿಕೆಯನ್ನೆಲ್ಲಾ ನಿರ್ವಹಿಸಿದರು. ನಾವು ನಾಸಿಕ್ ಕ್ಷೇತ್ರದಲ್ಲಿ ಸೇವೆ ಮಾಡುತ್ತಿದ್ದಾಗ ಪಾಲನೆ ಮಾಡಿದ ಒಬ್ಬ ಸ್ಥಳೀಯ ಸುವಾರ್ತಿಕನ ಮಗಳು ಎಲು ಬೆಂಗಳೂರಿನ ಬ್ಯಾಪ್ಟಿಸ್ಟ್ ಆಸ್ಪತ್ರೆಯಲ್ಲಿ ತನ್ನ ಶಿಕ್ಷಣವನ್ನು ಮಾಡುತ್ತಿದ್ದು ನಾಲ್ಕು ದಿನಗಳು ರಜೆ ಹಾಕಿ ನಮ್ಮ ಮಕ್ಕಳೊಂದಿಗಿದ್ದಳು.

ನಮ್ಮ ಪ್ರಧಾನ ಕಾರ್ಯದರ್ಶಿ ರೆವೆ. ಪಿ. ಜಾನ್‌ವೆಸ್ಲಿಯವರೂ ನನ್ನ ಸಹೋದ್ಯೋಗಿಗಳೂ ಸ್ನೇಹಿತರೂ ನನ್ನನ್ನು ಭೇಟಿ ಮಾಡಿದರು. ಇನ್ನೂ ಕೆಲವರು ಫೋನಿನಲ್ಲಿ ಮಾತನಾಡಿ ಯೋಗಕ್ಷೇಮ ವಿಚಾರಿಸಿದರು. ಇವರೆಲ್ಲರಿಗೂ ವಂದಿಸುತ್ತೇನೆ. ಮನೆಗೆ ಹಿಂತಿರುಗಿದ ಮೇಲೂ ಇವರು ನಗುಮುಖದಲ್ಲಿ ಹಣ್ಣುಗಳನ್ನು ತಂದಿದ್ದಲ್ಲದೆ ಹೃದಯ ಪೂರ್ವಕವಾದ ಹಿತ ಚಿಂತನೆಯಿಂದ ನನ್ನನ್ನು ಉತ್ತೇಜಿಸಿದರು. ಐ.ಇ.ಎಂ. ಒಂದು ಅದ್ಭುತ ಕುಟುಂಬವಾಗಿದ್ದು ನಾನು ಅದರಲ್ಲಿ ಸುವಾರ್ತಿಕ ನಾಗಿರಲು ಹೆಚ್ಚಳಪಡುತ್ತೇನೆ. ಸರಿಯಾದ ತಪಶೀಲನೆ, ಸೂಕ್ತ ಚಿಕಿತ್ಸೆಯ ಮೂಲಕ ನಾನು ಗುಣಹೊಂದಿದ್ದರೂ ಇದಕ್ಕಿಂತಲೂ ನಿಮ್ಮೆಲ್ಲರ ಸತತವಾದ ಪ್ರಾರ್ಥನೆಯೇ ಇದರ ಫಲವಾಗಿದೆ.

ನಾನು ದೇವರಿಗೆ ಕೃತಜ್ಞನಾಗಿದ್ದೇನೆ. ಹಾಗೂ ನನಗೆ ಚಿಕಿತ್ಸೆ ಮಾಡಿದ ಡಾ. ಅಜಯ್ ಶೆಟ್ಟಿಯವರು ವೈದ್ಯರಿಗಿಂತ ಹೆಚ್ಚಾಗಿ ನನ್ನನ್ನು ನೋಡಿಕೊಂಡಿದ್ದಕ್ಕೆ ಅವರಿಗೆ ವಂದಿಸುತ್ತೇನೆ. ಬ್ಯಾಪ್ಟಿಸ್ಟ್ ಆಸ್ಪತ್ರೆಯ ಸಿಬ್ಬಂದಿಯವರಲ್ಲಿರುವ ಸೇವಾ ಭಾವನೆಯನ್ನೂ ನೈಪುಣ್ಯತೆಯನ್ನೂ ಪ್ರಶಂಸಿಸುತ್ತೇನೆ. ಇವರು ರೋಗಿಯ ಬಾಧೆಯನ್ನು ಅರ್ಥ ಮಾಡಿಕೊಳ್ಳುತ್ತಾರೆ.

ಈ ರೋಗವು ಹೇಗೆ ಬಂದಿತೆಂಬುದು ಒಂದು ರಹಸ್ಯವಾಗಿದೆ. ನನ್ನ ಕುಟುಂಬದವರ್ಯಾರಿಗೂ ಈ ತೊಂದರೆಯಿಲ್ಲ. ಕೆಲವು ರಹಸ್ಯಗಳನ್ನು ರಹಸ್ಯವಾಗಿಯೇ ಬಿಡುವುದು ಒಳ್ಳೆಯದು.

ಅಸ್ವಸ್ಥೆಯ ಹಾಸಿಗೆಯು ನನ್ನ ಪ್ರಾರ್ಥನಾ ಕೋಣೆ ಯಾಯಿತು. ನನ್ನ ಪ್ರತಿಯೊಬ್ಬ ಸಹೋದ್ಯೋಗಿಗಾಗಿಯೂ ಹೆಸರಿಟ್ಟು ಪ್ರಾರ್ಥಿಸಿದೆನು. ನಾನು ಮತ್ತೆ ನನ್ನ ಜವಾಬ್ದಾರಿಕೆಗೆ ಹಿಂತಿರುಗಿದರೂ ಈ ಅಭ್ಯಾಸವನ್ನು ಮುಂದುವರೆಸಲು ನಿರ್ಧರಿಸಿದೆನು. ನನ್ನ ಪತ್ನಿ ಶಾಲಿನಿ ನನ್ನೊಂದಿಗಿದ್ದ ರೋಗಿಗಳನ್ನು ಸಂಧಿಸಿ ಅವರ ಕಷ್ಟ ಸಮಸ್ಯೆಗಳನ್ನು ವಿಚಾರಿಸಿ ಅವರನ್ನು ಆರೈಕೆ ಮಾಡುವುದರಲ್ಲಿ ತಲ್ಲೀನಳಾಗಿರುತ್ತಿದ್ದಳು. ಕೆಲವೊಮ್ಮೆ ನನ್ನ ಅಗತ್ಯತೆಗಾಗಿ ಬಲವಂತವಾಗಿ ಕರೆಯಬೇಕಿತ್ತು. ಅಷ್ಟು ಆಸಕ್ತಿಯಿಂದ ಮನಃಪೂರ್ವಕವಾಗಿ ಸೇವೆ ಮಾಡುತ್ತಿದ್ದಳು.

**ಜೀವನದ ನೀತಿಪಾಠ**

ಕರ್ತನೊಂದಿಗೆ ಸಮಯವನ್ನು ಕಳೆಯುತ್ತಿರುವಂತೆ ಆತನಲ್ಲಿ ನನ್ನ ಪ್ರೀತಿಯು ಬಲಹೀನವಾಗಿದೆಯೆಂದರಿತನು. ಆದ್ದರಿಂದ ನನ್ನ ಕುಂದುಕೊರತೆಯನ್ನು ಆತನಲ್ಲಿ ಅರಿಕೆಮಾಡಿ ಕ್ಷಮೆ ಬೇಡಿದೆನು. ಹಾಗೂ ನನಗೆ ಸೇವೆಮಾಡಲು ಜೀವಿಸುವಂತೆ ಇನ್ನೊಮ್ಮೆ ಅವಕಾಶ ಕೊಡೆಂದು ಬೇಡಿಕೊಂಡೆನು. ನಾನು ಗೆಲುವಿಗಾಗಿ ಜೀವಿಸದೆ ಪರಲೋಕದ ತಂದೆಯ ಚಿತ್ತವನ್ನು ನೆರವೇರಿಸಲು ಜೀವಿಸುವಂತೆ ನನಗಾಗಿ ಪ್ರಾರ್ಥಿಸಿರಿ.

ನಾನು ಎಲ್ಲಿದ್ದೇನೊ ಅದು ದೇವರ ನೇಮಕವೆಂಬುದನ್ನು ಮನಗಂಡೆನು. ಆದ್ದರಿಂದ ಜನರು ನನ್ನ ಬಗ್ಗೆ ಏನೇ ತಿಳಿದರೂ ಏನೇ ಮಾಡಿದರೂ ಆತನು ನನ್ನನ್ನು ಸಂರಕ್ಷಿಸಿ ನನ್ನನ್ನು ಉಪ ಯೋಗಿಸುವಾತನಾಗಿದ್ದಾನೆ. ಆತನು ತಿಳಿದಿರುವುದರಿಂದಲೇ ಆತನು ಬೆಳೆಸುತ್ತಾನೆ.

**ರೆವೆ. ಜೊನತಾನ್ ಚವಾನ್**

## ನಿಧನವಾರ್ತೆ

**ಶ್ರೀ ಶಂಕರ್ ರಾಯ್,** ಶ್ರೀಮತಿ ಬಂಟಿ ಸೂರಜ್ ಮಜಿಯ ತಂದೆಯವರು ಇದೇ ಮೇ 14ರಂದು ತೀರಿ ಹೋದರು. ನಮ್ಮ ಸುವಾರ್ತಿಕರು ಸುವಾರ್ತಿಕರ ಕುಟುಂಬಗಳ ಸಮ್ಮೇಳನಕ್ಕಾಗಿ ಪ್ರಯಾಣ ಮಾಡುತ್ತಿದ್ದಾಗ ಈ ವಾರ್ತೆಯು ಅವರಿಗೆ ತಿಳಿಯಿತು.

**ಶ್ರೀಮತಿ ಶೆಲ್ಲಿ ಹೂಜನ್,** ಅರುಣಾಚಲ್ ಪ್ರದೇಶದಲ್ಲಿ ಸುವಾರ್ತಿಕನಾದ ಲೆಸ್ಟರ್ ಜಾನ್‌ನ ತಾಯಿಯವರು ಇದೇ ಮೇ 15ರಂದು ತೀರಿಹೋದರು.

**ಶ್ರೀ ಚೆಲ್ಲಯ್ಯ,** ವೆಲ್ಲೂರಿನ ಸಭಾ ಸೇವೆಯ ಸಂಯೋಜಿತರಾದ ರೆವೆ. ಥಾಮಸ್ ಎಡಿಸನ್‌ರವರ ತಂದೆಯವರು ಇದೇ ಮೇ 19ರಂದು ತೀರಿಹೋದರು.

**ಶ್ರೀ ನಂದ ಲಾಲ್,** 67 ವಯಸ್ಸು ಕುಲುವಿನ ಸುವಾರ್ತಿಕಳು ಶ್ರೀಮತಿ ರೀನಾದೇವಿಯ ತಂದೆ ಯವರು ಇದೇ ಜೂನ್ 9ರಂದು ಕರ್ತನಲ್ಲಿ ನಿದ್ದೆ ಹೋದರು. ಈ ಎಲ್ಲಾ ದುಃಖಿತ ಕುಟುಂಬದವರನ್ನು ಕರ್ತನು ತಾನೇ ಸಂತೈಸಿ ಆದರಿಸಲೆಂದು ಪ್ರಾರ್ಥಿಸಿರಿ.

ಕ್ಷೇತ್ರಗಳಿಂದ

ಕೊರಾಪುಟ್, ಒಡಿಶ

## ಕರ್ತನ ಆನಂದವೇ ನಿಮ್ಮ ಬಲವಾಗಿದೆ

ನಮ್ಮ ಖೋಂಡ್ ಜನರಿಗೆ ಹಾಡುವುದು ಮತ್ತು ನೃತ್ಯ ಬಹುಪ್ರಿಯ. ಇವರು ಕ್ರೈಸ್ತರಾದ ನಂತರ ಇತರರು ''ಈಗ ಆನಂದಿಸಲು ಏನು ಮಾಡುವಿರಿ?'' ಎಂದು ಪ್ರಶ್ನಿಸುವರು. ಇದೇ ಏಪ್ರಿಲ್ 9 ಮತ್ತು 10ರಂದು ಇವರೆಲ್ಲರಿಗೂ ಆನಂದ ಮಯವಾದ ಆಚರಣೆಯ ದಿನಗಳಾಗಿದ್ದವು. 7 ಹಳ್ಳಿಗಳಿಂದ ಇವರೆಲ್ಲರೂ ಒಂದುಗೂಡಿ ಬಂದರು. ದೇವರ ವಾಕ್ಯವನ್ನು ಕೇಳಿದ್ದಲ್ಲದೆ ತಮ್ಮ ಕುಶಲತೆಗಳನ್ನು ಕಿರುನಾಟಕಗಳು ನೃತ್ಯ ಮತ್ತು ಆಟಗಳ ಮೂಲಕ ವ್ಯಕ್ತಪಡಿಸಿದರು. ನಿಜವಾಗಿ ಕರ್ತನ ಆನಂದವು ಇವರೆಲ್ಲರ ಮುಖಗಳಲ್ಲಿ ಪ್ರಕಾಶಿಸುತ್ತಿತ್ತು. ಶ್ರೀ/ಶ್ರೀಮತಿ ರೆಜಿನಾಲ್ಡ್‌ರವರು ಸಂದೇಶ ನೀಡಿದರು.

ಖೋಂಡ್ ಜನರು ಕುವಿ ಭಾಷೆಯನ್ನಾಡುತ್ತಾರೆ. ಸುಮಾರು 2500 ಹಳ್ಳಿಗಳಲ್ಲಿ 6 ಲಕ್ಷ ಜನರು ಜೀವಿಸುತ್ತಿದ್ದಾರೆ. ಇವರಿಗೆ ದೇವರ ಪ್ರೀತಿಯ ಸಂದೇಶವನ್ನು ತಿಳಿಸುವುದು ಆಡಿಯೋ ವಿಶ್ಯುವೆಲ್ ಮೂಲಕವಾಗಿದೆ. ''ವೆರಿಟಿ ಫಿಲ್ಮ್ ಮತ್ತು ಕಮ್ಯೂನಿಕೇಶನ್ (ವಿ.ಎಫ್.ಸಿ.) ಇವರ ಸಹಭಾಗಿತ್ವದಲ್ಲಿ ದೇವರ ಕೃಪೆಯಿಂದ ಕುವಿ ಭಾಷೆಯಲ್ಲಿ ಇವರ ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಹನ ಕಥೆಯನ್ನು ಎರಡನೆಯ ಡಿವಿಡಿಯಲ್ಲಿ ಸಿದ್ಧಪಡಿಸಲಾಗಿದೆ. ಈ ಡಿವಿಡಿಯನ್ನು ಇದೇ ಏಪ್ರಿಲ್ 9ರಂದು ಆದಿವಾಸಿ ಕ್ರೈಸ್ತ ಸಮಾಜದ ಡೀನ್ ರವರಿಂದ ಹೊರಪಡಿಸಲಾಯಿತು. ಈ ಸಮಾರಂಭಕ್ಕೆ ಅನೇಕ ಸೇವಕರು ಸ್ಥಳೀಯ ಸುವಾರ್ತಿಕರು ಕುವಿ ಕ್ರೈಸ್ತರು ಒಂದುಗೂಡಿ ಬಂದಿದ್ದೇ ಒಂದು ಸಂತೋಷವಾಗಿತ್ತು.

ಈ ಡಿವಿಡಿಯು ನಿಷೇಧಿಸಲ್ಪಟ್ಟ ಸರಹದ್ದನ್ನೂ ದಾಟಿ ಖೋಂಡ್ ಜನರು ಕ್ರಿಸ್ತನ ಪ್ರೀತಿಯನ್ನರಿಯುವಂತೆ ಪ್ರಾರ್ಥಿಸಿರಿ.

**ಪಿ. ಜೋಸೆಫ್ ಪೀಟರ್**
ಕುವಿ ತಂಡದವರ ಪರವಾಗಿ

---

ಜಲ್‌ಪೈಗುರಿ, ಪಶ್ಚಿಮ ಬಂಗಾಳ

## ಮಧುರವಾದ ಬಿಡುಗಡೆ

ಶ್ರೀ ಸುಕ್ರ ಧನ್ವಾರ್ ಸುವಾರ್ತೆಯನ್ನು ಎಷ್ಟು ಸಾರಿ ಕೇಳಿದ್ದರೂ ಕ್ರಿಸ್ತನನ್ನಂಗೀಕರಿಸಲು ನಿರಾಕರಿಸಿದನು. ಇದೇ ಮಾರ್ಚ್ 8ರಂದು ಸುಕ್ರ ಮತ್ತು ಕುಟುಂಬದವರು ಹೋಲಿ ಹಬ್ಬದಾಚರಣೆಗೆ ಸಿದ್ಧರಾಗುತ್ತಿದ್ದರು. ಇವನು ಬೆಳಗ್ಗೆ ಎದ್ದು ಸ್ನಾನಮಾಡಿ ಉಪವಾಸದಲ್ಲಿ ಊರಿನ ದೇವಸ್ಥಾನದಲ್ಲಿ ಹಬ್ಬದಾಚರಣೆಗೆ ಹೋದನು. ಅಲ್ಲಿ ಉದ್ದವಾದ ಸಾಲಿನಲ್ಲಿ ತನ್ನ ಸರದಿಗಾಗಿ ಕಾದಿದ್ದಾಗ ಅವನಿಗೆ ಒಂದು ಕಪ್ ಟೀಯನ್ನು ಕೊಡಲಾಯಿತು. ಅದನ್ನು ಕುಡಿದಿದ್ದೇ ಪ್ರಜ್ಞೆತಪ್ಪಿ ಅವನಿಗೆ ಅಂಗಾಂಗಗಳೆಲ್ಲವೂ ಹತೋಟಿ ತಪ್ಪಿತು. 15 ದಿನಗಳು ಹಾಸಿಗೆಯಲ್ಲಿಯೇ ನಿತ್ರಾಣನಾಗಿ ಬಿದ್ದಿದ್ದನು. ನಾವು ಅವನನ್ನು ಪ್ರೀತಿಸಿದ್ದರಿಂದ ಪ್ರತಿದಿನವೂ ಹೋಗಿ ಅವನಿಗಾಗಿ ಪ್ರಾರ್ಥಿಸಿದೆವು. ಕ್ರಮೇಣ ಅವನು ಸುಧಾರಿಸಿಕೊಂಡನು. ದೃಷ್ಟಿಯೂ ಮರುಕಳಿಸಿತು. ಅವನು ''ನಾನು ನಿರ್ಮಲ ಮನಸ್ಸಿನಿಂದ ಹೋಲಿಯಲ್ಲಿ ಭಾಗವಹಿಸಲು ಹೋದರೂ ಶಿಕ್ಷಿಸಲ್ಪಟ್ಟೆನು'' ಎಂದನು.

ಈಗ ಸುಕ್ರ ಮತ್ತು ಅವನ ಕುಟುಂಬದವರು ನಾಲ್ಕು ಮಂದಿ ಕ್ರಮವಾಗಿ ಆರಾಧನೆಗೆ ಬರುತ್ತಿದ್ದಾರೆ. ಕ್ರಿಸ್ತನನ್ನು ಸ್ವಂತ ರಕ್ಷಕನಾಗಿ ಅಂಗೀಕರಿಸಲು ಎಲ್ಲರೂ ಸಿದ್ಧರಾಗಿದ್ದಾರೆ. ಇವರಿಗಾಗಿ ಪ್ರಾರ್ಥಿಸಿರಿ.

**ಶ್ರೀ/ಶ್ರೀಮತಿ ಇಮ್ಮಾಂಗ್ಲೊಸು ಚಾಂಗ್**

---

ಚಿಕಲ್ದಾರ, ಮಹಾರಾಷ್ಟ್ರ

## ''ವಾರ್ಷಿಕ ಮೇಳ'' ಆಚರಣೆಯ ಸಮಯ

ಚಿಕಲ್ದಾರ ಕ್ಷೇತ್ರದ ಸಮ್ಮೇಳನ. ''ವಾರ್ಷಿಕ ಮೇಳಾ''ವನ್ನು ಇದೇ ಏಪ್ರಿಲ್ 26ರಿಂದ 29ರವರೆಗೆ ಆಚರಿಸಲಾಯಿತು. ಸುವಾರ್ತಿಕರು, ಸ್ಥಳೀಯ ಸುವಾರ್ತಿಕರು, ಸಭಾ ನಾಯಕರು, ಇದಕ್ಕಾಗಿ ಪ್ರಾರ್ಥಿಸಿ ಎಲ್ಲಾ ಏರ್ಪಾಡುಗಳನ್ನು ಮಾಡಿದರು. ಸುಮಾರು 120 ಮಂದಿ ಭಾಗವಹಿಸಿದರು.

ಮುಖ್ಯ ಸಂದೇಶಕನಾದ ಶ್ರೀ ಲೂಕ್ ವಿನೋದ್ ಟೈಟಸ್ ಕಾರಣಾಂತರವಾಗಿ ಬರಲಾಗಲಿಲ್ಲ, ಅವರ ಬದಲಾಗಿ ''ಸಿಸು'' ನಿರ್ವಾಹಕರೂ ಸಮರ್ಪಿತ ಕ್ರೈಸ್ತರೂ, ಆದ ಶ್ರೀ ಸಂಜಯ್ ಶರ್ಮರವರು ಸಮ್ಮೇಳನವನ್ನು ಉದ್ಘಾಟಿಸಿದರು. ಶ್ರೀ ಎ.ಎಂ. ಬಿಜೋಯ್‌ರವರು ''ರಕ್ಷಿಸಲು ಇಳಿದು ಬಂದಿದ್ದೇನೆ'' ಎಂಬ ಮುಖ್ಯ ವಿಷಯದ ಆಧಾರದಲ್ಲಿ ಮೊದಲ ಸಂದೇಶವನ್ನು ನೀಡಿದರು. ಹಿಂದೆ ಐ.ಇ.ಎಂ.ನ ಸುವಾರ್ತಿಕರಾಗಿದ್ದ ರೆವೆ. ಜೆ. ಗಣೇಸಪಾಂಡಿಯವರು ವಿಶ್ವಾಸಿಗಳಿಗೆ ಎಚ್ಚರಿಕೆಯನ್ನು ನೀಡುತ್ತಾ ಸುವಾರ್ತಾ ಪ್ರಚಾರಣೆಗಾಗಿ ಸುವಾರ್ತಿಕರು ಮತ್ತು ವಿಶ್ವಾಸಿಗಳು ಎಂತಹ ಪರಿಶ್ರಮ ಪಟ್ಟರೆಂಬುದನ್ನು ವಿವರಿಸಿ, ಅವರು ಯಾವ ಕಾರಣಕ್ಕೂ ತಮ್ಮ ನಂಬಿಕೆಯಲ್ಲಿ ಹಿಂತೆಗೆಯದಂತೆ ಉತ್ತೇಜಿಸಿದರು. ಬಿ.ಸಿ.ಎಂ.ನ ರೆವೆ. ಇಸ್ರಾಯೇಲ್

ಸತ್ಯವೇದಾಧ್ಯಯನವನ್ನು ನಡೆಸಿದರು. ಶ್ರೀ ಪ್ರಣಾಬ್ ಕೌರಿಯವರು ಎರಡನೆಯ ಸಂಜೆ ಸಂದೇಶ ನೀಡಿದರು. ಮಹಿಳೆಯರಿಗೆ ವಿಶೇಷ ಕೂಟವನ್ನು ಶ್ರೀಮತಿ ರೇಶ್ಮಿ ರೇಖಾ ಕೌರಿ ಮತ್ತು ಶ್ರೀಮತಿ ಜೈಸಿ ಬಿಜೋಯ್‌ರವರು ನಡೆಸಿದರು.

ಇದೇ ಏಪ್ರಿಲ್ 28ರಂದು 7 ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿದರು. ಇದರಲ್ಲಿ ದಿಲೀಪ್ ಎಂಬುವವರು ''ನನ್ನ ತಂದೆತಾಯಿಗಳು ಮೊದಲು ವಿಶ್ವಾಸಿಗಳಾಗಿದ್ದರು. ಈಗ ಮತ್ತೆ ವಿಗ್ರಹಾರಾಧನೆಗೆ ಹೋಗಿದ್ದಾರೆ. ನಾನು ಮನೆಯಲ್ಲಿ ಕೊನೆಯವನು. ದೇವರ ಮಾರ್ಗದಲ್ಲಿ ನಡೆಯಲು ನಿರ್ಧರಿಸಿದ್ದೇನೆ. ನನ್ನ ತಂದೆ ತಾಯಿಗಳು ಮತ್ತೆ ಕರ್ತನ ಬಳಿಗೆ ಬರುತ್ತಾರೆಂದು ನಂಬಿದ್ದೇನೆ'' ಎಂದು ಹೇಳಿದನು.

ಪ್ರತಿಯೊಬ್ಬರೂ ಭಜನೆ ಇತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆನಂದಿಸಿದರು. ವಿಶ್ವಾಸಿಗಳು ಸತ್ಯವೇದದ ವಚನಗಳನ್ನು ಬಾಯಿಪಾಠ ಮಾಡಲು ಉತ್ತೇಜಿಸಲ್ಪಟ್ಟರು. ಸರಿಯಾಗಿ ಬಾಯಿಪಾಠ ಹೇಳಿದವರಿಗೆ ಬಹುಮಾನ ನೀಡಲಾಯಿತು.

**ಏ.ಎಂ. ಬಿಜೋಯ್**
ಕ್ಷೇತ್ರ ಸಹ ನಿರ್ದೇಶಕ

ಸಾಕ್ಷಿ: **ಶ್ರೀ ವಿಲ್ಸನ್ ಸುಂದರರಾಜ್**

# ನನ್ನನ್ನು ಸನ್ಮಾನಿಸುವವರನ್ನು ನಾನೂ ಸನ್ಮಾನಿಸುವೆನು

ಇದೇ ಏಪ್ರಿಲ್ 21ರಂದು ಚೆನ್ನೈನ ತಮಿಳು ಬ್ಯಾಪ್ಟಿಸ್ಟ್ ಚರ್ಚಿನಲ್ಲಿ ಏರ್ಪಡಿಸಿದ್ದ ಬೆಂಬಲಿಗರ ಕೂಟದಲ್ಲಿ ಸಭಾಸೇವೆಯ ಗೌರವಯುತ ಸಂಯೋಜಿತ ಕಾರ್ಯದರ್ಶಿಯಾದ ಶ್ರೀ ವಿಲ್ಸನ್ ಸುಂದರರಾಜ್‌ರವರಿಗೆ ಅವರು ಐ.ಇ.ಎಂ.ನಲ್ಲಿ 26 ವರ್ಷ ಅವಿಶ್ರಾಂತ ಸೇವೆ ಮಾಡಿದ್ದಕ್ಕಾಗಿ ನಮ್ಮ ಪ್ರಧಾನ ಕಾರ್ಯದರ್ಶಿಯವರು ಸನ್ಮಾನಿಸಿದರು. ಇವರು ತಮ್ಮ ಕೆಲಸದಿಂದ ನಿವೃತ್ತರಾದ ನಂತರ 1986ರಿಂದ ರೆವೆ. ಥಿಯೋಡರ್ ವಿಲಿಯಮ್ಸ್‌ರವರ ಕೋರಿಕೆಯಂತೆ ಐ.ಇ.ಎಂ.ನಲ್ಲಿ ಸೇವೆ ಮಾಡಲು ಬಂದರು. ಅಸೌಖ್ಯತೆಯಲ್ಲಿಯೂ ಚೆನ್ನೈನಲ್ಲಿ 7 ಪ್ರಾರ್ಥನಾ ಕೂಟಗಳನ್ನು ನಡೆಸುತ್ತಿದ್ದರು. ಜೊತೆಗೆ ಇತರರು ಐ.ಇ.ಎಂ.ನಲ್ಲಿ ಸೇವೆಗೆ ಬರುವಂತೆ ಉತ್ತೇಜಿಸುತ್ತಿದ್ದರು. ಈ ಕೂಟದಲ್ಲಿ ರೆವೆ. ಜಾನ್ ವೆಸ್ಲಿ, ಶ್ರೀ ಜಸ್ಟಸ್ ಬ್ರೈಟ್, ಪಾಸ್ಟರ್ ಸ್ಯಾಮ್ ದೇವನೇಸಮ್, ಶ್ರೀ ಡಾನಿಯೆಲ್ ಅರುಲ್‌ದಾಸ್, ರೆವೆ. ರಾಜಯ್ಯ, ರೆವೆ. ರವಿಕುಮಾರ್, ರೆವೆ. ಚಿತ್ತರಸು ಇವರ ಬಗ್ಗೆ ಮಾತನಾಡಿ ಇವರ ಸಮಯದ ಶಿಸ್ತು, ಪ್ರಾರ್ಥನಾ ಜೀವಿತವನ್ನು ಪ್ರಶಂಸಿಸಿದರು. ಐ.ಇ.ಎಂ.ನ ಸೂತ್ರಗಳು ಉಪ ಸೂತ್ರಗಳನ್ನು ತಮಿಳಿಗೆ ಭಾಷಾಂತರಿಸಿದ್ದಾರೆ. ಇವರ ಮಗ ಡಾ. ಸ್ಯಾಮ್ ಡೇವಿಡ್‌ನನ್ನು ವೈದ್ಯಕೀಯ ಸುವಾರ್ತಿಕನಾಗಿ ಕಳುಹಿಸಿದ್ದಾರೆ. ವಿಲ್ಸನ್ ಸುಂದರ್ ರಾಜ್‌ರವರಿಗೆ ಐ.ಇ.ಎಂ. ಕುಟುಂಬದ ಪರವಾಗಿ ಮನಃಪೂರ್ವಕವಾಗಿ ವಂದಿಸುತ್ತೇವೆ. ಇವರಿಗಾಗಿಯೂ ಇವರ ಪತ್ನಿ ಫ್ರೀಡಾ ವಿಲ್ಸನ್ ಮತ್ತು 6 ಮಕ್ಕಳು ಇವರ ಕುಟುಂಬದವರೆಲ್ಲರಿಗಾಗಿ ಪ್ರಾರ್ಥಿಸಿರಿ.

# ಪೂರ್ವೋತ್ತರದ ಪ್ರಥಮ ಮಹಿಳಾ ಸಮ್ಮೇಳನ

2012ರ ಏಪ್ರಿಲ್ 27ರಿಂದ 29ರವರೆಗೆ

287 ಪ್ರತಿನಿಧಿಗಳು ಪೂರ್ವೋತ್ತರದ ಎಲ್ಲಾ ರಾಜ್ಯಗಳಿಂದಲೂ ಮೇಘಾಲಯದ ಸ್ಕಿಟ್ ಪ್ರೆಸ್ಬಿಟೇರಿಯನ್ ಚರ್ಚಿನವರು ಜವಾಬ್ದಾರಿಕೆ ವಹಿಸಿ ನಡೆಸಿದ ಐ.ಇ.ಎಂ.ನ ಪೂರ್ವೋತ್ತರದ ಪ್ರಥಮ ಮಹಿಳಾ ಸಮ್ಮೇಳನದಲ್ಲಿ ಭಾಗವಹಿಸಿದರು. ಮೇಘಾಲಯದ ಐ.ಇ.ಎಂ.ನ ಮಹಿಳಾ ವಿಭಾಗದವರ ಪ್ರಥಮ ಪ್ರಯತ್ನವಾಗಿತ್ತು. ಸಂದೇಶಕರು ಶ್ರೀಮತಿ ವಿಕ್ಟೋರಿಯಾ ವಿಜಯ್ ಕುಮಾರ್‌ರವರು ಸಭಾ ಸೇವೆಯ ಮಹಿಳಾ ವಿಭಾಗದ ಕಾರ್ಯದರ್ಶಿಯಾಗಿದ್ದಾರೆ.

ಭಾನುವಾರದ ಆರಾಧನೆಗೆ 5000ಕ್ಕಿಂತಲೂ ಹೆಚ್ಚುಮಂದಿ ಭಾಗವಹಿಸಿದರು. ಇದರ ಹೊರಾಂಗಣ ಪ್ರದೇಶದಲ್ಲಿ ನಡೆಸಲಾಯಿತು. ಸಂಜೆಯ ಆರಾಧನೆಯನ್ನು ಆಲಯದೊಳಗೆ ನಡೆಸಲಾಯಿತು. ಪೂರ್ವೋತ್ತರ ಭಾರತದ ಮಹಿಳೆಯರು ಈ ಸಮ್ಮೇಳನದ ಮೂಲಕ ಮುಂಬರುವ ವರ್ಷಗಳಲ್ಲಿ ಸೇವೆಯಲ್ಲಿ ಭಾಗವಹಿಸುವಂತೆ ಉತ್ತೇಜಿಸಲ್ಪಟ್ಟಿರುವ ಸ್ಕಿಟ್ ಪ್ರೆಸ್ಬಿಟೇರಿಯನ್ ಸಭಿಕರು ಈ ಸಮ್ಮೇಳನವನ್ನು ನಡೆಸಲು ಅವಕಾಸ ನೀಡಿದ್ದಕ್ಕಾಗಿ ವಂದಿಸುತ್ತೇವೆ. ಸಮ್ಮೇಳನದ ಇಡೀ ಖರ್ಚನ್ನು ಮೇಘಾಲಯದ ಮಹಿಳಾ ವಿಭಾಗದವರಿಂದ ಸಂಗ್ರಹಿಸಲಾಯಿತು.

ಯು.ಕೆ.ಯ ಐ.ಇ.ಎಂ.ನ ಗೆಳೆಯರ ಗುಂಪಿಗೆ ಅಧ್ಯಕ್ಷರಾದ ಶ್ರೀ ಜಾನ್ ಲಾಂಕೆಸ್ಟರ್‌ರವರು ಈ ಸಮ್ಮೇಳನದಲ್ಲಿ ಭಾಗವಹಿಸಿದರು.

# ದೂರದರ್ಶನವನ್ನು ಕೇಂದ್ರೀಕರಿಸಿದ್ದು

*(ರೆವೆ. ಇಮ್ಮಾನ್ಯುವೆಲ್ ಪ್ರಕಾಶ್ ಮತ್ತು ಶ್ರೀಮತಿ ಅಭ ಪ್ರಕಾಶ್‌ರವರು 1987ರಿಂದಲೂ ಐ.ಇ.ಎಂ.ನಲ್ಲಿ ನಂಬಿಗಸ್ತಿಕೆಯಿಂದ ಸೇವೆ ಮಾಡಿದರು. ಇವರು ಹಿಂದಿ ಪ್ರದೇಶದಲ್ಲಿ ಸಭೆಗಳನ್ನು ಸುವಾರ್ತಾ ಸೇವೆಯಲ್ಲಿ ಭಾಗವಹಿಸುವಂತೆ ಪ್ರಚೋದಿಸುವ ಸಾಧನಗಳಾಗಿದ್ದರು. ಇವರು ನಿವೃತ್ತರಾದ ನಂತರ ಇದೇ ಮೇನಲ್ಲಿ ನಡೆದ ಐ.ಇ.ಎಂ.ನ ಸುವಾರ್ತಿಕರ ಕುಟುಂಬ ಸಮ್ಮೇಳನದಲ್ಲಿ ಇವರನ್ನು ಸನ್ಮಾನಿಸಲಾಯಿತು. ಈ ಕೆಳಗೆ ಇವರೊಂದಿಗೆ ಫೋನಿನಲ್ಲಿ ನಡೆಸಿದ ಸಂಭಾಷಣೆಯ ಸಂಗ್ರಹವಿದೆ)*

**ಔಟ್‌ರೀಚ್:** ನೀವು ಎಲ್ಲಿ ಹೇಗೆ ಐ.ಇ.ಎಂ. ಬಗ್ಗೆ ಮೊದಲು ಕೇಳಿದಿರಿ?

**ಇಮ್ಮಾನ್ಯುವೆಲ್ ಪ್ರಕಾಶ್:** 1984ರಲ್ಲಿ ರಾಯ್‌ಪುರದಲ್ಲಿ ನಡೆದ ಐ.ಇ.ಎಂ. ಸಮ್ಮೇಳನದಲ್ಲಿ ಪ್ರಥಮಬಾರಿಗೆ ಐ.ಇ.ಎಂ. ವಿಷಯ ತಿಳಿದೆನು. ರೆವೆ. ಡಾ. ಥಿಯೋಡರ್ ವಿಲಿಯಮ್ಸ್‌ರವರು ಸಂದೇಶ ನೀಡಿದರು. ನಾನು ದಲಿರಾಜಾರಾರ್‌ನ ಕಲ್ಲಿದ್ದಲು ಗಣಿಯಲ್ಲಿ ಕೆಲಸ ಮಾಡುತ್ತಿದ್ದೆನು.

**ಔಟ್‌ರೀಚ್:** ನೀವು ಹೇಗೆ ಮತ್ತು ಯಾಕೆ ಐ.ಇ.ಎಂ.ನ ಪೂರ್ಣಾವಧಿ ಸುವಾರ್ತಿಕರಾಗಲು ತೀರ್ಮಾನಿಸಿದಿರಿ?

**ಇಮ್ಮಾನ್ಯುವೆಲ್ ಪ್ರಕಾಶ್:** ನನಗೆ ಬೇರೆ ಕೆಲಸವಿದ್ದರೂ ನನಗೆ ಸಾಧ್ಯವಾದಷ್ಟು ದೇವರ ಸೇವೆ ಮಾಡಲು ಅಪೇಕ್ಷೆಯಿದ್ದಿತು. ನನಗೆ ದೇವರು ನೀಡಿದ ಬೋಧನಾವರವನ್ನು ಐ.ಇ.ಎಂ.ನ ಸೇರುವ ಮೊದಲು ಸಭೆಗಳಲ್ಲಿ ಬೋಧಿಸುತ್ತಿದ್ದೆನು. ಆದಿವಾಸಿ ಜನರ ಪ್ರದೇಶಗಳಲ್ಲಿ ಐ.ಇ.ಎಂ.ನ ಸೇವೆಯ ಬಗ್ಗೆ ಕೇಳಿದಾಗ ನಿನಗೂ ಅದರಲ್ಲಿ ಭಾಗವಹಿಸಲು ನಿರ್ಧರಿಸಿದೆನು. 1987ರಲ್ಲಿ ಸ್ಥಳೀಯ ಕಾರ್ಯದರ್ಶಿಯಾಗಿ ಸೇರಿದೆನು. ರೆವೆ. ಜಾನಿ ದೇಸಾಯ್ ನನ್ನನ್ನು ಐ.ಇ.ಎಂ.ಗೆ ಪರಿಚಯ ಮಾಡಿಸುವುದರಲ್ಲಿ ಮುಖ್ಯ ಪಾತ್ರವಹಿಸಿದರು. ನಾವು ಅನೇಕ ಸುವಾರ್ತಾ ಕ್ಷೇತ್ರಗಳನ್ನು ಸಂದರ್ಶಿಸಿದೆವು. ವಾಸ್ತವವಾಗಿ ಗ್ರಹಾಮ್ ಸ್ಟೇನ್ಸ್ ಮತ್ತು ಅವರ ಮಕ್ಕಳನ್ನು ಸುಟ್ಟ ಅದೇ ವಾಹನದಲ್ಲಿ ಮಯೂರ್ ಭಂಜ್ ಕ್ಷೇತ್ರವನ್ನು ಸಂದರ್ಶಿಸಿದೆನು. 1988ರಲ್ಲಿ ಸುವಾರ್ತಿಕನಾಗಲು ದೇವರ ಸ್ಪಷ್ಟವಾದ ಕರೆಯುಂಟಾಯಿತು. 1998ರಲ್ಲಿ ನಾನು ಓ.ಟಿ.ಐ.ನಲ್ಲಿ ಎಂ.ಸಿ.ಸಿ. ಶಿಕ್ಷಣದಲ್ಲಿ ಭಾಗವಹಿಸಿದೆನು. ನನ್ನ ಕಂಪನಿಯವರು ನನ್ನನ್ನು ಬಿಡುಗಡೆ ಮಾಡಲು ನಿರಾಕರಿಸಿದ್ದರಿಂದ ನಾನು ಗೌರವಯುತ ಸುವಾರ್ತಿಕನಾಗಿಯೇ ಸೇವೆಯನ್ನು ಮುಂದುವರಿಸಿದೆನು. 1999ರಲ್ಲಿ ನನ್ನ ಪತ್ನಿಯೂ ಸೇರಿ ನಾವಿಬ್ಬರೂ ಪೂರ್ಣಾವಧಿಯ ಸುವಾರ್ತಿಕರಾದೆವು.



**ರೆವೆ. ಮತ್ತು ಶ್ರೀಮತಿ ಇಮ್ಮಾನ್ಯುವೆಲ್ ಪ್ರಕಾಶ್**

**ಔಟ್‌ರೀಚ್:** ಐ.ಇ.ಎಂ.ನಲ್ಲಿ ನಿಮ್ಮ ಜವಾಬ್ದಾರಿಕೆಯೇನು?

**ಇಮ್ಮಾನ್ಯುವೆಲ್ ಪ್ರಕಾಶ್:** ನಾನು ಸಭಾ ಸೇವಾ ಸುವಾರ್ತಿಕನಾಗಿದ್ದಾಗ ಸಭೆಗಳನ್ನು ಸುವಾರ್ತಾ ಸೇವೆಯಲ್ಲಿ ಭಾಗವಹಿಸುವಂತೆ ಉತ್ತೇಜಿಸುತ್ತಿದ್ದೆನು.

**ಔಟ್‌ರೀಚ್:** ಈ ಜವಾಬ್ದಾರಿಕೆಯನ್ನು ಹೇಗೆ ನಿರ್ವಹಿಸಿದಿರಿ?

**ಇಮ್ಮಾನ್ಯುವೆಲ್ ಪ್ರಕಾಶ್:** ದೇವರ ಕೃಪೆಯಿಂದ ಸಭೆಗಳಲ್ಲಿ ದೇವರ ವಾಕ್ಯ ಸಂದೇಶವನ್ನು ನೀಡುತ್ತಾ ಬೋಧಿಸುತ್ತಿದ್ದೆನು. ಅನೇಕ ಸಭೆಗಳಲ್ಲಿ ಸುವಾರ್ತಾ ಸೇವೆಯ ಬಗ್ಗೆ ಆಸಕ್ತಿಯಿದೆ. ಸುವಾರ್ತಿಕರ ಸಾಕ್ಷಿಗಳೂ ಸೇವೆಯ ವರದಿ ಅವರನ್ನು ಪ್ರಚೋದಿಸುತ್ತಿದ್ದವು. ಹಿಂದಿ ಮಾಸಿಕ ಪತ್ರಿಕೆಯ ''ಮಿಶನ್ ಸಂಪರ್ಕ'' ಎಂಬುದನ್ನು ''ಸುಸಂದೇಶ್ ಸಂಪರ್ಕ'' ಎಂಬುದಾಗಿ ಬದಲಾಯಿಸಲಾಯಿತು.

**ಔಟ್‌ರೀಚ್:** ನಿಮ್ಮ ಮುಂದಿಗೆ ಆಲೋಚನೆಯೇನು?

**ಇಮ್ಮಾನ್ಯುವೆಲ್ ಪ್ರಕಾಶ್:** ನಾನು ಸದಾ ಐ.ಇ.ಎಂ.ನ ಸೇವೆಗೆ ಸಿದ್ಧನಾಗಿದ್ದೇನೆ. ದೇವರು ನನ್ನನ್ನು ನಡೆಸಿದಂತೆ ನಾನು ಆತನ ಸೇವೆ ಮಾಡುತ್ತೇನೆ.

# ನೆನಪು ಮಾಡಿಕೊ...... ಬಲಪಡಿಸು...... ಪುನಶ್ಚೈತನ್ಯಗೊಳಿಸು


ಡಾ. ಆರ್. ಥಿಯೋಡರ್ ಶ್ರೀನಿವಾಸಗಮ್

ಇದೇ ಮೇ 20ರಂದು ಐ.ಇ.ಎಂ.ನ ಎರಡನೇ ಪ್ರಧಾನ ಕಾರ್ಯದರ್ಶಿಗಳಾದ ಡಾ. ಆರ್. ಥಿಯೋಡರ್ ಶ್ರೀನಿವಾಸಗಮ್‌ರವರು ಸುವಾರ್ತಿಕರನ್ನೂ ಬೆಂಗಲಿಗರನ್ನೂ ಐ.ಇ.ಎಂ.ನ ಪ್ರಾರಂಭ ಅದರ ಬೆಳವಣಿಗೆ ಮತ್ತು ಅದರ ಸಾಮರ್ಥ್ಯ ಮತ್ತು ದೇವರು ಮುಂದೆ ಅದಕ್ಕೆ ಏನು ಉದ್ದೇಶಿಸಿದ್ದಾನೆ ಎಂಬುದರ ಕುರಿತು ಆಲೋಚಿಸುವಂತೆ ಪ್ರಚೋದಿಸಿದರು.

**ಹಿಂದಿನದನ್ನು ನೆನಪು ಮಾಡಿಕೊಳ್ಳುವುದು**

ಡಾ. ಶ್ರೀನಿವಾಸಗಮ್‌ನವರು ಕೀರ್ತನೆ 105:5ನ್ನು ಸೂಚಿಸಿ ಪ್ರಾರಂಭಿಸಿದರು. ''ಆತನು ಮಾಡಿದ ಅದ್ಭುತ ಕೃತ್ಯ, ಆತನ ಮಹತ್ಕಾರ್ಯ, ಆತನ ಬಾಯಿಂದ ಹೊರಟ ನ್ಯಾಯ ನಿರ್ಣಯ ಇವುಗಳನ್ನು ನೆನಪು ಮಾಡಿಕೊಳ್ಳಿರಿ.'' ಇವರು 1965ರ ಜನವರಿ 15ರಂದು ಹೇಗೆ ರೆವೆ. ಡಾ. ಥಿಯೋಡರ್ ವಿಲಿಯಮ್ಸ್‌ರವರು ಐ.ಇ.ಎಂ.ನ್ನು ಸ್ಥಾಪಿಸಿದರೆಂಬುದನ್ನೂ ಹೇಗೆ ದೇವರು ಆತನ ಚಿತ್ತವನ್ನು ಅನೇಕ ನಾಯಕರ ಮೂಲಕ ಮುಂದುವರಿಸುತ್ತಾ ಬಂದಿದ್ದಾನೆಂಬುದನ್ನೂ ವಿಶದವಾಗಿ ನೆನಪು ಮಾಡಿಕೊಂಡರು. ಜನರು ಬರುವರು ಹೋಗುವರು ಆದರೆ ದೇವರ ನಿಯೋಗವು ಮುಂದುವರೆಯುವುದು: ಐ.ಇ.ಎಂ. ಯಾವಾಗಲೂ ದೇವರ ಬೆಂಬಲವನ್ನು ಭಾರತೀಯ ಸಭೆಗಳು, ಕುಟುಂಬಗಳು, ವ್ಯಕ್ತಿಗಳ ಮೂಲಕ ಹೊಂದುವುದೆಂಬುದನ್ನು ನಂಬಿತ್ತು. ಕಾಲಕ್ರಮೇಣ ಐ.ಇ.ಎಂ. ಎಲ್ಲಾ ಮುಖವಾಗಿ ಪ್ರಗತಿ ಹೊಂದಿದೆ.

- 1971ರಿಂದ ಕ್ಷೇತ್ರ ಸಮೀಕ್ಷೆಯ ಮೂಲಕ ಹೊಸ ಜನರ ಪಂಗಡಗಳನ್ನು ಗುರುತಿಸಿ ಹೊಸ ಕ್ಷೇತ್ರಗಳನ್ನು ಪ್ರಾರಂಭಿಸಲಾಯಿತು.
- 1990 ಅಂತ್ಯದಲ್ಲಿ ಮಹಿಳಾ ಸುವಾರ್ತಿಕರನ್ನು ಪರಿಗಣಿಸಿ ಅವರನ್ನು ಪುರುಷರ ಸಮಾನರೆಂದು ತೀರ್ಮಾನಿಸಿ ಸಂಬಳವನ್ನು ಕೊಡಲಾಯಿತು.
- ವೈದ್ಯಕೀಯ ಹಿತಚಿಂತನೆ, ಸಮಾಲೋಚನೆ ಮತ್ತು ಬೋಧನಾ ಸೇವೆಯ ಮೂಲಕ ಸುವಾರ್ತಿಕರಿಗೆ ಉತ್ತೇಜನ ನೀಡಲು ಪ್ರಾರಂಭಿಸಲಾಯಿತು. ರೆವೆ. ಆರ್ಥರ್ ಹೋಪ್‌ರವರು ಪ್ರಥಮ ಬೋಧನಾ ಹಿತಚಿಂತನಾ ಕಾರ್ಯದರ್ಶಿಯಾದರು.
- ನಿವೃತ್ತ ವೇತನವನ್ನು ಪ್ರಾರಂಭಿಸಲಾಯಿತು.
- 1990ರ ಸಾಲಿನಲ್ಲಿ ಐ.ಇ.ಎಂ.ನ ನಂಬಿಕೆಯ ಆಯವ್ಯಯವು 2 ಕೋಟಿಗೇರಿತು. ಈಗ ಉತ್ಸಾಹಿಗಳಾದ ಬೆಂಬಲಿಗರ ತ್ಯಾಗಪೂರ್ವಕ ಕೊಡುಗೆಯಿಂದಾಗಿ ಅದು 12 ಕೋಟಿಗೇರಿದೆ.

ಐ.ಇ.ಎಂ. ಜನರನ್ನು ಸೇವೆಗೆ ಕಳುಹಿಸುವ ದೂರದೃಷ್ಟಿಯನ್ನು ಹೊಂದಿದ್ದರಿಂದ ದೇವರು ಅವರಿಗೆ ಬೆಂಬಲ ನೀಡುವನೆಂಬ ನಂಬಿಕೆಯೂ ಜೊತೆಗೂಡಿತ್ತು. ನಾವು ಆತನ ನಿಯಮಗಳನ್ನನುಸರಿಸಿದರೆ ದೇವರು ಯಾರ ಸಾಲಗಾರನೂ ಅಲ್ಲ. ಹೀಗೆ ಭಾರತೀಯ ಸಭೆಗಳು ಸುವಾರ್ತಾ ಸೇವೆಯೆಂದರೆ ಅವು ಪರದೇಶದಿಂದ ಬರುವಂತಹದ್ದಲ್ಲ, ಆದರೆ ಅದು ಸ್ವದೇಶೀಯವೆಂದೂ ಆದ್ದರಿಂದ ಪ್ರತಿ ಸಭಿಕರ ಜವಾಬ್ದಾರಿಯೆಂದೂ ಮನಗಂಡರು.

ಒಂದು ವೇಳೆ ಸಭೆಯಾಗಲೀ ಸುವಾರ್ತಾ ಸಂಸ್ಥೆಯಾಗಲೀ ಕುಟುಂಬವಾಗಲೀ ವ್ಯಕ್ತಿಯಾಗಲೀ ಹಿಂದಿನದನ್ನು ಮರೆತು ದೇವರೇನು ಮಾಡಿದ್ದಾನೆಂಬುದನ್ನು ನೆನಪು ಮಾಡಿಕೊಳ್ಳದಿದ್ದರೆ ಅದು ದುರ್ದೈವವಾಗಿದೆ.

ಐ.ಇ.ಎಂ.ನ ಹಿಂದಿನ ಅನುಭವಗಳು ದೇವರ ಅಪಾರ ನಂಬಿಗಸ್ತಿಕೆಯನ್ನು ಪ್ರತಿಬಿಂಬಿಸುವುದು.

**ಈಗಿನದನ್ನು ಬಲಪಡಿಸುವುದು**

ಭಾರತವು ಬದಲಾಗುತ್ತಿದೆ ಮತ್ತು ಮುಂದೆಯೂ ಬದಲಾಗುತ್ತಲೇ ಇರುವುದು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಸುವಾರ್ತಾ ಸೇವಾ ಯೋಜನೆಗಳು ಮತ್ತು ಹಂಚಿಕೆಗಳನ್ನು ಬದಲಾಯಿಸುತ್ತಿರಬೇಕು ಮತ್ತು ದೇವರು ಸುವಾರ್ತಾ ಸೇವೆಯಲ್ಲಿ ಹೊಂದಿಸಿರುವ ನಿಯಮಗಳನ್ನು ಬಲಪಡಿಸುತ್ತಿರಬೇಕು.

- ಕಾರ್ಯದ ಪ್ರಗತಿಯನ್ನು ಕ್ರೋಢೀಕರಿಸಿ ಮುಂದುವರೆಸಬೇಕು.
- ಭಾರತದ ಜನಸಂಖ್ಯೆಲ್ಲಿ 50%ರಷ್ಟು 25 ವರ್ಷಕ್ಕೆ ಕೆಳಗಿನವರಿದ್ದಾರೆ. ಐ.ಇ.ಎಂ. ಆ ಜನತೆಯ ಮೇಲೆ ಪ್ರಭಾವ ಬೀರಬೇಕು.
- ಐ.ಇ.ಎಂ. ಆದಿವಾಸಿ ಪಂಗಡದವರ ಮಧ್ಯೆ ಸೇವೆಯಲ್ಲಿ ಕೇಂದ್ರೀಕರಿಸಿತ್ತು. ಈಗ ಉಚ್ಚಕಾಲದ ಮತ್ತು ಮಧ್ಯಮ ಕುಲದ ಹಿಂದೂಗಳ ಸೇವೆಗೆ ಗುರಿಯಿಡಬೇಕು.

**ಮುಂದಿನದನ್ನು ಪುನಶ್ಚೈತನ್ಯಗೊಳಿಸುವುದು**

- ನಗರದ ಸೇವೆ – ಊರುಗಳಲ್ಲಿ ಮತ್ತು ನಗರಗಳಲ್ಲಿರುವ ವಿವಿಧ ಹಿಂದೂ ಗುಂಪಿನವರ ಮಧ್ಯೆ ಸೇವೆ ಮಾಡಲು ದೀರ್ಘಾವಧಿಯ ಸಮರ್ಪಣೆಗಾಗಿ ಜನರಿಗೆ ಶಿಕ್ಷಣ ನೀಡಬೇಕು. ನಗರಗಳು ಅತಿ ವೇಗವಾಗಿ ಬೆಳೆಯುತ್ತಿವೆ. ನಾವು ಇವರಿಗೆ ಗಮನ ನೀಡದಿದ್ದರೆ ನಮ್ಮ ದೇಶವನ್ನು ಕಳೆದುಕೊಳ್ಳುತ್ತೇವೆ.
- ಮುಸಲ್ಮಾನ ಗುಂಪಿನವರು ಸುವಾರ್ತೆಗೆ ಆಸಕ್ತಿ ತೋರಿಸಲು ಅವರ ಮಧ್ಯೆ ಸೇವೆಗೆ ಸುವಾರ್ತಿಕರನ್ನು ಕಳುಹಿಸಬೇಕು.
- ವಿಶ್ವದಾದ್ಯಂತ ಪಾಲುಗಾರಿಕೆ – ಐ.ಇ.ಎಂ. ಹೊರನಾಡುಗಳಿಗೆ ಸುವಾರ್ತಿಕರನ್ನು ಕಳುಹಿಸುವುದನ್ನು ಮತ್ತೆ ಆಲೋಚಿಸಬೇಕು.
- ಹೊರನಾಡಿನ ಸುವಾರ್ತಾ ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ಪುನರಾವರ್ತಿಸಬೇಕು.

★ಐ.ಇ.ಎಂ. ಅಂತರರಾಷ್ಟ್ರೀಯ ದೃಷ್ಟಿಯಲ್ಲಿ ಒಳ್ಳೆಯ ಹೆಸರನ್ನು ಹೊಂದಿದೆ. ಐ.ಇ.ಎಂ. ವಿಶ್ವದ ಸುವಾರ್ತಾ ಸಂಸ್ಥೆಯಾಗಬೇಕು. ಜನರು ಮತ್ತು ಹಣವನ್ನು ನೀಡುವ ದೇವರು ಇದನ್ನು ಸಹ ಕಾರ್ಯಗತ ಮಾಡುವನು.

– **ಶ್ರೀ ಲೂಕ್ ವಿನೋದ್ ಟೈಟಸ್**ನಿಂದ ಸಂಗ್ರಹಿಸಿದ್ದು. ಹಿಮಾಚಲ್ ಪ್ರದೇಶದ ಲಾಹುಲಿ ಜನರ ಮಧ್ಯೆ ಸುವಾರ್ತಿಕ

ಹಿಂಸೆ

# ಇಲ್ಲಿಂದ ತೊಲಗಿರಿ

''ಆದರೂ ಕರ್ತನೇ ನೀನು ನನ್ನನ್ನು ಕಾಯುವ ಗುರಾಣಿ..'' ಕೀರ್ತನೆ – 3:3ಕ್ಷೇತ್ರ: ಉದಂಪುರ್ – ಅಡಿಲಾಬಾದ್ ಜಿಲ್ಲೆ – ಆಂಧ್ರ ಪ್ರದೇಶ

1998ರಲ್ಲಿ ನಮ್ಮ ಸುವಾರ್ತಿಕ ಸುಧೀರ್ ನಾಯಕ್ ಇಲ್ಲಿನ ಲಂಬಾಡ ಜನರ ಮಧ್ಯೆ ಸೇವೆಯನ್ನು ಪ್ರಾರಂಭಿಸಿದನು. ಪ್ರಾರಂಭದಲ್ಲಿ ಸೇವೆಯು ಸುಗಮವಾಗಿ ನಡೆದುಬಂದು ಕುಟುಂಬದವರು ಕ್ರಮವಾಗಿ ಆರಾಧನೆಗೆ ಬರುತ್ತಿದ್ದರು. ಸುಧೀರ್ ಪ್ರಾರ್ಥನಾ ಪೂರ್ವಕವಾಗಿ ಸುತ್ತಲಿನ ಹಳ್ಳಿಗಳಲ್ಲಿಯೂ ಸೇವೆ ಮಾಡಲು ಪ್ರಯತ್ನಿಸುತ್ತಿದ್ದನು. ದೇವರ ಸಹಾಯದಿಂದ ಒಂದು ವರ್ಷದಲ್ಲಿ 10 ಕುಟುಂಬಗಳು ಕರ್ತನಲ್ಲಿ ನಂಬಿಕೆಯಿಟ್ಟರು. ಸೈತಾನನಿಗೆ ಇದು ಸಹನೆಯಾಗಲಿಲ್ಲ. 1999ರ ಮಾರ್ಚ್ 2ರಂದು 60 ಕ್ರಿಸ್ತ ವಿರೋಧಿಗಳು ಉದಪುರದಲ್ಲಿ ಬಂದು ಕ್ರೈಸ್ತರ ಬಗ್ಗೆ ವಿಚಾರಿಸಿದರು. ಭಾನುವಾರವಾಗಿದ್ದು ಆರಾಧನೆಯು ನಡೆಯುತ್ತಿತ್ತು. ಅವರು ಸುಧೀರ್‌ನನ್ನು ಬೈಯ್ಯಲು ಪ್ರಾರಂಭಿಸಿದರು. ಅಷ್ಟರಲ್ಲಿ ವಿಶ್ವಾಸಿಗಳೆಲ್ಲರೂ ಹೋಗಿ ಸುಧೀರ್ ಒಬ್ಬನೇ ಉಳಿದಿದ್ದನು. ಅವನ ಶರ್ಟನ್ನು ಹಿಡಿದು ಬೀದಿಗೆಳೆದು ಬೈಯುತ್ತಾ ಹೊಡೆದರು. ಅವನಿಗೆ ''ನಿನ್ನ ಸ್ಥಳಕ್ಕೆ ಹಿಂತಿರುಗಿ ಹೋಗು ನಮ್ಮ ಎಚ್ಚರಿಕೆಗೆ ಕಿವಿಗೊಡದಿದ್ದರೆ ನಾವು ನಿನ್ನನ್ನು ಕೊಲ್ಲುತ್ತೇವೆ' ಎಂದು ಹೆದರಿಸಿದರು. ಇದೇ ರೀತಿ ಎರಡು ಭಾನುವಾರಗಳು ಹೆದರಿಸಿದರು. ಕೊನೆಗೆ 1999ರ ಮಾರ್ಚ್ 28ರೊಳಗೆ ಅಲ್ಲಿಂದ ಹೋಗಲೇಬೇಕೆಂದು ಅಂತಿಮ ಎಚ್ಚರಿಕೆ ನೀಡಿದಾಗ ಸುಧೀರ್ ಹಳ್ಳಿಯನ್ನು ಬಿಟ್ಟು ಒಬ್ಬ ವಿಶ್ವಾಸಿಯ ಮನೆಯಲ್ಲಿ ಇಡೀ ದಿನವನ್ನು ಕಳೆದು ಸಂಜೆ ತನ್ನ ಮನೆಗೆ ಹಿಂತಿರುಗಿದನು. ಅಡಿಗೆ ಮಾಡಿ ರೇಡಿಯೋನಲ್ಲಿ ವಾರ್ತೆ ಕೇಳುತ್ತಿದ್ದನು. ಇದ್ದಕ್ಕಿದ್ದಂತೆ ಕೋಪದಲ್ಲಿ ಕೂಗಿದ್ದು ಮತ್ತು ಒಂದು ಲಾರಿ ವೇಗವಾಗಿ ತನ್ನ ಮನೆಯ ಕಡೆ ಬರುತ್ತಿದ್ದುದನ್ನು ಕಂಡು ಎಲ್ಲವನ್ನು ಬಿಟ್ಟು ಕಾಡಿನೊಳಗೆ ಓಡಿ ಹೋದನು. ವಿರೋಧಿಗಳು ಅವನಿಗಾಗಿ ಎಲ್ಲಾ ಕಡೆಗಳಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ರಾತ್ರಿ 11 ಘಂಟೆಗೆ ತನ್ನ ಮನೆಗೆ ಬಹುಭೀತಿಯಿಂದಲೇ ಹಿಂತಿರುಗಿದನು. ''ಕರ್ತನೇ ನನ್ನ ಜೀವಿತದಲ್ಲಿ ನಿನ್ನ ಚಿತ್ತವೇ ನೆರವೇರಲಿ'' ಎಂದು ಪ್ರಾರ್ಥಿಸಿದನು.

ಎರಡು ವಾರಗಳ ನಂತರ ಕ್ರಿಸ್ತ ವಿರೋಧಿಗಳು ಸರ್ಕಾರಿ ನೌಕರರನ್ನು ಆ ಪ್ರದೇಶದಲ್ಲಿ ಕ್ರೈಸ್ತ ಜನಸಂಖ್ಯೆಯನ್ನು ತೆಗೆದುಕೊಳ್ಳಲು ಕಳುಹಿಸಿದರು. ಸುಧೀರ್ ಅವರಿಗೆ ಇಲ್ಲಿ 10 ಕುಟುಂಬಗಳಿರುವುದಾಗಿ ಹೇಳಿದನು. ಆ ಸರ್ಕಾರಿ ನೌಕರರು ಆ ಕುಟುಂಬಗಳ ಜನರಿಗೆ ಕೊಡುತ್ತಿದ್ದ ಎಲ್ಲಾ ಸೌಲಭ್ಯಗಳನ್ನು ನಿಲ್ಲಿಸಿದರು. ಆದರೆ ದೇವರಿಗೆ ಸ್ತೋತ್ರವಾಗಲಿ. ವಿಶ್ವಾಸಿಗಳು ನಂಬಿಕೆಯಲ್ಲಿ ದೃಢವಾಗಿದ್ದರು. ''ದೇವರು ನನ್ನನ್ನೂ ಎಲ್ಲಾ ವಿಶ್ವಾಸಿಗಳನ್ನೂ ಈ ಶೋಧನೆಗಳಲ್ಲಿ ಹೇರಳವಾಗಿ ಆಶೀರ್ವದಿಸಿದ್ದಾನೆ. ಎಂತಹ ಅಪಾಯಕಾರಿ ಗಂಡಾಂತರ ಬಂದರೂ ದೇವರು ತನ್ನ ಮಕ್ಕಳನ್ನು ಕಾಪಾಡುತ್ತಾನೆ ಮತ್ತು ಇಕ್ಕಟ್ಟಿನಲ್ಲಿ ಆತನೇ ನಮ್ಮ ಸಹಾಯಕನು'' ಎಂಬುದನ್ನು ತಿಳಿದವು ಎಂದು ಸುಧೀರ್ ಹೇಳುತ್ತಾನೆ.

ಐ.ಇ.ಎಂ. ಸುವಾರ್ತಿಕರ ಕುಟುಂಬಗಳು
ಸಮ್ಮೇಳನ – 2012ರ ಮೇ 20–23ರವರೆಗೆ
ಪರಮನ್‌ಕೆನಿ – ಚೆನ್ನೈ

# ಮತ್ತೆ ಒಂದುಗೂಡುವುದು!

ನಾಲ್ಕು ವರ್ಷಗಳ ನಂತರ ಐ.ಇ.ಎಂ. ಸುವಾರ್ತಿಕರು, ಸುವಾರ್ತಾ ಸೇವಾ ಸಹ ನಿರ್ದೇಶಕರು, ಸದಸ್ಯರು, ಬೆಂಬಲ ಸಿಬ್ಬಂದಿಯವರು, ಕಛೇರಿ ಸಿಬ್ಬಂದಿಯವರು ಮತ್ತು ಅವರ ಮಕ್ಕಳೆಲ್ಲರೂ ಟಿ.ಡಬ್ಲ್ಯೂ.ಆರ್.–ಎಲ್.ಟಿ.ಸಿ. ಪರಮನ್‌ಕೆನಿಯಲ್ಲಿ ಕೂಡಿಬಂದರು. ಇದು ಪುನರ್ ಉಲ್ಲಾಸ, ಪುನಶ್ಚೈತನ್ಯ ಮತ್ತು ಪುನಃಶಕ್ತಿಯ ಸಮಯವಾಗಿತ್ತು.


ಸುಸ್ವಾಗತ

ಎಫಿಕಾರಿನ ಹಿಂದೆ ರಾಷ್ಟ್ರೀಯ ನಿರ್ದೇಶಕರಾಗಿದ್ದ ಸ್ರೀ ಸಿ.ಬಿ. ಸಾಮ್ಯುವೆಲ್‌ರವರು ಬೆಳಗಿನ ಸತ್ಯವೇದಾಧ್ಯಯನವನ್ನು ನಡೆಸಿದರು. ಸಂಜೆಗಳೂ ಸೇಂಟ್ ಥಾಮಸ್ ಇವ್ಯಾಂಜಿಲಿಕೆಲ್ ಚರ್ಚಿನ ಬಿಷೋಪರಾದ ರೆವೆ. ಸಿ.ವಿ. ಮಾಥ್ಯೂರವರು ಉತ್ತೇಜನರ ವಾಕ್ಯ ಸಂದೇಶವನ್ನು ನೀಡಿದರು. ಮೊದಲನೇ ದಿನ ''ಜಮಕರನ್'' (ಕಾವಲುಗಾರ) ಎಂಬ ಮಾಸಿಕ ಪತ್ರಿಕೆಯನ್ನು ತಮಿಳು ಮತ್ತು ಮಲೆಯಾಳಂನಲ್ಲಿ ಪ್ರಕಟಿಸುವ ಡಾ. ಪುಷ್ಪರಾಜ್‌ರವರು ಹೃದಯಂಗಮವಾಗಿ ಸೇವೆಯಲ್ಲಿ ನಂಬಿಗಸ್ತಿಕೆ ಮತ್ತು ಪ್ರಾಮಾಣಿಕತೆಯಿರಬೇಕೆಂದು ವಿನಂತಿಸಿಕೊಂಡರು. ಬೆಳಗಿನ ಸಮಯ ಕೂಟಗಳಲ್ಲಿ ''ಯೇಸುವಿನಂತೆ ಇರುವುದು'' ಎಂದರೇನು ಎಂಬುದನ್ನು ತಿಳಿಯಲು ಪ್ರಯತ್ನಿಸಿದೆವು. ಇದನ್ನು ಐ.ಇ.ಎಂ.ನ ''ಕೋರ್ ಕಮಿಟಿ ಚೇರ್‌ಮನ್'' ಆದ ರೆವೆ. ರಾಬಿನ್ ಪಾಲ್‌ರವರು ನಡೆಸಿದರು. ಕೊನೆಯ ದಿನದಂದು ಈ ಕೂಟವು ಒಬ್ಬರ ಪಾದವನ್ನು ಇನ್ನೊಬ್ಬರು ತೊಳೆಯುವ ಕಾರ್ಯದಲ್ಲಿ ಕೊನೆಗೊಂಡಿತು.

ಕುಟುಂಬದ ಗೋಷ್ಠಿಯನ್ನು ಡಾ. ಪಿ.ಸಿ. ಮಾಥ್ಯೂ ಮತ್ತು ಸಿ.ಬಿ.ಯವರು ನಡೆಸಿದರು. ಇವರು ಸುವಾರ್ತಿಕರು ಪರಸ್ಪರವಾಗಿ ಮತ್ತು ತಮ್ಮ ಮಕ್ಕಳೊಂದಿಗೆ ಸಂಬಂಧವನ್ನು ಸಂರಕ್ಷಿಸಿಕೊಳ್ಳಬೇಕೆಂಬುದನ್ನು ಸ್ಪಷ್ಟಪಡಿಸಿದರು. ಐ.ಎಂ.ಏ.ನ ಪ್ರಧಾನ ಕಾರ್ಯದರ್ಶಿಯವರಾದ ರೆವೆ. ಸುಸಾಂತ ಪತ್ರರವರೊಡನೆ ನಡೆಸಿದ ಅರ್ಧರಾತ್ರಿಯ ಪ್ರಾರ್ಥನಾ ಕೂಟದಲ್ಲಿ ಕರ್ತನು ನಮ್ಮೆಲ್ಲರನ್ನು ಬಲಪಡಿಸಿದನು. ರೆವೆ. ಸುಸಾಂತರವರು ಭಾರತದಲ್ಲಿನ ಅಗತ್ಯತೆಗಳನ್ನು ತೋರ್ಪಡಿಸಿ ಎಲ್ಲರಿಗೂ ಸುವಾರ್ತೆಯನ್ನು ಪ್ರಚಾರ ಮಾಡುವ ಹೊಸ ವಿಧಾನಗಳನ್ನು ಕಂಡುಕೊಳ್ಳುವಂತೆ ಉತ್ತೇಜಿಸಿದರು. ಡೆಹ್ರಾಡನ್‌ನ ಗ್ರೇಸ್ ಅಕಾಡೆಮಿಯ ಶ್ರೀ ಬೆಂಜಮಿನ್ ಕರ್ತನ ಭಯದಲ್ಲಿ ಮಕ್ಕಳನ್ನು ಪೋಷಿಸುವುದರ ಪ್ರಾಮುಖ್ಯತೆಯ ಬಗ್ಗೆ ಮಾತನಾಡಿದರು. ಇವರು ಗ್ರೇಸ್ ಅಕಾಡೆಮಿಯಲ್ಲಿ ಆತ್ಮೀಕ ಬೆಳವಣಿಗೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದರಿಂದ ಸುವಾರ್ತಿಕರು ಮಕ್ಕಳನ್ನು ಇದರಲ್ಲಿ ಸೇರಿಸುವಂತೆ ಕರೆ ನೀಡಿದರು. ಟಿ.ಡಬ್ಲ್ಯೂ.ಆರ್.ನ ಸಿ.ಇ.ಜಿ. ಶ್ರೀ ಜಾರ್ಜ್ ಫಿಲಿಪ್‌ರವರೂ ಸಹ ಮಾತನಾಡಿದರು. ''ಲಾಸ್ಟ್ ಕಮಾಂಡ್ ಇನಿಶಿಯೇಟಿವ್''ನ ಶ್ರೀ ಕೆನ್ ಪ್ರೆಟ್ಸೊಲ್‌ರವರು ಭಾಗವಹಿಸಿದರು.


ಕ್ಯಾಪ್ಟಿನ್ ಕನ್ನಡ ಮತ್ತು ಸ್ವಯಂ ಸೇವಕರೊಂದಿಗೆ

ಕ್ಯಾಪ್ಟನ್ ಕೆನ್ನಡಿ ಇವರು ಎಲ್ಲಾ ಸಮುದಾಯದಲ್ಲಿ ಎಲ್ಲೆಲ್ಲೂ ಇದ್ದಂತೆ ಕಾಣುತ್ತಿತ್ತು. ಮುಖ್ಯ ಸಹನಿರ್ದೇಶಕರಾಗಿ ಇವರು ಪ್ರತಿದಿನದ ಸಮ್ಮೇಳನದ ಎಲ್ಲಾ ಸಿದ್ಧತೆಯ ನಿರ್ವಹಣೆಯನ್ನು ಮಾಡುತ್ತಾ ತನ್ನ ಸ್ವಯಂ ಸೇವಕ ತಂಡದವರನ್ನು ''ಕ್ರಿಸ್ತನ ಸ್ವಯಂ ಸೇವಕರು'' ಎಂದು ಕರೆದಿದ್ದರು. ಒಳ್ಳೆಯ ಕ್ಯಾಪ್ಟನ್ ದಕ್ಷತೆಯಿಂದ ಮಾರ್ಗವನ್ನು ಹಿಡಿದು ತನ್ನ ಹಡಗನ್ನು ಅಶಾಂತ ಸಾಗರದಲ್ಲಿ ಸುಲಲಿತ ದಡ ತಲುಪಿಸಿದರು. ಕ್ಯಾಪ್ಟನ್, ನಿಮಗೆ ವಂದನೆಗಳು.

**ಕ್ರಿಸ್ತನ ಸ್ವಯಂ ಸೇವಕರು:** ಕ್ರಿಸ್ತನ ಸ್ವಯಂ ಸೇವಕರೂ ಅವಿಶ್ರಾಂತವಾಗಿ ದುಡಿದಿದ್ದಲ್ಲದೆ ಸುವಾರ್ತಾ ಸೇವೆಯ ಬಗ್ಗೆ ಹೆಚ್ಚಿನ ವಿವರಗಳನ್ನು ಸಂದೇಶಗಳಿಂದ ಸುವಾರ್ತಿಕರ ವರದಿಗಳಿಂದ ಆದಷ್ಟು ಕಲಿತಿದ್ದಾರೆ.

''ಯೇಸುವಿಗಾಗಿ ಓಡಲು ಇದೇ ಸಮಯ'' ಎಂದು ಕೆ.ಜಿ.ಎಫ್.ನ ಪ್ರವೀಣ್ ಹೇಳಿದ್ದಾನೆ.

**ಆರೋಗ್ಯದ ಮೂಲ ಪರೀಕ್ಷೆ:** ಕುಟುಂಬದ ಸಮ್ಮೇಳನದ ಸಮಯದಲ್ಲಿ ಇದು ಹೊಸದಾಗಿ ಪ್ರಾರಂಭವಾಗಿತ್ತು. ಅನುಭವಿಗಳಾದ ವೈದ್ಯರು ವಿವಿಧ ಸ್ಥಳಗಳಿಂದ ತಮ್ಮ ಗಡಿಬಿಡಿಯ ಕೆಲಸ ಕಾರ್ಯಗಳನ್ನು ಬಿಟ್ಟು ಗಂಟೆಗಟ್ಟಲೆ ಸುವಾರ್ತಿಕರೊಂದಿಗೆ ಅವರ ಆರೋಗ್ಯದ ಬಗ್ಗೆ ವಿಚಾರಿಸಿದರು. ರಾತ್ರಿ ಸಮಯದಲ್ಲಿ ಏನಾದರೂ ತುರ್ತು ಅಗತ್ಯತೆ ಬಂದಲ್ಲಿ ತಕ್ಷಣವೇ ನೆರವು ನೀಡಿದರು. ನಮ್ಮ ಸುವಾರ್ತಿಕರು ತಾವಿರುವ ಸ್ಥಳದಲ್ಲಿನ ವೈದ್ಯರಿಂದ ಸಾಕಷ್ಟು ಸಹಾಯ ಹೊಂದದಿದ್ದವರು ಇಲ್ಲಿ ಸಮರ್ಪಿತ ವೈದ್ಯ ತಂಡದವರೊಂದಿಗೆ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡು ಸೂಕ್ತವಾದ ಸಲಹೆಗಳನ್ನು ಪಡೆದರು. ವೈದ್ಯಕೀಯ ತಂಡದವರಲ್ಲಿ ಡಾ. ಸ್ಯಾಮ್ ಡೇವಿಡ್, ಡಾ. ನರಸಿಂಹರಾವ್, ಡಾ. ಪೆತುರು, ಡಾ. ಶಾಜಿನ್, ಡಾ. ಎಲಿಜಬೆತ್ ಪ್ರಿನ್ಸ್, ಡಾ. ಜೆನ್ನಿಫಿನ್, ಡಾ. ಶಾರಾ ಸ್ಟೀಫನ್ ಇವರೊಂದಿಗೆ ಇತರ ವೈದ್ಯಕೀಯ ಸಿಬ್ಬಂದಿಯವರಲ್ಲಿ ಕು. ಅಜಿ, ಶ್ರೀ ಶೇಖರ್, ಶ್ರೀ ರವಿ, ಕು. ಗ್ರಾನಾ ಮತ್ತು ಶ್ರೀ ಅರುಣ್ ಇವರೊಂದಿಗೆ ನಮ್ಮ ಸುವಾರ್ತಿಕರೂ ಉತ್ತಮ ಸೇವೆ ಮಾಡಿದರು. ಡಾ. ಥೈಯಾನ ಶ್ರೀನಿವಾಸಗಮ್, ಶ್ರೀಮತಿ ತಂಗಮ್ ಸಾಲೋಮನ್, ಶ್ರೀಮತಿ ಎಸ್ತರ್ ಐಸಾಕ್ ಮತ್ತಿತರರೂ ಶ್ರಮಿಸಿದರು.


ಡಾ. ಸ್ಯಾಮ್ ಡೇವಿಡ್ ಶ್ರೀಮತಿ ತಂಗಮ್ ಸಾಲೋಮನ್ ನೊಂದಿಗೆ

**ಗುಂಪಿನ ಪ್ರಯತ್ನ:** ವಿವಿಧ ಸುವಾರ್ತಿಕರ ತಂಡದವರು ಅನೇಕ ತಿಂಗಳವರೆಗೂ ಈ ಸಮ್ಮೇಳನದ ಮೊದಲು ಹೆಚ್ಚಿನ ಶ್ರಮವಹಿಸಿದರು. ಈ ಗುಂಪಿನ ಪ್ರತಿಯೊಬ್ಬರ ಅತ್ಯುತ್ತಮವಾದ ಪ್ರಯತ್ನಕ್ಕೆ ವಂದಿಸುತ್ತೇವೆ. ಕಾರ್ಯಗಾರಿ ಸಮಿತಿಯಲ್ಲಿ ರೆವೆ. ಜಾನ್‌ವೆಸ್ಲಿ, ರೆವೆ. ಜೋನತಾನ್ ಚವಾನ್, ಶ್ರೀ ಸಾಲೋಮನ್ ಸ್ವಾಮಿದಾಸ್, ರೆವೆ. ಇ.ಡಿ. ರಾಜಾಸಿಂಗ್ ನಾಯಕತ್ವ ವಹಿಸಿದ್ದರು. ಇವರೆಲ್ಲರೂ ಒಂದುಗೂಡಿದ ಕೆಲಸವು ಸಫಲವಾಯಿತು.

**ಐ.ಇ.ಎಂ. ಅಂಗಡಿ** ಅಂಬತ್ತೂರಿನ ಒಂದು ಗುಂಪು ಸ್ಥಳೀಯ ಕಾರ್ಯದರ್ಶಿಗಳು ತಿಂಡಿತಿನಿಸುಗಳು ತಂಪು ಪಾನೀಯ ಮತ್ತಿತರ ಸಾಮಾನುಗಳ ಒಂದು ಅಂಗಡಿಯನ್ನಿಟ್ಟಿದ್ದು ಬಹು ಅನುಕೂಲವಾಯಿತು. ಭೋಜನ ಬೆಂಗಳೂರಿನ ಯುನೈಟೆಡ್ ಕ್ಯಾಟರರ್ಸ್‌ರವರ ತಂಡದವರು ಶ್ರೀ ಮನೋಹರ್‌ರವರ ಮೇಲ್ವಿಚಾರಿಕೆಯಲ್ಲಿ ತಾಳ್ಮೆಯಿಂದ ಸಮಯಕ್ಕೆ ಸರಿಯಾಗಿ ಆಹಾರವನ್ನು ಒದಗಿಸಿದರು. ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

**ಟಿ.ಡಬ್ಲ್ಯೂ.ಆರ್.ಗೆ ನಮ್ಮ ವಂದನೆಗಳು** ಟಿ.ಡಬ್ಲ್ಯೂ.ಆರ್.-ಎಲ್.ಟಿ.ಸಿ.ಯ ಶ್ರೀ ಸ್ಟಾನ್ಲಿ ಮತ್ತು ತಂಡದವರ ಅತಿಥಿ ಸತ್ಕಾರ ಹಾಗೂ ಪ್ರೀತಿಯ ಸಹಕಾರಕ್ಕಾಗಿ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

---

ವರದಿ – ತಮಿಳುನಾಡಿನ 36ನೇ ರಾಜ್ಯ ಸಮ್ಮೇಳನ

# ಹೆಚ್ಚಿನ ಪರಿಣಾಮ


ಡಾ. ಪುಷ್ಪರಾಜ್

ಪ್ರಥಮ ಬಾರಿಗೆ ತಮಿಳುನಾಡಿನ ರಾಜ್ಯ ಸಮ್ಮೇಳನದೊಂದಿಗೆ ಸುವಾರ್ತಿಕರ ಕುಟುಂಬ ಸಮ್ಮೇಳನವನ್ನು ಒಂದುಗೂಡಿಸಲಾಗಿತ್ತು. ಟಿ.ಡಬ್ಲ್ಯೂ.ಆರ್.-ಎಲ್.ಟಿ.ಸಿ. ಆವರಣದಲ್ಲಿ ಏರ್ಪಡಿಸಲಾಯಿತು. ವರ್ಷದ ಮೊದಲಲ್ಲೇ ಸಿದ್ಧತೆಗಳನ್ನು ಪ್ರಾರಂಭಿಸಲಾಯಿತು. ನಮ್ಮ ಬೆಂಬಲಿಗರು, ಸ್ಥಳೀಯ ಕಾರ್ಯದರ್ಶಿಗಳೆಲ್ಲರಿಗೂ ಮಾಸಿಕ ಪತ್ರಿಕೆ ಹಾಗೂ ಕರಪತ್ರಗಳ ಮೂಲಕ ತಿಳಿಸಲಾಯಿತು. ಜವಾಬ್ದಾರಿಕೆಗಳನ್ನು ವಹಿಸಿದ್ದಲ್ಲದೆ ಆಗಾಗ್ಗೆ ಸಮ್ಮೇಳನವು ನಡೆಯುವ ಸ್ಥಳಕ್ಕೆ ಭೇಟಿಕೊಡಲಾಯಿತು. ಅಂತೂ ಕೊನೆಗೆ ಜನರು ಸುರಕ್ಷಿತವಾಗಿ ಇಲ್ಲಿಗೆ ಬಂದು ಸೇರಿದರು. ಸೇಲಮ್‌ನ ಡಾ. ಪುಷ್ಪರಾಜ್, ರೆವೆ. ಜಾನ್‌ವೆಸ್ಲಿ, ಶ್ರೀಮತಿ ಸಲೋಮಿ ಜಾನ್‌ರೋಸ್, ಶ್ರೀ ಜೆನ್ನಿ ಕ್ರಿಸ್ಟೋಫರ್ ಮತ್ತು ಶ್ರೀ/ಶ್ರೀಮತಿ ಫೀಟರ್ ಕುಮಾರ್‌ರವರು ಬೇರೆ ಬೇರೆ ಕೂಟಗಳಲ್ಲಿ ದೇವರ ವಾಕ್ಯಸಂದೇಶಗಳನ್ನು ನೀಡಿದರು. ಕ್ಷೇತ್ರ ಸುವಾರ್ತಿಕರು ಅವರ ಸೇವೆಯ ಅನುಭವಗಳನ್ನು ಹಂಚಿಕೊಂಡಿದ್ದು ಭಾಗವಹಿಸಿದವರ ಮೇಲೆ ಹೆಚ್ಚಿನ ಪರಿಣಾಮ ಬೀರಿತು. ಸುವಾರ್ತಾ ಕ್ಷೇತ್ರಗಳ ಪ್ರದರ್ಶನವು ಹೆಚ್ಚು ವಿವರಣೆಗಳನ್ನು ನೀಡಿತು. ಇದೇ ಮೇ 20ರಂದು ತಮಿಳುನಾಡಿನ ಬೆಂಬಲಿಗರು ಮತ್ತು ಸ್ಥಳೀಯ ಕಾರ್ಯದರ್ಶಿಗಳು ಸುವಾರ್ತಿಕರ ಕುಟುಂಬದ 10ನೇ ಸಮ್ಮೇಳನವನ್ನು ಉದ್ಘಾಟಿಸಲಾಯಿತು. ಇದೊಂದು ಚಿರಸ್ಮರಣೀಯ ಅನುಭವವಾಗಿತ್ತು. ನಾವೆಲ್ಲರೂ ಅನ್ಯೋನ್ಯತೆಯಲ್ಲಿ ಆನಂದಿಸಿದೆವು. ಬೇರೆ ಬೇರೆ ಸ್ಥಳಗಳಿಂದ ಸ್ವಯಂ ಸೇವಕರನ್ನು ಆಹ್ವಾನಿಸಿದ್ದು ಇದೇ ಮೊದಲು. ಭಾಗವಹಿಸಿದವರು 23 ಪ್ರಾರ್ಥನಾ ಗುಂಪುಗಳನ್ನು ಪ್ರಾರಂಭಿಸಲು ನಿರ್ಧರಿಸಿದರು. ದೇವರಿಗೆ ಸ್ತೋತ್ರವಾಗಲಿ.

ರೆವೆ. ವಿ.ಇ. ರವಿಕುಮಾರ್, ರಾಜ್ಯಕಾರ್ಯದರ್ಶಿ ತಮಿಳುನಾಡು (ಉತ್ತರ)

ಕೀರ್ತನಾ ಗ್ರಂಥದ ಸತ್ಯವೇದಾಧ್ಯಯನ - ರೆವೆ. ಡಾ. ಥಿಯೋಡರ್ ವಿಲಿಯಮ್ಸ್‌ರವರಿಂದ

(ಇವರ "ಸಜೀವ ದೇವರು" ಎಂಬ ಪುಸ್ತಕದಿಂದ ತೆಗೆದುಕೊಂಡಿದ್ದು)



## ಕೀರ್ತನೆ 1 - ಧನ್ಯತೆಯ ಮಾರ್ಗ

**1. ಧನ್ಯತೆಯ ನಿಯಮಗಳು 1:1-2**

1 ಒಬ್ಬನು ಧನ್ಯನಾಗಲು ಅಪೇಕ್ಷಿಸಿದರೆ ದುಷ್ಟರ ಮಾರ್ಗದಿಂದ ದೂರವಿರಬೇಕು.

(ಅ) ಇಲ್ಲಿ "ಆಲೋಚನೆ" "ಮಾರ್ಗ" ಮತ್ತು "ಕೂತುಕೊಳ್ಳುವುದು" ಈ ಪದಗಳನ್ನು ಗಮನಿಸಿರಿ. ಇವು ಕೆಳಮಟ್ಟದ ಹಾದಿಯನ್ನು ಸೂಚಿಸುವುದು.

(ಆ) ಎರಡನೆಯದಾಗಿ "ಪಾಪಾತ್ಮರ ಮಾರ್ಗದಲ್ಲಿ" ಎಂಬುದನ್ನು ಗಮನಿಸಿರಿ. ಧನ್ಯತೆಯನ್ನು ಬಯಸುವವನು, ಪಾಪಾತ್ಮರ ಮಾರ್ಗವನ್ನು ಒಪ್ಪಿಕೊಳ್ಳುವುದಿಲ್ಲ.

(ಇ) ಮೂರನೆಯದಾಗಿ "ಧರ್ಮನಿಂದಕರೊಡನೆ ಕುಳಿತುಕೊಳ್ಳುವುದು" ಎಂಬ ಮಾತುಗಳನ್ನು ಗಮನಿಸಿರಿ. ಧರ್ಮ ನಿಂದಕರು ದೇವರನ್ನು ಬಹಿರಂಗವಾಗಿ ನಿಂದಿಸುವವರಾಗಿದ್ದಾರೆ.

**ಇದಕ್ಕೆ ವಿರುದ್ಧವಾಗಿ**

(ಅ) ಅವನು ಕರ್ತನನ್ನು ಅಂಗೀಕರಿಸುತ್ತಾನೆ (ವ.2) ಕರ್ತನನ್ನು ಅಂಗೀಕರಿಸಿ ಅವನು ಆನಂದಪಡುತ್ತಾನೆ.

(ಆ) ಅವನು ಕರ್ತನ ಆಜ್ಞೆಯನ್ನು ಸ್ವೀಕರಿಸುತ್ತಾನೆ (ವ.2) ಕರ್ತನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಹಗಲಿರುಳು ಅದನ್ನೇ ಧ್ಯಾನಿಸುತ್ತಾನೆ.




**2. ಧನ್ಯತೆಯ ಪಥ 1:3**

(ಅ) ಧನ್ಯನಾದವನು ಆಳವಾಗಿ ಬೇರೂರಿದ ಮರದಂತೆ ದೃಢವಾಗಿರುವನು.

(ಆ) ಅವನಿಗೆ ಸಮೃದ್ಧಿ ನೀರಿನ ಒದಗಿಸುವಿಕೆಯಿರುವುದು.

(ಇ) ಅವನು ಫಲಭರಿತ ಕೊಂಬೆಯಂತಿರುವನು.

(ಈ) ಅವನಿಗೆ ಹೊಂದಾಣಿಕೆಯ ಕ್ರೈಸ್ತನ ನಂಬಿಗಸ್ತಿಕೆಯಿರುವುದು.

**3. ಪಾಪಾತ್ಮರ ಶಾಪ 1:4-5**

(ಅ) ಪ್ರತಿಕಾಲದ ಗಾಳಿ ಬೀಸುವಾಗ ಅವರಲ್ಲಿ ಯಾವ ತಿರುಳೂ ಇಲ್ಲದೆ ಗಾಳಿ ಹೊಡಕೊಂಡು ಹೋಗುವ ಹೊಟ್ಟಿನಂತಿರುವರು.

(ಆ) ನ್ಯಾಯ ವಿಚಾರಣೆಯಲ್ಲಿ ಅವರಿಗೆ ಯಾವ ಕಾರಣವೂ ಇರುವುದಿಲ್ಲ.

**4. ನೀತಿವಂತರ ಭರವಸೆ 1:6**

ದೇವ ಭಕ್ತನ ಭರವಸೆಯು ತನ್ನಲ್ಲಿಲ್ಲ, ದೇವರಲ್ಲಿಯೇ. ಇಡೀ ಕೀರ್ತನಾ ಗ್ರಂಥದ ಸತ್ಯವೇದಾಧ್ಯಯನದ ಪುಸ್ತಕವು 250/- ರೂ.ಗಳು ಒಟ್ಟಾಗಿ ತೆಗೆದುಕೊಂಡರೆ ರಿಯಾಯಿತಿ ಇರುವುದು. ಬೈಬಲ್ ಕಾಲೇಜುಗಳು ಸಭೆಯವರು ತಮ್ಮ ವಾಚನಾಲಯಗಳಿಗಾಗಿ ಪ್ರತಿಗಳನ್ನು ಕೇಳಿಕೊಳ್ಳಬಹುದು. **ವ್ಯವಹರಿಸುವ ವಿಳಾಸ:** 38 Langford Road,Bangalore 560 025, Karnataka
Mob: 09972525391, Email: tialchsa@gmail.com

**Relive the Experience**, The national Convention at Kerala, The IEM Missionaries' Family Conference, Chennai, If you've missed the occasion, relax! You can listen to God's servants presenting His Word.
1) **Bishop Robert Solomon, Singapore** – 3 messages on DVD/MP3
2) **Mr. C.B. Samuel, New Delhi** – 3 messages on DVD/MP3
3) **Bishop C.V. Mathew, Kerala** – 3 messages on DVD/MP3
DVDs contain 3 messages are available for a contribution of Rs 200/- only. MP3s contain 6 messages in audio format for a contribution of Rs 100/-
Place your orders today along with the MO/DD drawn in favour of Indian Evangelical Mission to Outreach Cassettes
IEM, 38 Langford Road,Bangalore 50 025, Mobile : 09611985885
iemoutreachcassettes@gmail.com